# ಸಾಹಿತ್ಯ ದಾಸೋಹ – 233

ಸಂಚಿಕೆ 57 – ಫೆಬ್ರವರಿ 2025 11.01.2025ರ ದಾಸೋಹದ ಬರಹಗಳ ಸಂಕಲನ



ಸಾತ್ ಪಗೋಡ ದೇವಾಲಯ, ಮಹಾಬಲಿಪುರಂ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

# ಪುಟ ತೆರೆಯುವ ಮುನ್ನ...

## ನಮ್ಮ ಮಾತು

*ಆತ್ಮೀಯರೆ,*

**11ನೆಯ ಜನವರಿ 2025ರಂದು ಶ್ರೀಮತಿ ಟಿ.ಆರ್. ಉಷಾರಾಣಿಯವರ ಅಧ್ಯಕ್ಷತೆಯಲ್ಲಿ ನಡೆದ 233ನೆಯ ಸಾಹಿತ್ಯ ದಾಸೋಹದಲ್ಲಿ ನಮ್ಮ 20 ಸದಸ್ಯರು ತಮ್ಮ ವಿವಿಧ ಬರಹಗಳನ್ನು ಪ್ರಸ್ತುತಪಡಿಸಿದ್ದು, ಆ ಎಲ್ಲಾ ಬರಹಗಳು, ಅಧ್ಯಕ್ಷೀಯ ಅನಿಸಿಕೆಗಳು, ಕವಿಮನ ಅಂಕಣದ ಐದು ಕವನಗಳು ಹಾಗೂ ನಮ್ಮ ವೇದಿಕೆಯ 'ತಿಂಗಳ ಬೆಳಕು' ಕಾರ್ಯಕ್ರಮದ 11ನೆಯ ಆವೃತ್ತಿಯಲ್ಲಿ 'ಆತ್ಮಬಲಕ್ಕೆ ಅಂಜದ ಅರ್ಬುದ' ವಿಷಯ ಕುರಿತು ಶ್ರೀಮತಿ ಗಾಯತ್ರಿ ಮೂರ್ತಿಯವರು ನೀಡಿದ ಉಪನ್ಯಾಸದ ವಿಸ್ತೃತ ವರದಿಯೂ ಈ ಸಂಚಿಕೆಯಲ್ಲಿದೆ.**

**ದಾಸೋಹದ ಅಧ್ಯಕ್ಷತೆ ವಹಿಸಿ ಎಲ್ಲ ಬರಹಗಳ ಬಗ್ಗೆಯೂ ತಮ್ಮ ಅನಿಸಿಕೆಗಳನ್ನು ನೀಡಿದ ಶ್ರೀಮತಿ ಟಿ.ಆರ್. ಉಷಾರಾಣಿಯವರಿಗೂ, ದಾಸೋಹದಲ್ಲಿ ತಮ್ಮ ಸ್ವರಚಿತ ಬರಹಗಳನ್ನು ಪ್ರಸ್ತುತಿಪಡಿಸಿದ ಎಲ್ಲ ಲೇಖಕರಿಗೂ ಮತ್ತು ನಮ್ಮ ತಾಂತ್ರಿಕ ತಂಡದ ಸದಸ್ಯರಿಗೂ ಧನ್ಯವಾದಗಳು.**

**ನಮ್ಮ ವೇದಿಕೆಯ ಹಿರಿಯ ಸದಸ್ಯರೂ, ನಾಡಿನ ಹಾಸ್ಯ ಸಾಹಿತಿಗಳೂ ಆದ ಶ್ರೀ ಎಂ.ಎಸ್.ನರಸಿಂಹ ಮೂರ್ತಿಯವರ 75ನೆಯ ಜನ್ಮದಿನದ ಸಂದರ್ಭದಲ್ಲಿ, ಅವರಿಗೆ ಅಭಿನಂದನಾಪೂರ್ವಕವಾಗಿ ವೇದಿಕೆಯ ಸದಸ್ಯರ ವೈವಿಧ್ಯಮಯ ಬರಹಗಳನ್ನೊಳಗೊಂಡ 'ಎಂಎಸ್ಎನ್ ನಗೆಹಾರ' ಎಂಬ ಪಿಡಿಎಫ್ ಸಂಚಿಕೆಯನ್ನು ಸಮರ್ಪಿಸಲಾಗಿತ್ತು. ನಮ್ಮ ಅಭಿಯಾನ, ಅಭಿಮಾನದ ಬಗ್ಗೆ ಕೃತಜ್ಞತೆ ಸಲ್ಲಿಸಿರುವ ಎಂಎಸ್ಎನ್‌ರವರು ಈ ಸಂಚಿಕೆಯನ್ನು ಮುದ್ರಿತ ರೂಪದಲ್ಲಿ ಪ್ರಕಟಿಸುತ್ತಿದ್ದಾರೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.**

**ಸಂಚಾಲಕ ಸಮಿತಿ**
**ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ**
**ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ** 28.02.2025

# ದಾಸೋಹದ ಪುಟಗಳಲ್ಲಿ...



ಮುಖಚಿತ್ರ ; ಸಾತ್ ಪಗೋಡ ದೇವಾಲಯ, ಮಹಾಬಲಿಪುರಂ (ಚಿತ್ರ ಕೃಪೆ – ಅಂತರ್ಜಾಲ)

## ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
## ನೋಡಿಯೋ ಸಾಹಿತ್ಯ ವೇದಿಕೆ

# ಸಾಹಿತ್ಯ ದಾಸೋಹ – 233

**ಕಾರ್ಯಕ್ರಮ ವರದಿ: ರಾಧಿಕಾ ವಿ. ಗುಜ್ಜರ್**


11.01.2025ರ ಶನಿವಾರದಂದು ಮಧ್ಯಾಹ್ನ 3.38ಕ್ಕೆ ಸರಿಯಾಗಿ ಜನವರಿ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಗೂಗಲ್ ಮೀಟ್ ಅಂತರಜಾಲ ವೇದಿಕೆಯಲ್ಲಿ ಆರಂಭವಾಯಿತು. ಶ್ರೀಮತಿ ಟಿ.ಆರ್. ಉಷಾರಾಣಿಯವರು 233ನೆಯ ಸಾಹಿತ್ಯ ದಾಸೋಹದ ಅಧ್ಯಕ್ಷತೆ ವಹಿಸಿದ್ದರು.

ಸಭೆಯ ಸಾರಥ್ಯವಹಿಸಿದ್ದ ಶ್ರೀ ಕೆ.ಎನ್. ಮಹಾಬಲ ಅವರು ಔಪಚಾರಿಕ ಮಾತುಗಳೊಂದಿಗೆ ಸಭೆಗೆ ಚಾಲನೆ ನೀಡಿದರು.

ಶ್ರೀಮತಿ ಸರಸ್ವತಿ ನಟರಾಜ್ ಅವರು ಎಲ್ಲರನ್ನೂ ಸ್ವಾಗತಿಸಿ, ದಾಸೋಹದ ಅಧ್ಯಕ್ಷತೆ ವಹಿಸಿರುವ ಶ್ರೀಮತಿ ಟಿ.ಆರ್.ಉಷಾರಾಣಿ ಅವರನ್ನು ಪರಿಚಯಿಸಿದರು.

ಸಂಚಾಲಕ ಸಮಿತಿಯ ಪರವಾಗಿ ಶ್ರೀ ಬೆಂ.ಶ್ರೀ. ರವೀಂದ್ರ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿ,

- 2025ನೇ ಇಸವಿಯ ಮೊದಲನೆಯ ಸಾಹಿತ್ಯ ದಾಸೋಹದಲ್ಲಿ ಭಾಗವಹಿಸಿದ ಎಲ್ಲರಿಗೂ ಹೊಸ ವರ್ಷದ ಶುಭಹಾರೈಕೆಗಳನ್ನು ತಿಳಿಸಿ, ಸಮನ್ವಯ ಸಮಿತಿ ಮತ್ತು ಕನ್ನಡವೇ ಸತ್ಯ ವೇದಿಕೆಯು ಕಳೆದ ವರ್ಷ 'ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ'ವಾಗಿ ಹೊಸ ರೂಪ ತಳೆದಿದ್ದು, ತುಂಬ ಕ್ರಿಯಾಶೀಲವಾಗಿ ಮುನ್ನಡೆದಿದೆ ಎಂದು ಹರ್ಷ ವ್ಯಕ್ತಪಡಿಸಿದರಲ್ಲದೆ, ವೇದಿಕೆಯ ಚಟುವಟಿಕೆಗಳಿಗೆ ನಿರಂತರವಾಗಿ ಸ್ಪಂದಿಸುತ್ತಿರುವ ಎಲ್ಲ ಸದಸ್ಯರಿಗೂ ವಂದನೆಗಳನ್ನು ಸಲ್ಲಿಸಿದರು;
- ಇತ್ತೀಚೆಗೆ ಬಿಡುಗಡೆಯಾದ "ಕ–ಕಾರ ಕವನ'', "ಪಟ ಗಾಳಿಯಲಿ ತೇಲಿ" ಹಾಗೂ "ನಮ್ಮೊಳಗಿನ ಕಥೆಗಳು" ಪುಸ್ತಕಗಳ ಮುನ್ನುಡಿಯಲ್ಲಿ ಸಸಕಸ ವೇದಿಕೆಯನ್ನು ಸ್ಮರಿಸಿರುವುದು ಅತ್ಯಂತ ಸಂತೋಷದ ಹಾಗೂ ಹೆಮ್ಮೆಯ ಸಂಗತಿ ಎಂದರು;
- "ನಮ್ಮೊಳಗಿನ ಕಥೆಗಳು" ಕಥಾ ಸಂಕಲನದಲ್ಲಿ ಶ್ರೀ ಜಿ.ವಿ.ಅರುಣ ಅವರು ದಾಖಲಿಸಿರುವ ಮುನ್ನುಡಿಯು ವೇದಿಕೆಯ ಘನತೆಯನ್ನು ಎತ್ತಿ ಹಿಡಿದಿದ್ದು ಇದು ಸದಾ ದಾಖಲೆಯಾಗಿ ಸಾಹಿತ್ಯ ಲೋಕದಲ್ಲಿ ಉಳಿಯುತ್ತದೆ ಎಂದು ಹರ್ಷ ವ್ಯಕ್ತಪಡಿಸಿದರು;
- "ತುಂತುರು" ಕಥಾ ಸಂಕಲನದ ಕಥೆಗಳ ವಾಚನ ಕಾರ್ಯಕ್ರಮವಾದ "ತುಂತುರು ಪನ್ನೀರದಾನಿ"ಯು ಯಶಸ್ವಿ ಯಾಗಿ ನೆರವೇರಿದೆ ಎಂದು ತಿಳಿಸಿದರು.




ನಂತರ ದಾಸೋಹದಲ್ಲಿ ಲೇಖನಗಳನ್ನು ಪ್ರಸ್ತುತಪಡಿಸಲು ನೋಂದಾಯಿಸಿದ್ದ ವೇದಿಕೆಯ ಸದಸ್ಯರಿಂದ ಲೇಖನಗಳ ವಾಚನವು ಆರಂಭವಾಯಿತು. ಪ್ರಸ್ತುತಿಗಾಗಿ ನೋಂದಾಯಿಸಿದ್ದ ಎಲ್ಲ ಇಪ್ಪತ್ತು ಲೇಖಕರು ವಾಚಿಸಿದರು.

ಎಲ್ಲರ ಸ್ವರಚಿತ ಬರಹಗಳ ವಾಚನ ಮುಗಿದ ನಂತರ ದಾಸೋಹದ ಅಧ್ಯಕ್ಷರಾದ ಶ್ರೀಮತಿ ಟಿ.ಆರ್. ಉಷಾರಾಣಿ ಅವರು ಪ್ರಸ್ತುತಿಗಳ ಕುರಿತು ತಮ್ಮ ಅನಿಸಿಕೆಗಳನ್ನು ದಾಖಲಿಸಿದರು. ಕನ್ನಡ ಸಾಹಿತ್ಯಪ್ರೇಮದ ವಾತಾವರಣದಿಂದ ಹಾಗೂ ಬರಹಗಾರರಿಂದ ತುಂಬಿದ ಕುಟುಂಬದ ಸದಸ್ಯೆಯಾದ ಇವರ ಓದಿನ ಆಳ, ಪ್ರಸ್ತುತಿಗಳನ್ನು ಅರ್ಥೈಸಿಕೊಳ್ಳುವ ಸಾಮರ್ಥ್ಯ, ಅನಿಸಿಕೆಗಳನ್ನು ತಮ್ಮದೇ ಶೈಲಿಯಲ್ಲಿ ಸೌಮ್ಯ ನುಡಿಗಳೊಡನೆ ದಾಖಲಿಸಿದ ರೀತಿಯು ಅನನ್ಯ.

ಶ್ರೀ ಕೆ.ಎನ್.ಮಹಾಬಲ ಅವರು ವಂದನಾರ್ಪಣೆಯನ್ನು ಸಲ್ಲಿಸುವ ಮೂಲಕ ಜನವರಿ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಮುಕ್ತಾಯವಾಯಿತು.

ಸಾಹಿತ್ಯ ದಾಸೋಹದ ಸಾರಥ್ಯ : ಶ್ರೀ ಕೆ.ಎನ್.ಮಹಾಬಲ
ಜಿ ಮೀಟ್ ಆತಿಥ್ಯ : ಶ್ರೀಮತಿ ರಾಧಿಕಾ.ವಿ.ಗುಜ್ಜರ್
ವಿಡಿಯೋ ಸಂಸ್ಕರಣೆ : ಶ್ರೀ ಗುರುರಾಜ ಶಾಸ್ತ್ರಿ

233ನೇ ಸಾಹಿತ್ಯ ದಾಸೋಹದ ಸಂಪೂರ್ಣ ಕಾರ್ಯಕ್ರಮವನ್ನು ವೇದಿಕೆಯ ಯುಟ್ಯೂಬ್ ಹಾಗೂ ಜಾಲತಾಣದಲ್ಲಿ ವೀಕ್ಷಿಸಬಹುದು.

***


**ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ**
**ನೋಡಿಯೋ ಸಾಹಿತ್ಯ ವೇದಿಕೆ**

# ಸಮನ್ವಯ ಸಮಿತಿ ಜಾಲತಾಣ

**ನಮ್ಮ ಜಾಲತಾಣದಲ್ಲಿ (ವೆಬ್‌ಸೈಟ್) ವೀಕ್ಷಿಸಿ:**

- ಸಾಹಿತ್ಯ ದಾಸೋಹದ ಎಲ್ಲಾ ಸಂಚಿಕೆಗಳು
- ಸಾಹಿತ್ಯ ದಾಸೋಹದ ಯುಟ್ಯೂಬ್ ಕೊಂಡಿಗಳು
- ವೇದಿಕೆಯ ಇತರ ಕಾರ್ಯಕ್ರಮಗಳ ಯುಟ್ಯೂಬ್ ಕೊಂಡಿಗಳು
- ಧ್ವನಿ ಕಡತಗಳು
- ಛಾಯಾಚಿತ್ರಗಳು
- ಆಲಿಸಿ – ನಮ್ಮ ಸದಸ್ಯರು ಬರೆದ ಕತೆಗಳು ಇತ್ಯಾದಿ,,, ಇತ್ಯಾದಿ...

**ನಮ್ಮ ಜಾಲತಾಣ ಪ್ರವೇಶಿಸಲು ಈ ಕೊಂಡಿ ಬಳಸಿ: https://sahithyadasoha.com**

# ತಿಂಗಳ ಬೆಳಕು - 11

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

## "ಆತ್ಮಬಲಕ್ಕೆ ಅಂಜುವ ಅರ್ಬುದ.."

### ಉಪನ್ಯಾಸಕರು: ಶ್ರೀಮತಿ ಗಾಯತ್ರಿ ಮೂರ್ತಿ

ಕಾರ್ಯಕ್ರಮ ವರದಿ: ಹು.ವಾ. ಶ್ರೀಪ್ರಕಾಶ್

ದಿನಾಂಕ 25.01.2025ರಂದು ಶನಿವಾರ ಸಂಜೆ 5:00 ಗಂಟೆಗೆ ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ 11ನೆಯ 'ತಿಂಗಳ ಬೆಳಕು' ಕಾರ್ಯಕ್ರಮದಲ್ಲಿ ಶ್ರೀಮತಿ ಗಾಯತ್ರಿ ಮೂರ್ತಿ ಅವರಿಂದ 'ಆತ್ಮಬಲಕ್ಕೆ ಅಂಜುವ ಅರ್ಬುದ' ವಿಷಯವನ್ನು ಕುರಿತು ಉಪನ್ಯಾಸವನ್ನು ಆಯೋಜಿಸಲಾಗಿತ್ತು




ಕಾರ್ಯಕ್ರಮದ ಸಂಚಾಲಕ ಶ್ರೀ ರವಿ ಕುಸುಬಿ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶ್ರೀಮತಿ ಟಿ ಆರ್ ಉಷಾರಾಣಿ ಅವರು ಎಲ್ಲರನ್ನೂ ಸ್ವಾಗತಿಸಿ, ಉಪನ್ಯಾಸಕರಾದ ಶ್ರೀಮತಿ ಗಾಯತ್ರಿ ಮೂರ್ತಿ ಅವರನ್ನು ಪರಿಚಯಿಸಿದರು.

ಭೌತ ವಿಜ್ಞಾನದಲ್ಲಿ ಎಂಎಸ್ಸಿ ಪದವೀಧರೆಯಾಗಿರುವ ಶ್ರೀಮತಿ ಗಾಯತ್ರಿ ಮೂರ್ತಿಯವರು ಭೌತ ವಿಜ್ಞಾನದ ಅಧ್ಯಾಪಕಿಯಾಗಿ ಸುಮಾರು ಮೂವತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಆರಂಭದಲ್ಲಿ ಕನ್ನಡದಲ್ಲಿ ಕತೆ, ಕಾದಂಬರಿಗಳನ್ನು ಬರೆಯಲು ಆರಂಭಿಸಿದ ಇವರು, ಕ್ರಮೇಣ ಜನರಲ್ಲಿ ವೈಜ್ಞಾನಿಕ ವಿಷಯಗಳನ್ನು ಮನವರಿಕೆ ಮಾಡುವುದರ ಕಡೆ ಗಮನಹರಿಸಿದರು. ವಿಜ್ಞಾನ ವಿಷಯಗಳನ್ನು ಅತ್ಯಂತ ರೋಚಕವಾಗಿ, ಮನೋಜ್ಞವಾಗಿ ಮಕ್ಕಳಿಗೆ ತಿಳಿಸುವುದು ಅವರ ಬರವಣಿಗೆಯ ಕಲೆಗಾರಿಕೆ. 'ಮಕ್ಕಳಿಗಾಗಿ ಸರಳ ವಿಜ್ಞಾನ' ಮಾಲಿಕೆಯಲ್ಲಿ ಹಲವು ಪುಸ್ತಕಗಳನ್ನು ಪ್ರಕಟಿಸಿರುವ ಇವರು, ಆಕಾಶವಾಣಿಗಾಗಿ ವಿಜ್ಞಾನ ವಿಷಯಾಧಾರಿತ ನಾಟಕಗಳು, ದೂರದರ್ಶನಕ್ಕಾಗಿ 'ಎಳೆಯ ಮನಸ್ಸಿನ ಎಳೆಗಳು' ಸರಣಿ, ಭೌತ ವಿಜ್ಞಾನ ವಿಭಾಗದಲ್ಲಿ ಜ್ಞಾನ ವಿಜ್ಞಾನ ಕೋಶ ಹಾಗೂ ಹಲವು ಲಘು ಹಾಸ್ಯ ಬರಹಗಳ ಕೃತಿಗಳನ್ನು ಪ್ರಕಟಿಸಿದ್ದಾರೆ. ಅನೇಕ ವೈಜ್ಞಾನಿಕ ವಿಷಯಗಳನ್ನು ಕುರಿತ ಪುಸ್ತಕಗಳನ್ನೂ ಕನ್ನಡಕ್ಕೆ ಅನುವಾದಿಸಿದ್ದಾರೆ. ಇವರು ಸ್ವತಃ ಕ್ಯಾನ್ಸರ್ ಅನುಭವಿಸಿ, ದಿಟ್ಟ ಹೋರಾಟ ನಡೆಸಿ ಚೇತರಿಸಿಕೊಳ್ಳುತ್ತಿದ್ದಂತೆಯೇ ಬರೆದಂತಹ ಯಶೋಗಾಥೆ "ಅಂಜದಿರು ಮನವೇ", ಪ್ರತಿಯೊಬ್ಬರೂ ಓದಲೇಬೇಕಾದಂತಹ ಪುಸ್ತಕ. ಸಾಹಿತ್ಯಿಕ ಮತ್ತು ವೈಜ್ಞಾನಿಕ ಕ್ಷೇತ್ರದಲ್ಲಿ ಇವರ ಸಾಧನೆ. ಕೃತಿಗಳಿಗೆ ಹಲವು ಪ್ರತಿಷ್ಠಿತ ಪ್ರಶಸ್ತಿ, ಗೌರವಗಳಿಗೂ ಶ್ರೀಮತಿ ಗಾಯತ್ರಿ ಮೂರ್ತಿಯವರು ಭಾಜನರಾಗಿದ್ದಾರೆ ಎಂದು ಪರಿಚಯಿಸಿದ ಟಿ.ಆರ್. ಉಷಾರಾಣಿಯವರು, ಗಾಯತ್ರಿ ಮೂರ್ತಿಯವರನ್ನು ಕಾರ್ಯಕ್ರಮಕ್ಕೆ ಸ್ವಾಗತಿಸಿದರು.

ತಮ್ಮ ಉಪನ್ಯಾಸವನ್ನು ಆರಂಭಿಸಿದ ಶ್ರೀಮತಿ ಗಾಯತ್ರಿ ಮೂರ್ತಿಯವರು, ತಾವು ಸ್ವತಃ ಕ್ಯಾನ್ಸರ್ ಎಂಬ ಮಾರಕ ರೋಗವನ್ನು ಎದುರಿಸಿ, ಈಗ ಸಂಪೂರ್ಣ ಗುಣಮುಖಳಾಗಿದ್ದು, ಈ ಕಾಯಿಲೆಯ ಬಗ್ಗೆ ಜನರಲ್ಲಿ ಜಾಗೃತಿ ಮತ್ತು ಆತ್ಮವಿಶ್ವಾಸವನ್ನು ಹೆಚ್ಚಿಸುವ ಉದ್ದೇಶದಿಂದ 'ಅಂಜದಿರು ಮನವೇ' ಎಂಬ ಪುಸ್ತಕ ರಚಿಸಿದ್ದೇನೆ. ಎಷ್ಟೋ ಜನ ವಿದ್ಯಾವಂತರಿಗೆ ಕ್ಯಾನ್ಸರ್ ಬಗ್ಗೆ ಮಾಹಿತಿ ಇಲ್ಲ. ಗಂಟುಗಳು ಕಾಣಿಸಿಕೊಂಡರೂ ನೋವಿಲ್ಲ ಎಂದು ಉದಾಸೀನ ಮಾಡಿ ಕೊನೆಗೆ ತೊಂದರೆಗೆ ಸಿಕ್ಕಿಹಾಕಿಕೊಳ್ಳುತ್ತಾರೆ.

2016ರಲ್ಲಿ ನನಗೆ ತೀವ್ರ ಮಲಬದ್ಧತೆ ಆರಂಭವಾಯಿತು. ನಾನು ಇದನ್ನು ನಿರ್ಲಕ್ಷಿಸಿ ನೀರು ಕುಡಿಯುವುದು. ಸೌತೆಕಾಯಿ ತಿನ್ನುವುದು, ಟೊಮ್ಯಾಟೋ ಜ್ಯೂಸ್ ಮಾಡಿಕೊಳ್ಳುವುದು ಇತ್ಯಾದಿ ಸಣ್ಣಪುಟ್ಟ ಪರಿಹಾರ ಮಾಡಿಕೊಂಡು ಕಾಲ ಕಳೆದೆ. ತೂಕ ಇಳಿದಿರಲಿಲ್ಲ, ಭಾರೀ ಹಸಿವಾಗುತ್ತಿತ್ತು. ಆಮೇಲೆ ಇದ್ದಕ್ಕಿದ್ದಂತೆ ಮಲದಲ್ಲಿ ರಕ್ತ ಮತ್ತು ಸಿಂಬಳದ ರೀತಿ ಹೋಗಲು ಆರಂಭವಾಯಿತು. ಪದೇಪದೇ ಈ ಸಮಸ್ಯೆ ಆದಾಗ ಗಂಡನಿಗೆ ಹೇಳಿದೆ. ಸೊಸೆ ಮಣಿಪಾಲ ಆಸ್ಪತ್ರೆಯಲ್ಲಿ ಕೆಲಸ ಮಾಡಿದ್ದಳು ಅವಳು ತಕ್ಷಣ ಆಸ್ಪತ್ರೆಗೆ ಒಯ್ದಳು.

ಅಮೀಬಿಯಾಸಿಸ್ ಇರಬಹುದು ಎಂದು ಕೊಲಾನೋಸ್ಕೋಪಿ ಮಾಡಿದರು. ಪೈಪನ್ನು ಗುದದ್ವಾರದಲ್ಲಿ ಹಾಕಿ ಜಾಲಾಡಿದರು. ಗೆಡ್ಡೆಯು ಕೆಂಪಗೆ ಮತ್ತು ಮಧ್ಯಭಾಗದಲ್ಲಿ ಬೆಳ್ಳಗೆ ಕಾಣಿಸಿತು. ನಂತರ ಪೆಟ್ ಸ್ಕಾನ್ ಅಂದರೆ ಇಡೀ ಶರೀರವನ್ನು ಸ್ಕ್ಯಾನ್ ಮಾಡುತ್ತಾರೆ. ಬೇರೆ ಯಾವ ಭಾಗದಲ್ಲಿ ಕ್ಯಾನ್ಸರ್ ಕೋಶ ಇದೆ, ಯಾವ ಹಂತದಲ್ಲಿದೆ, ಎಷ್ಟು ಬೆಳೆದಿದೆ ಎಂಬುದೆಲ್ಲ ಇದರಿಂದ ಗೊತ್ತಾಗುತ್ತದೆ. ಅದಕ್ಕೆ ಹಿಂದಿನ ರಾತ್ರಿಯಿಂದ ನಾವು ಏನೂ ಆಹಾರ ತೆಗೆದುಕೊಳ್ಳುವಂತಿಲ್ಲ. ನನಗೆ ಕ್ಯಾನ್ಸರ್ ದೊಡ್ಡ ಕರುಳಿನ ಭಾಗದಲ್ಲಿ ಆಗಿತ್ತು. ಮೂರನೇ ಹಂತದಲ್ಲಿತ್ತು. ರೇಡಿಯೇಷನ್ ಥೆರಪಿ ತಗೊಳ್ಳಿ ಎಂದರು. ಏರ್‌ಪೋರ್ಟ್ ರೋಡಿನ ಮಣಿಪಾಲ ಆಸ್ಪತ್ರೆಯಲ್ಲಿ ರೇಡಿಯೋ ಸ್ಕೋಪಿ ಟ್ರೀಟ್ಮೆಂಟ್ ಆಯ್ತು. 'ಶುಗರ್, ಬಿ.ಪಿ ಇತ್ಯಾದಿ ಜೀವನವಿಡೀ ಇರುತ್ತದೆ. ಆದರೆ ಇದು ಒಂದು ವರ್ಷದಲ್ಲಿ ಗುಣವಾಗುತ್ತದೆ, ಹೆದರಬೇಡಿ' ಎಂದು ಡಾಕ್ಟರ್ ಧೈರ್ಯ ನೀಡಿದರು. ಪ್ರತಿ ಸೋಮವಾರದಿಂದ ಶುಕ್ರವಾರದವರೆಗೆ ಒಟ್ಟು 28 ಸೆಶನ್‌ಗಳಲ್ಲಿ ಈ ವಿಕಿರಣ ಚಿಕಿತ್ಸೆ ನಡೆಯಿತು. ಅದು ಕ್ಯಾನ್ಸರ್ ಗೆಡ್ಡೆ ಕೋಶಗಳನ್ನು ಸಾಯಿಸುತ್ತದೆ. ಎಕ್ಸ್ ಅಥವಾ ಗ್ಯಾಮಾ ರೇಸ್‌ಗಳನ್ನು ಉಪಯೋಗಿಸಿ ಶರೀರದಲ್ಲಿ ಕ್ಯಾನ್ಸರ್ ಆದ ಭಾಗಕ್ಕೆ ಫೋಕಸ್ ಮಾಡಿ ಎಲ್ಲಾ ಅಡ್ಜಸ್ಟ್ ಮಾಡಿ ಹೊರಗೆ ಹೋಗಿ ಮೆಷಿನ್ ಆನ್ ಮಾಡುತ್ತಾರೆ.

ನಂತರ ಎರಡು ಕಿಮೋ ಆಯ್ತು. ಸಮಸ್ಯೆ ಬಂದಾಗಿದೆ, ಇನ್ನು ಚಿಂತಿಸಿ ಫಲವಿಲ್ಲ ಅಂದುಕೊಂಡೆ. ಖಾಯಿಲೆ ಬಂದಾಗ, ಏಕಮುಖ ಚಿಂತನೆಯನ್ನು (ವರ್ಟಿಕಲ್ ಥಿಂಕಿಂಗ್) ಬಿಟ್ಟು ಸಮತಲ ಚಿಂತನೆಯನ್ನು (ಹಾರಿಜಾಂಟಲ್ ಥಿಂಕಿಂಗ್) ಬೆಳೆಸಿಕೊಳ್ಳಬೇಕು. ಆಗ ಆತ್ಮಹತ್ಯೆಯಂತಹ ಪ್ರಸಂಗಗಳು ನಿಂತುಹೋಗುತ್ತವೆ. ಎಲ್ಲ ಸಮಸ್ಯೆಗಳಿಗೂ ಪರಿಹಾರವಿದೆ ಎಂದುಕೊಳ್ಳಬೇಕು.

ಅತ್ಯುತ್ತಮ ಲೇಖಕಿ ಡಾಕ್ಟರ್ ನಿರೂಪಮಾ ಅವರಿಗೂ ಕೊನೆಯ ದಿನಗಳಲ್ಲಿ ಅವರನ್ನು ಕ್ಯಾನ್ಸರ್ ಕಾಡಿತ್ತು. ಆ ಸಮಯದಲ್ಲಿ ಅವರು ಧೈರ್ಯಗೆಡದೆ ಮಹಾಭಾರತದ ನಾಲ್ಕು ಸಂಪುಟಗಳನ್ನು ಬರೆದರು. ಹಾಗೆಯೇ ನೆನಪಾಗುವ ಮತ್ತೊಂದು ಹೆಸರು ಕ್ರಿಕೆಟ್‌ಪಟು ಯುವರಾಜ್ ಸಿಂಗ್‌ನದು. ಈತನಿಗೆ ಶ್ವಾಸಕೋಶಕ್ಕೆ ಕ್ಯಾನ್ಸರ್ ತಗುಲಿತು. ಕಿಮೋ ಮತ್ತು ಆಯುರ್ವೇದ ಚಿಕಿತ್ಸೆಯಿಂದ ಆತ ಗುಣಮುಖನಾದ. ಕ್ಯಾನ್ಸರ್ ಬಂದರೆ ಧನಾತ್ಮಕವಾಗಿ ಯೋಚಿಸಬೇಕು. ಸಾವು ಸನ್ನಿಹಿತ ಅಂದುಕೊಳ್ಳಬಾರದು. ಕಷ್ಟ ಬಂದಾಗ ಸೋತು ಶರಣಾಗದೆ ಧೈರ್ಯವಾಗಿ ಎದುರಿಸುವಂತಹ ಅಂತಃಶಕ್ತಿ ಬೆಳಸಿಕೊಳ್ಳುವುದು ಮುಖ್ಯ ಎನ್ನುತ್ತಾನೆ ಆತ.

ಆರ್ಥರ್ ಅಶೆ ಎಂಬ ಒಬ್ಬ ಆಫ್ರಿಕನ್ ವ್ಯಕ್ತಿ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾದಾಗ ಹೆಚ್‌ಐವಿ ಸೋಂಕು ಇರುವುದು ತಿಳಿಯಿತು. ನಿನಗೇಕೆ ಇಂಥ ಕಷ್ಟ ದೇವರು ಕೊಟ್ಟ ಎಂದು ಸಾವಿರಾರು ಪತ್ರಗಳು ಆತನಿಗೆ ಬಂದವು. ನಾನು ವಿಂಬಲ್ಡನ್ ಕಪ್ಪನ್ನು ಎತ್ತಿ ಹಿಡಿದಾಗ ದೇವರಿಗೆ ಪ್ರಶಸ್ತಿ ಏಕೆ ಕೊಟ್ಟೆ ಎಂದು ಕೇಳಲಿಲ್ಲ ಈಗ ಕಷ್ಟ ಬಂದಾಗ ಏಕೆ ಕಷ್ಟ ಕೊಟ್ಟೆ ಎಂದು ಕೇಳುವುದು ಸರಿಯಲ್ಲ. ಕಷ್ಟಗಳು ನಮ್ಮನ್ನು ಗಟ್ಟಿಗೊಳಿಸುತ್ತವೆ, ಸೋಲು ನಮ್ಮನ್ನು ವಿನಮ್ರವಾಗಿಸುತ್ತದೆ, ನಂಬಿಕೆ ಮತ್ತು ದೃಢ ಮನೋಭಾವ ನಮ್ಮನ್ನು ಮುನ್ನಡೆಸುತ್ತದೆ ಎನ್ನುತ್ತಾನೆ ಅರ್ಥರ್ ಅಶೆ.

ಕಿಮೋಥೆರಪಿಯಲ್ಲಿ ಕೂದಲು ಉದುರುತ್ತದೆ, ಕಾಲುಗಳು ಬೆರಳುಗಳಲ್ಲಿ ಜುಮ್ಮೆನ್ನಿಸುವ ನೋವು ಬರುತ್ತದೆ. ಕಿಮೋ ಆದಾಗ ತಣ್ಣೀರು ಒಂಥರಾ ಉಪ್ಪು ಅನಿಸುತ್ತದೆ. ಆಗ ಬಿಸಿ ನೀರು ಕುಡಿಯಬೇಕು. ನನಗೆ ಬೆಚ್ಚಗಿನ ಒಲೈವ್ ಆಯಿಲ್‌ನಲ್ಲಿ ಮಕ್ಕಳು

ಮಸಾಜ್ ಮಾಡುತ್ತಿದ್ದರು. ನಾನು ಪರ್ಯಾಯವಾಗಿ ಆಯುರ್ವೇದ ಚಿಕಿತ್ಸೆಯನ್ನೂ ಮಾಡುತ್ತಿದ್ದೆ ಎರಡೂ ಪದ್ಧತಿ ಸೇರಿ ಗುಣವಾಯಿತು ಅನ್ನಬಹುದು.

ನನ್ನಲ್ಲಿ 2016 ಸೆಪ್ಟೆಂಬರ್‌ನಲ್ಲಿ ಕಾಣಿಸಿಕೊಂಡ ಕ್ಯಾನ್ಸರ್ 2017 ಜನವರಿಯಲ್ಲಿ ವಾಸಿಯಾಯಿತು. ಅನೇಕ ದಿನಗಳ ಕಾಲ ಸ್ಪಾಂಜ್ ಬಾತ್‌ನಲ್ಲೇ ಇದ್ದೆ. ಖಾಯಿಲೆ ಗುಣವಾಗಿ ತಲೆಗೆ ನೀರು ಹಾಕಿಕೊಂಡು ದೇವರ ಮನೆ ಮುಂದೆ ಬಂದಾಗ ಜೋರಾಗಿ ಅತ್ತು ಬಿಟ್ಟೆ.

ಕ್ಯಾನ್ಸರ್ ಇಲ್ಲದಿದ್ದರೂ ಆ ಜಾಗ ದುರ್ಬಲವಾಗಿರುವುದರಿಂದ ಮತ್ತೆ ಕ್ಯಾನ್ಸರ್ ಕೋಶಗಳು ಬೆಳೆಯದಂತೆ ಸರ್ಜರಿ ಮಾಡುವುದು ಅಗತ್ಯ ಎಂದು ಸರ್ಜರಿ ಮಾಡಿದರು. ಕೆಲವರಿಗೆ ಗುದದ್ವಾರವನ್ನು ಮುಚ್ಚಿ ಎಡ ಭಾಗದಲ್ಲಿ ಚೀಲ ಹಾಕ ಬೇಕಾಗುತ್ತದೆ. ನನಗೆ ಅಂತಹ ಪ್ರಸಂಗ ಬರಲಿಲ್ಲ. ಸರ್ಜರಿಯಾಗಿ ನಂತರ ಮಲವಿಸರ್ಜನೆ ಸುಗಮವಾಗಿ ಆದಾಗ ಅಪಾರ ಸಂತೋಷವಾಯಿತು. ದೇಹದ ಪ್ರತಿಯೊಂದು ಅಂಗದ ಬೆಲೆ ಗೊತ್ತಾಗುವುದು ಹೀಗೆ ಕಾಯಿಲೆಗೊಳಗಾದಾಗಲೇ ಅನಿಸುತ್ತದೆ.

ಕುಟುಂಬದವರ ಅನನ್ಯ ಸಹಕಾರ ನನಗೆ ದೊರೆಯಿತು. ರೋಗಿಗೆ ಮನೆಯವರ ಬೆಂಬಲ, ಸಹಾನುಭೂತಿ ಬಹಳ ಮುಖ್ಯ. ಕಾಯಿಲೆಯನ್ನು ಗೆಲ್ಲಬೇಕೆಂಬ ಛಲಕ್ಕೆ ಮನೆಯವರ ಬೆಂಬಲ ಬೇಕೇಬೇಕು.

ಕ್ಯಾನ್ಸರ್ ಎಂದರೆ  ಅಸಹಜ ಕೋಶಗಳು (ಅನ್ಯಾಚುರಲ್ ಸೆಲ್ಸ್) ಬೆಳೆಯುವುದು. ಪ್ರತಿಯೊಂದು ಕೋಶದಲ್ಲಿಯೂ ನಿರ್ವಹಣಾ ವ್ಯವಸ್ಥೆ ಇರುತ್ತದೆ. ಗಾಯವಾದಾಗ ಅಲ್ಲಷ್ಟೇ ಚರ್ಮ ಬೆಳೆದು ಮುಚ್ಚಿಕೊಳ್ಳುತ್ತದೆ. ಕ್ಯಾನ್ಸರ್ ಕೋಶಗಳಿಗೆ ನಿಯಂತ್ರಣ ವ್ಯವಸ್ಥೆ ಇರುವುದಿಲ್ಲ. ಅವು ಗೆಡ್ಡೆಯಾಗಿ ಬೆಳೆದುಕೊಳ್ಳುತ್ತವೆ, ತೊಂದರೆಕೊಡುತ್ತವೆ. ಎಲ್ಲಿ ಬೇಕಾದರೂ ಅವು ಬೆಳೆಯಬಹುದು. ಪ್ಯಾಂಕ್ರಿಯಾಸ್ ಕ್ಯಾನ್ಸರ್ ಆದರೆ ಕೊನೆಯವರೆಗೂ ಗೊತ್ತಾಗುವುದಿಲ್ಲ. ಅನೇಕರು ದೇಹದಲ್ಲಿ ಗೆಡ್ಡೆ ಬೆಳೆದದ್ದು ಗೊತ್ತಾದರೂ ನೋವಿಲ್ಲ ಅಂತ ಸುಮ್ಮನಾಗಿರುತ್ತಾರೆ, ಒಡೆದು ರಕ್ತ ಬಂದಾಗ ಗಾಬರಿಯಾಗಿ ಹೋಗುತ್ತಾರೆ. ತೂಕ ಇಳಿಯುವುದು, ಪದೇ ಪದೇ ಜ್ವರ ಬರುವುದು, ಕೆಮ್ಮು ಹೋಗದೇ ಇರುವುದು, ಗಂಟಲು ಕಟ್ಟುಕೊಳ್ಳುವುದು ಇತ್ಯಾದಿ ಮುಖ್ಯಸೂಚನೆ ಬಂದಾಗ ಉದಾಸೀನ ಮಾಡದೆ, ಸಂಕೋಚಪಡದೆ ವೈದ್ಯರಿಗೆ ತೋರಿಸಬೇಕು.

ಒಮ್ಮೆ ವಿವೇಕಾನಂದರು ದುರ್ಗಾಪೂಜೆ ಮುಗಿಸಿಕೊಂಡು ಬರುವಾಗ ಮಂಗಗಳು ಅಟ್ಟಿಸಿಕೊಂಡು ಬಂದವಂತೆ. ತಕ್ಷಣ ಓಡತೊಡಗಿದ ಅವರು ತಕ್ಷಣ ಅಂತಃಸ್ಫೂರ್ತಿಯಿಂದ ತಿರುಗಿ ನಿಂತಾಗ ಕೋತಿಗಳೂ ನಿಂತವಂತೆ. ದುರುಗುಟ್ಟಿ ನೋಡಿದೊಡನೆ ಒಂದೊಂದಾಗಿ ಓಡಿ ಹೋದವಂತೆ. ಸಮಸ್ಯೆ ಬಂದಾಗ ಸವಾಲೊಡ್ಡಿ ನಿಂತರೆ ಖಂಡಿತ ಪರಿಹಾರ ಸಿಗುತ್ತದೆ ಎಂದು ಹೇಳಿ ಗಾಯತ್ರಿ ಮೂರ್ತಿಯವರು  ತಮ್ಮ ಉಪನ್ಯಾಸ ಮುಗಿಸಿದರು.

ನಂತರ ವೀಕ್ಷಕರೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು. ಕೊನೆಯಲ್ಲಿ ಶ್ರೀಮತಿ ರಾಧಿಕಾ ಗುಜ್ಜರ್‌ರವರು ಎಲ್ಲರಿಗೂ ವಂದನೆಗಳನ್ನು ಸಲ್ಲಿಸುವುದರೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಶ್ರೀಮತಿ ಗಾಯತ್ರಿ ಮೂರ್ತಿಯವರ ಉಪನ್ಯಾಸದ ಪೂರ್ಣಪಾಠವನ್ನು ನಮ್ಮ ವೇದಿಕೆಯ ಯುಟ್ಯೂಬ್ ಹಾಗೂ ಜಾಲತಾಣದಲ್ಲಿ ವೀಕ್ಷಿಸಬಹುದು.

***

# ಕವಿಮನ

## ನಿಸ್ವಾರ್ಥತೆ

ಬೀಜ ಮಣ್ಣಲಿ ಬಿತ್ತಿದನಾತ,
ಟಿಸಿಲೊಡೆಯುವುದ ನೋಡಲು ಕಾಯುತ,
ಬಿಸಿಲು ಮಳೆಗಳಿಂದ ರಕ್ಷಿಸಿದ ನಾಥ,
ಸಸಿಯ ಪಾಲಿಗೆ ಅವನೇ ಧಾತ.

ಚಳಿಗೆ ಎಲೆ ಉದುರಿದಾಗ ಕಣ್ಣೀರಿಟ್ಟ,
ಚೈತ್ರದಿ ಚಿಗುರು ಕಂಡಾಗ ಸಂತಸಪಟ್ಟ,
ಗಾಳಿ ಮಳೆಗೆ ಬಾಗದಿರಲು ಆಸರೆ ನೆಟ್ಟ,
ಅವನ ಶಕ್ತಿ ಮೀರಿ ಅದಕೆ ಆರೈಕೆ ಕೊಟ್ಟ.

ಬಂದಿತು ಒಂದು ಸುದಿನ,
ಬೆಳೆದು ಗಿಡವಾಯಿತು ಘನ,
ಹೂವು ಚಿಗುರಿತು ನೂತನ,
ಗಡಿಯ ದಾಟಿತು ಹರುಷ ಆತನ.

ಇನ್ನೊಬ್ಬ ಬಂದ ಕಂಡು ಗಿಡದ ಸೊಬಗ,
ಬೇಡಿದ "ಅದನ್ನು ನೀಡು ಎನಗ",
ಕೊಟ್ಟು ನಡೆದ ಧಾತನು ಆಗ,
"ಇದರ ಫಲ ಇನ್ನು ನಿನಗ".

ನೀರಿಲ್ಲ, ಗೊಬ್ಬರ ಹಾಕಿಲ್ಲ,
ಬೆಳೆಸಿದ ಬವಣೆ ಇವನಿಗಿಲ್ಲ,
ಭೋಗಿಸಿದ ಆದರೆ ಫಲವನೆಲ್ಲ,
ನಿಸ್ವಾರ್ಥಿ ಧಾತ ಏನೂ ಅಪೇಕ್ಷಿಸಲಿಲ್ಲ!

– ಸಿಂಧು ಹರಿಥಸ್
01.01.2025

## ಗುರುತು

ಕುಸಿಯುತ್ತಿರುವ ಯೌವನವ
ಮುಚ್ಚಲು
ತುಂಬ ಎಚ್ಚರವಹಿಸಿ
ಅಲಂಕರಿಸಿಕೊಂಡು
ಎಲ್ಲರ ಕಣ್ಣುಗಳ ಕೇಂದ್ರವಾಗಿ
ತುಸು ಬಿಂಕದಲ್ಲೇ
ನಡೆಯುವಾಗ

ಅವನು
ಹತ್ತಿರ ಬರುತ್ತಾನೆ
ಮಾಸದ ಮುಗುಳುನಗೆಯಲ್ಲಿ
ಅನ್ನುತ್ತಾನೆ –
'ಯಾಕಿಷ್ಟು ಒಂಟಿಯಾಗಿದ್ದೀ'

ಆಳ ಬಾವಿಗೆ
ಕಲ್ಲೆಸೆದಂತೆ ಗಲಿಬಿಲಿ
ಎದ್ದ ಬಾವಲಿಗಳು
ದಿಕ್ಕಾಪಾಲಾಗಿ ಹಾರಿ
ಎಲ್ಲೋ ತಲೆಕೆಳಗಾಗಿ ತೂಗುತ್ತವೆ

ಇಣುಕಿದರೆ –
ತಳದ ನೀರಲ್ಲಿ
ಕಂಡ ಬಿಂಬದ
ಗುರುತೇ ಹತ್ತುವುದಿಲ್ಲ

ಎದ್ದ ಅಲೆಗಳು
ಮರುಕಳಿಸುತ್ತ
ಮರುದನಿಸುತ್ತ

ಅವಳ ಕಣ್ಣಂಚಿನಲಿ
ತಡೆದು ನಿಂತ ಜಲಪಾತ
ಒಡಲಲ್ಲಿ ಕದಲಲು
ಕಾದಿರುವ ಚಿಟ್ಟೆ

ಕಾದಿವೆ.

– ಡಾ ಗೋವಿಂದ ಹೆಗಡೆ
15.01.2025

# ಕವಿಮನ

## 2025

ಸ್ವಾಗತಿಸು, ಬಿಡು
ಬಂದೇ ತೀರುತ್ತೇನೆ
ಎನ್ನುತ್ತದೆ "ಕಾಲ"
ನಿರಂತರ ಚಲನಶೀಲ

ಒಂದಷ್ಟು ಕುಣಿತ,
ಒಂದಷ್ಟು ಕುಡಿತ!
ಸಂಕಲ್ಪಗಳ ಪಾಡಿಗೆ ಸಂಕಲ್ಪವು
ಮತ್ತದೇ ದಾರಿಯಲಿ ನಾವು!

ದಶಂಬರ 31ರಿಂದ
ಒಂದು ಜನವರಿಗೆ
ಬರುವ ಹೊತ್ತಿಗೆ
ನಡೆಯಬೇಕು ಯಾವ
ಕರಾಮತ್ತು?
ಪ್ರಕೃತಿಗೆ ಎದುರುಬಿದ್ದು
ಬಹುದೂರ ಬಂದಿರುವ ಹೊತ್ತು!

ನಡೆದರೆ ಪವಾಡ!
ಮೂಡುವುದು
ಮೊಲಕ್ಕೆ ಕೋಡು!
ಮುಗಿಯದ ಕತೆ
ಮಾನವನ ಪಾಡು!

ಇನ್ನಷ್ಟು ವಾಸನೆಗೆ ಮೂಗು
ಚಾಚಿ, ಮತ್ತಷ್ಟು ಲಾಲಸೆಗಳು
ಸೇರಿ ಹಿಗ್ಗೀತು ಎದೆಗೂಡು!

ನಡೆಯಬಹುದೇ ನಾಯಕ
ಬಿದ್ದು, ಪುರಂದರ ಮೇಲೆದ್ದ
ಪವಾಡ ದೃಷ್ಟಾಂತಗಳು!

ಸಿಗಬಹುದೇ ಕುಚೇಲನಿಗೆ
ದೊರೆತಂಥ ಕರುಣಾಳುಗಳು

ಸತ್ಯಾನ್ವೇಷಣೆಗೆ ಮನೆಮಾರು ರಾಜ್ಯ,
ಅಧಿಕಾರ ತೊರೆದವರು ದೊರೆಯುವರೇ?

ಇವು ಸಿದ್ಧಿಸಲು ತಪ ಬೇಕು
ತಪಿಸಬೇಕು! ಒಂದಿಷ್ಟು ತ್ಯಾಗ,
ನಿಜ ಮನಗಳ ಹರಕೆ ಬೇಕು!

ಕುಣಿದು ಕುಡಿದು ಕುಪ್ಪಳಿಸಿ
2025ನು ಸ್ವಾಗತಿಸಿ ಸುಸ್ತಾದರು
ಅಂದೇ ಎಂದಿಲ್ಲದಷ್ಟು ಅಪರಾಧ,
ಅಪಘಾತಗಳ ಬಿತ್ತರಿಸುತಿತ್ತು
ಕಾದ ಸೀಸದ ಹಾಗೆ
ಕರ್ಣಗಳಿಗೆ ಸುದ್ದಿ, ಸಮಾಚಾರ!

ನಡೆಯಲಿ ಕಾಣದಿದ್ದರೂ,
ನುಡಿಯಲ್ಲಾದರೂ ಸ್ವರ್ಗ
ಕಾಣಿಸುವರಲ್ಲ ಸಾಕು!

ಆದರೂ ಬಿಟ್ಟು ಹೋಗದು
ಆಶಾವಾದ! ಎಲ್ಲಿಂದಲೋ
ಹೇಗೋ ಯಾವುದೋ ಭರವಸೆಯ ಬೆಳಕು...
ಆಶಾಕಿರಣವಾಗಿ ಬಂದೀತು!

ಪರಿತಪಿಸುತಿದೆ ಮನಗಳು
ಎದೆಯ ತಮ ನೀಗಲು
ಅನಘನೊಬ್ಬ ನಮ್ಮೆಡೆಗೆ ಬರುವನೆಂದು...
ಭುವಿಗೆ ಭವಿ ತರುವನೆಂದು!

– ಗಿರಿಜಾ ರಾಜ್
08.01.2025

# ಕವಿಮನ

## ಇರಬಹುದು ಇನ್ನೆಲ್ಲೊ

ಇರಬಹುದು ಇನ್ನೆಲ್ಲೊ
ಇದಕಿಂತ ಮೆರೆ ನೆಲವು
ಇದಕಿಂತ ಸಿರಿ ಸಲಿಲ
ಇದಕಿಂತ ಮೃದುಲ!

ಇರಬಹುದು ಇನ್ನೆಲ್ಲೊ
ಇದಕಿಂತ ಸೊಗತೇಜ
ಇದಕಿಂತ ತಿಳಿಗಾಳಿ
ಇದಕಿಂತ ಅಮಲ!

ಇರಬಹುದು ಇನ್ನೆಲ್ಲೊ
ಇದಕಿಂತ ಹೊಳೆ ಬಾನು
ಇದಕಿಂತ ಹಿರಿ ಗಗನ
ಇದಕಿಂತ ನೀಲ!

ಇರಬಹುದು ಇನ್ನೆಲ್ಲೊ
ಇದಕಿಂತ ಚಿರ-ಹಸಿರು
ಇದಕಿಂತ ಹಿತದುಸಿರು
ಇದಕಿಂತ ವಿಪುಲ!

ಇರಬಹುದು ಇನ್ನೆಲ್ಲೊ
ಮತ ಪಂಥ ಅತಿ ವಿರಳ
ಚೇತ ಚಿಂತನೆ ಅಕಲ
ಇಲ್ಲದೆಯೆ ಜಾಲ!

ಇರಬಹುದು ಇನ್ನೆಲ್ಲೊ
ಜೀವ ಭಾವವೆ ಸರಳ
ಸುಗಮ ಅನುಭವ ಧವಳ
ವಿಸ್ಮಯದ ಶಾಲ!

ಇರಬಹುದು ಇನ್ನೆಲ್ಲೊ
ಅರಿವಿನಾಚೆಗು ಪ್ರಬಲ
ಮಗುದೊಂದು ಗೋಲ
ಇದಕಿಂತ ಸಫಲ!

ಇರಬಹುದೆ ಅವಕಾಶ
ಮನಬಿಚ್ಚೆ ಆ ಮೂಲ
ಸಹಜ ಇರವಿನ ವರದ
"ಇನ್ನೆಲ್ಲೊ" ಕಾಲ!

– ಕೆ ಆರ್ ಎಸ್ ಮೂರ್ತಿ
29.01.2025

---

## ಕನಸು

ಕನಸು ಕಾಣಲು ಕಾಸು ಕೊಡಬೇಕಿಲ್ಲ
ಸೊಗಸಾದ ಕನಸನ್ನೆ ಕಾಣಬಹುದಲ್ಲ

ಹಗಲಾದರೇನು ಇರುಳಾದರೇನು
ಕನಸುಕಾಣಲು ಬಾರದೇನು

ಶ್ರಮಪಡಬೇಕಿಲ್ಲ ಕನಸಿಗೆ
ಮುದ ನೀಡುವುದು ಮನಸಿಗೆ

ನನಸು ಮಾಡಿದ್ದವರೂ ಕಂಡಿದ್ದರು ಕನಸು
ಪಟ್ಟಿದ್ದರು ಶ್ರಮ ಬಹಳಷ್ಟು

ನಿನ್ನೆಯವರೆಗೂ ಆದದ್ದೆಲ್ಲ ಕನಸೇ
ನಾಳೆಗೆ ಕಾಣುವುದೂ ಕನಸೇ

ಕನಸು ಕಾಣದವ ಜಗದಲಿಲ್ಲ
ಯಾರಪ್ಪಣೆಯೂ ಅದಕಿಲ್ಲ

ಕವಿಗಳೂ ಕಾಣುವರು ಕನಸು
ಜಗಕೆ ಸೃಷ್ಟಿಸುವರು ಸೊಗಸು

– ರಂಗೋಪಂತ್ ನರಸಿಂಗರಾವ್
22.01.2025

# ಸಾಂಗತ್ಯ

**- ಗಣಪತಿ ಹೆಗಡೆ**

ಯಾವುದೇ ಸಾಹಿತ್ಯ ಛಂದೋಬದ್ಧವಾಗಿಲ್ಲದಿದ್ದರೆ ಅದನ್ನು ಕವನ ಅಂತ ಗುರುತಿಸುವುದಿಲ್ಲ ವಿಮರ್ಶಕರು. ಕವನ ಅಥವಾ ಪದ್ಯವನ್ನು ರಚಿಸುವ ಶಾಸ್ತ್ರವೇ ಛಂದಶ್ಶಾಸ್ತ್ರ. ಕನ್ನಡದಲ್ಲಿ ಪ್ರಚಲಿತವಿರುವ ಪದ್ಯಜಾತಿಗಳು ಮೂರು ವಿಧ. ವರ್ಣವೃತ್ತ, ಮಾತ್ರಾವೃತ್ತ ಹಾಗೂ ಅಂಶವೃತ್ತ.

ಪದ್ಯಗಳಲ್ಲಿಯ ಸಾಲುಗಳನ್ನು (ಪದಗಳನ್ನು) ಅವಲಂಬಿಸಿ ದ್ವಿಪದಿ, ತ್ರಿಪದಿ, ಚತುಷ್ಪದಿ, ಪಂಚಪದಿ, ಷಟ್ಪದಿ ಹೀಗೆ ಕವನಗಳನ್ನು ವಿಭಾಗಿಸುವದು ಗೊತ್ತಿರುವ ವಿಷಯವೇ ಆಗಿದೆ. ಷಟ್ಪದಿಗಳು ಮಾತ್ರಾವೃತ್ತದಿಂದ ಹಾಗೂ ಶಾರ್ದೂಲವಿಕ್ರೀಡಿತದಂತಹ ಚತುಷ್ಪದಿಗಳು ವರ್ಣವೃತ್ತ (ಅಕ್ಷರವೃತ್ತ) ದಿಂದ ಕೂಡಿವೆ.

ಆದರೆ ಸಾಂಗತ್ಯ, ಅಂಶವೃತ್ತಗಳಿಂದ ಕೂಡಿದ ಪದ್ಯ. ಇದು ಭರತೇಶ ವೈಭವದಂತಹ ಕಾವ್ಯದ ಪದ್ಯಗಳೂ ಆಗಬಹುದು ಅಥವಾ ಹದಿಬದೆಯ ಧರ್ಮದ ಹಾಗೆ ಪದ್ಯಸಮುಚ್ಚಯವೂ ಆಗಬಹುದು.

ಅಂಶವೃತ್ತ ಎನ್ನುವದು ಒಂದು ವಿಶಿಷ್ಟವಾದ ಅಕ್ಷರ ಸಂಯೋಜನೆ. ಕನ್ನಡದಲ್ಲಿ ಮೂರು ಬಗೆಯ ಅಂಶೀಗಣಗಳಿವೆ.

ಬ್ರಹ್ಮಗಣದಲ್ಲಿ ಎರಡು, ವಿಷ್ಣುಗಣದಲ್ಲಿ ಮೂರು ಹಾಗೂ ರುದ್ರಗಣದಲ್ಲಿ ನಾಲ್ಕು ಅಂಶಗಳಿರುತ್ತವೆ. ಮೊದಲಿನ ಅಂಶ ಒಂದು ಗುರುಮಾತ್ರಾ ಅವಧಿಯದ್ದಾಗಿರಬೇಕು. (ಎರಡು ಲಘು ಅಥವಾ ಒಂದು ಗುರು ಅವಧಿಯದು).

ಬ್ರಹ್ಮ ಗಣ : ನನನ  ನಾನ  ಇತ್ಯಾದಿ.

ವಿಷ್ಣು ಗಣ: ನನನಾನ  ನಾನನ  ಇತ್ಯಾದಿ.

ರುದ್ರ ಗಣ: ನನನಾನಾನಾ  ನಾನನನ  ಇತ್ಯಾದಿ.

ಆದುದರಿಂದ ಬ್ರಹ್ಮಗಣದಲ್ಲಿ ಎರಡು ಅಥವಾ ಮೂರು, ವಿಷ್ಣುಗಣದಲ್ಲಿ ಮೂರು ಅಥವಾ ನಾಲ್ಕು, ರುದ್ರಗಣದಲ್ಲಿ ನಾಲ್ಕು ಅಥವಾ ಐದು ಅಕ್ಷರಗಳಾಗುತ್ತವೆ.

ಸ್ವಲ್ಪ ವಿಸ್ತಾರವಾಗಿ ಬರೆದರೆ,
ಅಂಶಗಣಗಳನ್ನು 'ತ್ರಿಮೂರ್ತಿ ಗಣಗಳು' ಎನ್ನುತ್ತಾರೆ. ಅಂದರೆ ಬ್ರಹ್ಮ, ವಿಷ್ಣು ಹಾಗೂ ರುದ್ರಗಣಗಳು. ಮೇಲ್ನೋಟಕ್ಕೆ ಇದು ಅಕ್ಷರಗಣಗಳ ಹಾಗೆ ಕಾಣಿಸಿದರೂ ಸ್ವಲ್ಪ ವ್ಯತ್ಯಾಸವಿದೆ. ಇಲ್ಲಿ ಶಬ್ದಗಳನ್ನು ಅಂಶಗಳಾಗಿ ವಿಂಗಡಿಸಲಾಗುತ್ತದೆ. ಶಬ್ದದ ಮೊದಲ 'ಅಂಶ' ಎರಡು ಮಾತ್ರೆಯದ್ದಾಗಿರಬೇಕು. ಅಂದರೆ ಒಂದು 'ಗುರು' ಅಕ್ಷರ ಅಥವಾ ಎರಡು ಲಘ್ವಕ್ಷರಗಳು. ಇದು ಮೊದಲಿನ 'ಅಂಶಕ್ಕೆ' ಮಾತ್ರ ಸೀಮಿತ. ಮುಂದಿನ 'ಅಂಶ'ಗಳು 'ಗುರು'ವಾದರೂ ಒಂದೇ ಅಕ್ಷರ, 'ಲಘು'ವಾದರೂ ಒಂದೇ ಅಕ್ಷರ.

ಸಾಂಗತ್ಯವು ನಾಲ್ಕು ಪಾದಗಳ ಪದ್ಯ. ಒಂದು, ಮೂರು ಹಾಗೂ ಎರಡು ನಾಲ್ಕು ಪಾದಗಳು ಒಂದೇ ಸಮನಾಗಿರುತ್ತವೆ. ಒಂದು ಹಾಗೂ ಮೂರನೇ ಪಾದಗಳಲ್ಲಿ ನಾಲ್ಕು ವಿಷ್ಣು ಗಣಗಳೂ, ಎರಡು ಹಾಗೂ ನಾಲ್ಕನೇ ಪಾದಗಳಲ್ಲಿ ಎರಡು ವಿಷ್ಣುಗಣಗಳು ಹಾಗೂ ಒಂದು ಬ್ರಹ್ಮಗಣವೂ ಇರುತ್ತದೆ. ಹೀಗೆ ಒಂದು ಪದ್ಯದಲ್ಲಿ ಹನ್ನೆರಡು ವಿಷ್ಣುಗಣಗಳೂ ಎರಡು ಬ್ರಹ್ಮಗಣಗಳೂ ಇರುತ್ತವೆ.

ಅದರ ವಿನ್ಯಾಸ ಹೀಗಿದೆ.

೧ನೇ ಸಾಲು- ವಿಷ್ಣು ।ವಿಷ್ಣು ।ವಿಷ್ಣು ।ವಿಷ್ಣು

೨ನೇ ಸಾಲು-ವಿಷ್ಣು ।ವಿಷ್ಣು ।ಬ್ರಹ್ಮ

೩ನೇ ಸಾಲು– ವಿಷ್ಣು ।ವಿಷ್ಣು ।ವಿಷ್ಣು ।ವಿಷ್ಣು

೪ನೇ ಸಾಲು–ವಿಷ್ಣು ।ವಿಷ್ಣು ।ಬ್ರಹ್ಮ

(ಇದು ಸಾಮಾನ್ಯ ನಿಯಮವೇ ಹೊರತು, ಷಟ್ಪದಿಗಳಲ್ಲಿಯ ಮಾತ್ರಾ ಛಂದಸ್ಸಿನ ಹಾಗೆ ಕಟ್ಟುನಿಟ್ಟಾದ ನಿಯಮವಲ್ಲ. ಎಷ್ಟೋ ಸಲ ಬ್ರಹ್ಮ, ವಿಷ್ಣು ಹಾಗೂ ರುದ್ರಗಣಗಳು ಅದಲು ಬದಲಾಗುವದೂ ಉಂಟು. ಮತ್ತು, ಗಣ ಹೊಂದಾಣಿಕೆಗಾಗಿ ಲಘುವಾಗಿ ಕಂಡುಬರುವ ಅಂಶದ ಮೊದಲ ಅಕ್ಷರವನ್ನು ಗುರುವಾಗಿ ಅಥವಾ ಗುರುವಾಗಿ ಕಂಡುಬರುವ ಮೊದಲ ಅಕ್ಷರವನ್ನು ಲಘುವಾಗಿ ಓದಿ ಹೊಂದಿಸಬೇಕು.)

ಹಳೆಗನ್ನಡದ ಕವಿಗಳ ಸಾಂಗತ್ಯಗಳಲ್ಲಿ ಆದಿಪ್ರಾಸ ಬಳಕೆ ಕಂಡುಬಂದರೂ ಇತ್ತೀಚಿನ ಕವಿಗಳು ಆದಿಪ್ರಾಸವನ್ನು ಬಳಸದೇ ಅಂತ್ಯಪ್ರಾಸಬಳಕೆ ಮಾಡಿರುವುದೂ ಇದೆ. ಮೊದಲ ಸಾಲು ನಾಲ್ಕು ವಿಷ್ಣು ಗಣಗಳಿರುತ್ತವೆ. ಎರಡನೇ ಸಾಲಿನಲ್ಲಿ ಎರಡು ವಿಷ್ಣು ಹಾಗೂ ಒಂದು ಬ್ರಹ್ಮಗಣವಿರುತ್ತದೆ.

ವಿ ವಿ ವಿ ವಿ
ಅಡಿಗಡಿ।ಗಗ್ರಜ।ರೆಲ್ಲರ।ಬೆಸಗೊಂಡು।
ವಿ ವಿ ಬ್ರ
ಮೃಡರಿಪು।ವಾಪುರ।ದಿಂದ।
ವಿ ವಿ ವಿ ವಿ
ಕಡುವೇಗ।ದಿಂದವ।ತೆರಳಿದ।ನಾರದ।
ವಿ ವಿ ಬ್ರ
ನೊಡನೆ ವಿ।ಮಾನವ।ನೇರಿ। (ಹಳಗನ್ನಡ).

ವಿ ವಿ ವಿ ವಿ
ಬಲಗೊಂಡ।ನುರೆ ಮೂರು। ಬಾರಿ ತ।ನ್ನೊಳು ತಾನು।
ವಿ ವಿ ಬ್ರ
ಗೆಲವೇರಿ। ಮುನಿಗಳೀ।ರ್ವರಿಗೆ॥
ವಿ ವಿ ವಿ ವಿ
ನಲಿದೆರ।ಗಿದನು ನಿ।ಧಾನದೆ।ಡೆಗೆ ದೀಪ।
ವಿ ವಿ ಬ್ರ
ಕಳಿಕೆ ತಾ।ನೆರಗುವಂ।ದದೊಳು॥ (ಭರತೇಶ ವೈಭವದಿಂದ)

ಕೆಳಗಿನ ಉದಾಹರಣೆ ನೋಡಿ.

ವಿ ವಿ ಬ್ರ ವಿ
ಕುವರನಾ।ದೊಡೆ ಬಂದ। ಗುಣವೇ।ನದರಿಂದೆ।
ವಿ ಬ್ರ ಬ್ರ
ಕುವರಿಯಾ।ದೊಡೆ ಕುಂ।ದೇನು।
ವಿ ಬ್ರ ಬ್ರ ವಿ
ಇವರೀರ್ವ।ರೊಳೇಟು।ಗೆವಡೆ।ದವರಿಂದೆ।
ವಿ ವಿ ಬ್ರ
ಸವನಿಪು।ದಿಹಪರ। ಸೌಖ್ಯ। (ಹದಿಬದೆಯ ಧರ್ಮ)

ಮೊದಲನೆಯ ಸಾಲಿನ ಮೂರನೆ ಅಂಶ ಹಾಗೂ ಮೂರನೇ ಸಾಲಿನ ಎರಡು ಹಾಗೂ ಮೂರನೇ ಅಂಶಗಳನ್ನು ಹಿಗ್ಗಿಸಿ ವಿಷ್ಣು ಗಣವನ್ನಾಗಿ ಮಾಡಬಹುದು ಅಥವಾ ಹಾಗೆಯೇ ಓದಿಕೊಳ್ಳಬಹುದು.

ವಿ ವಿ ವಿ ವಿ

ಕುವರನಾ। ದೊಡೆ ಬಂದ। ಗುಣವೇನ। ದSರಿಂದೆ।

ವಿ ವಿ ಬ್ರ

ಕುವರಿಯಾ। ದೊಡೆ ಕುಂ। ದೇನು।

ವಿ ವಿ ವಿ ವಿ

ಇವರೀರ್ವ ।ರೋಳೇಟು।ಗೇವಡೆ। ದವ ರಿಂದೆ।

ವಿ ವಿ ಬ್ರ

ಸವನಿಪು।ದಿಹಪರ ।ಸೌಖ್ಯ।

ಇನ್ನೊಂದು ರೀತಿಯಿಂದಲೂ ಸಾಂಗತ್ಯವನ್ನು ಗುರುತಿಸಬಹುದು.

ವಿ ವಿ ವಿ ವಿ

ಚರಣದಿ। ಪೊರಳುವ। ತರಳೆಯ। ಬಿಗಿದಪ್ಪಿ।

ವಿ ವಿ ಬ್ರ

ಕರುಣಾಳು। ನುಡಿದ ದ್ರೌ।ಪದಿಗೆ॥

ವಿ ವಿ ವಿ ವಿ

ಸಿರಿವಂತೆ। ದುಃಖಿಸ।ಬೇಡೇಳು। ತಾಯೆನಿ।

ವಿ ವಿ ಬ್ರ

ನ್ನಿರವೇನು। ಪೇಳು ಪೇ।ಳೆನಗೆ॥

ಅಂಶಗಳು ಅವೇ ರೀತಿಯವಾಗಿದ್ದು ಮಾತ್ರೆಗಳು ಬದಲಾಗುವದನ್ನು ಈ ಕೆಳಗಿನಂತೆ ಕಾಣಬಹುದು.

ವಿ ವಿ ವಿ ವಿ

ಚರಣSದೀ। ಪೊರಳೂವS। ತರಳೆSಯ। ಬಿಗಿದಪ್ಪೀ।

ವಿ ವಿ ಬ್ರ

ಕರುಣಾಳೂ। ನುಡಿದಾ ದ್ರೌ।ಪದಿಗೇ॥

ವಿ ವಿ ವಿ ವಿ

ಸಿರಿವಂತೇ। ದುಃಖೀಸ।ಬೇಡೇಳೂ। ತಾಯೇನಿ।

ವಿ ವಿ ಬ್ರ

ನ್ನಿರವೇನೂ। ಪೇಳೂ ಪೇ।ಳೆನಗೆ॥

ಗಣಗಳಲ್ಲಿಯ, 'ಅಂಶ'ಗಳ ಮಾತ್ರೆಗಳ ಬದಲಾವಣೆಯಿಂದಾಗಿ ಸ್ವರಮಾಧುರ್ಯಕ್ಕೆ ಅನುಕೂಲವಾಗುತ್ತದೆ ಎನ್ನುವದರಿಂದ ಈ ರೀತಿ ಹೇಳಬಹುದು.

ಹೊಸಗನ್ನಡ ಪದ್ಯಕ್ಕೆ ಉದಾಹರಣೆ– ಎಸ್.ವಿ.ಪರಮೇಶ್ವರಭಟ್ಟರ "ಇಂದ್ರಚಾಪ" ಕೃತಿಯ ಪದ್ಯ.

ವಿ ವಿ ವಿ ವಿ

ಬಂಗಾರ।ದಂತಹ। ನಾ ಕೊಟ್ಟ ।ದಿನವನು ।

ವಿ ವಿ ಬ್ರ

ನೀ ಮಣ್ಣು ।ಮಾಡಿದೆ।ಯೆಂದು।

ವಿ ವಿ ವಿ ವಿ

ಕೆಂಪನೆ। ಮುಖಮಾಡಿ। ನನ್ನನೆ ।ನೋಳ್ವನು।

ವಿ ವಿ ಬ್ರ

ದಿನಪನು। ತಾ ಪೋಗು।ವಂದು।

ಹೊಸಗನ್ನಡ ಪದ್ಯಗಳಲ್ಲಿ ಆದಿಪ್ರಾಸ ಕಂಡುಬರುವುದಿಲ್ಲ. ಆದರೆ ಅಂತ್ಯಪ್ರಾಸವನ್ನು ಕಾಣಬಹುದು.

ಸಾಂಗತ್ಯದ ರೂಪವನ್ನು ಈ ಕೆಳಗಿನಂತೆ ಗುರುತಿಸಬಹುದು.

೧. ಸಾಂಗತ್ಯದಲ್ಲಿ ನಾಲ್ಕು ಸಾಲುಗಳಿರುತ್ತವೆ.
೨. ಮೊದಲಿನ ಎರಡು ಹಾಗೂ ಕೊನೆಯ ಎರಡು ಸಾಲುಗಳು ಸಮನಾಗಿರುತ್ತವೆ.
೩. ಒಂದು, ಮೂರು ಹಾಗೂ ಎರಡು, ನಾಲ್ಕು ಸಾಲುಗಳು ಒಂದೇ ಸಮನಾಗಿರುತ್ತವೆ.
೪. ಒಂದನೇ ಹಾಗೂ ಮೂರನೇ ಸಾಲಿನಲ್ಲಿ ನಾಲ್ಕು ವಿಷ್ಣುಗಣಗಳು ಹಾಗೂ ಎರಡನೇ ಹಾಗೂ ನಾಲ್ಕನೇ ಸಾಲಿನಲ್ಲಿ ಎರಡು ವಿಷ್ಣುಗಣಗಳು ಹಾಗೂ ಒಂದು ಬ್ರಹ್ಮಗಣ ಇರುತ್ತವೆ.
೫. ಹಳಗನ್ನಡ ಸಾಂಗತ್ಯದಲ್ಲಿ ಆದಿ ಪ್ರಾಸವಿದ್ದರೂ ಹೊಸಗನ್ನಡದಲ್ಲಿ ಈ ಆದಿಪ್ರಾಸ ಇಲ್ಲದೆ, ಅಂತ್ಯಪ್ರಾಸ ಇರುವುದನ್ನು ಗಮನಿಸಬಹುದು.
೬. ಅಂಶಗಳಲ್ಲಿಯ ಅಕ್ಷರಗಳ ಮಾತ್ರೆಗಳನ್ನು ಹಿಗ್ಗಿಸಿ ಅಥವಾ ಕುಗ್ಗಿಸಿ, ಪದ್ಯದ ಗೇಯತೆಗೆ ಅನುಕೂಲವಾಗಿ ಬದಲಾಯಿಸಿ ಕೊಳ್ಳಬಹುದು.

***

# ನಯವಂಚನೆ

**- ಪೂರ್ಣಿಮ ಭಗವಾನ್**

"ಬನ್ನಿ ಸರ್ ಕುಳಿತುಕೊಳ್ಳಿ" ಎನ್ನುವ ಆಹ್ವಾನ ಕೇಳಿ ಶ್ರೀಹರಿಗೆ ತಾನು ಹೋಗಬೇಕಿದ್ದ ಜಾಗಕ್ಕೆ ಬಂದಿದ್ದೇನೋ ಅಥವಾ ಬೇರೆಲ್ಲಾದರೂ ಬಂದಿದ್ದೇನೆಯೋ ಎಂದು ಒಂದು ಕ್ಷಣ ಅನುಮಾನವಾಯಿತು. ಸುತ್ತ ತಿರುಗಿ ನೋಡಿದರು. ನಂತರ ತಾನು ಸರಿಯಾದ ಜಾಗಕ್ಕೇ ಬಂದಿದ್ದೇನೆ ಎಂದು ಮತ್ತೊಮ್ಮೆ ಖಚಿತಪಡಿಸಿಕೊಂಡು ಸಮಾಧಾನದ ನಿಟ್ಟುಸಿರು ಎಳೆದರು. ಶ್ರೀಹರಿ ಪ್ರತಿಬಾರಿ ಅಲ್ಲಿಗೆ ಹೋದಾಗಲೂ ಅಲ್ಲಿನ ಯಾರಾದರೊಬ್ಬರು ಸಿಬ್ಬಂದಿ, "ಯಾಕೆ ಸರ್, ಇಷ್ಟು ದೂರ ಬರುತ್ತೀರಾ ಮನೆಯಲ್ಲಿಯೇ ಕುಳಿತುಕೊಂಡು ನಿಮ್ಮ ವ್ಯವಹಾರ ಮಾಡಿಕೊಳ್ಳಬಹುದು. ಸುಮ್ಮನೆ ಇಲ್ಲಿ ಬಂದು ನಮಗೇಕೆ ತೊಂದರೆ ಕೊಡ್ತೀರಾ, ನಮ್ಮ ಸಮಯ ಹಾಳು ಮಾಡ್ತೀರಾ" ಎಂದು ಹೇಳುತ್ತಿದ್ದರು. ಶ್ರೀಹರಿ ತಮ್ಮ ಉದ್ಯೋಗದಿಂದ ನಿವೃತ್ತರಾಗಿ ಸುಮಾರು ಹತ್ತು ವರ್ಷಗಳಾಗಿದ್ದವು. ಅವರು ಅಷ್ಟೇನೂ ಕಲಿತವರಾಗಿರಲಿಲ್ಲ. ಆದರೂ ತಮ್ಮ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದ ಸರಳ, ಸೀದಾ ಸಾದಾ ವ್ಯಕ್ತಿ.

"ಏನ್ಸಾರ್ ಹೀಗಂತೀರಾ, ಗ್ರಾಹಕರ ಸೇವೆಯೇ ದೇವರ ಸೇವೆ, ಗ್ರಾಹಕರಿಂದ ನಾವು" ಎಂದು ನಿಮ್ಮ ಎಲ್ಲಾ ಕಚೇರಿಗಳಲ್ಲೂ ದೊಡ್ಡದೊಂದು ಬೋರ್ಡ್ ಹಾಕಿರುತ್ತಾ ಇದ್ದರು. ಈಗ ಅದೆಲ್ಲಾ ಮರೆಯಾಗಿದೆ" ಎಂದು ನಗುನಗುತ್ತ ಉತ್ತರಿಸುತ್ತಿದ್ದರು.

ತಮ್ಮ ಉಳಿತಾಯದ ಹಣ ಮತ್ತು ತಾವು ನಿವೃತ್ತರಾದಾಗ ಪಡೆದ ಮೊತ್ತ ಎಲ್ಲವನ್ನೂ ರಾಷ್ಟ್ರೀಕೃತ ಬ್ಯಾಂಕೊಂದರಲ್ಲಿ ಠೇವಣಿ ಇಟ್ಟಿದ್ದರು. ತಿಂಗಳಿಗೊಮ್ಮೆ ಪಿಂಚಣಿ ಮತ್ತು ಬಡ್ಡಿಯನ್ನು ತೆಗೆದುಕೊಳ್ಳಲು ಚೆಕ್ ತೆಗೆದುಕೊಂಡು ಬ್ಯಾಂಕಿಗೆ ಹೋಗುತ್ತಿದ್ದರು. ಎಟಿಎಂ ಕಾರ್ಡ್ ಎಲ್ಲಾದರೂ ಇಟ್ಟು ಮರೆತುಹೋದರೆ, ಅಥವಾ ಬೇರೆ ಯಾರ ಕೈಗಾದರೂ ಸಿಕ್ಕಿದರೆ ತೊಂದರೆ ಆಗುತ್ತದೆ ಎಂಬುದು ಅವರ ಅನಿಸಿಕೆ. ಆರ್ಥಿಕವಾಗಿ ಬಹಳ ತೊಂದರೆ ಅನುಭವಿಸಿ, ಕಷ್ಟಪಟ್ಟು ವಿದ್ಯಾಭ್ಯಾಸ ಮಾಡಿ, ಉದ್ಯೋಗಕ್ಕೆ ಸೇರಿದ್ದರು. ಅವರು ಯಾವುದನ್ನೂ, ಯಾರನ್ನೂ ಅಷ್ಟು ಸುಲಭವಾಗಿ ನಂಬುತ್ತಿರಲಿಲ್ಲ.

ಶ್ರೀಹರಿಯವರು ಅನಾರೋಗ್ಯದ ನಿಮಿತ್ತ ತಮ್ಮ ಮನೆಯ ಹತ್ತಿರ ಇದ್ದ ಕಚೇರಿಗೆ ಕಳೆದ ತಿಂಗಳು ತಮ್ಮ ಜೀವನ ಪ್ರಮಾಣ ಪತ್ರವನ್ನು ಕೊಡಲು ಹೋದಾಗ "ನಿಮ್ಮ ಪಿಂಚಣಿ ಖಾತೆ ಎಲ್ಲಿದೆಯೋ ಅಲ್ಲಿಯೇ ಹೋಗಿ ಕೊಡಬೇಕು, ಬೆಳಿಗ್ಗೆಯಿಂದ ನಿಮ್ಮಂತಹವರೇ ಹತ್ತಾರು ಜನ ಬಂದು ಹೋದರು, ನಮಗೆ ಬೇರೆ ಕೆಲಸ ಇದೆ ಇಲ್ಲಿ" ಎಂದು ನಿಷ್ಠುರವಾಗಿ ಹೇಳಿ ಕಳುಹಿಸಿದ್ದರು ಅಲ್ಲಿಯ ಸಂಬಂಧಪಟ್ಟ ವ್ಯಕ್ತಿ. ಮಿಕ್ಕವರೆಲ್ಲರೂ ಕಂಡೂ ಕಾಣದಂತೆ, ತಮಗೇನೂ ಸಂಬಂಧವೇ ಇಲ್ಲದಂತೆ ತಮ್ಮ ತಮ್ಮ ಕಾರ್ಯದಲ್ಲಿ ನಿರತರಾಗಿದ್ದರು. ಶ್ರೀಹರಿಯವರೂ ತಮ್ಮ ಪಕ್ಕದ ಮನೆಯ ಹುಡುಗನ ಸಹಾಯ ತೆಗೆದುಕೊಂಡು ಆನ್‌ಲೈನಲ್ಲಿ ಮಾಡಲು ಯತ್ನಿಸಿ ಸೋತು, ಜೀವನ ಪ್ರಮಾಣಪತ್ರ ಸಲ್ಲಿಸಲು ಕೇವಲ ನಾಲ್ಕು ದಿನ ಇದೆಯೆಂದು ಬ್ಯಾಂಕಿಗೆ ಹೋಗಿದ್ದರು.

ಅಂತಹದ್ದರಲ್ಲಿ ಇಂದೇನು, ಕರೆದು ಕೂರಿಸುತ್ತಿದ್ದಾರೆ. "ಇಂದು ಯಾವಕಡೆ ಮಳೆ ಬರುತ್ತದೆಯೋ" ಎಂದುಕೊಂಡೇ ಕೂರುವುದೋ ಬೇಡವೋ ಎಂದು ಅನುಮಾನಿಸುತ್ತಲೇ ಕುಳಿತರು. ತಮ್ಮ ಗೆಳೆಯನ ಸಲಹೆಯಂತೆ ದೂರು ನೀಡಿದ್ದರ ಪ್ರಭಾವವಿರಬಹುದೇ ಎಂದೂ ಅನ್ನಿಸಿತು.

ನಿಗದಿತ ಠೇವಣಿಗೆ ಬಡ್ಡಿಯ ದರ ವಿಚಾರಿಸಿದಾಗ, "ನಿಮ್ಮ ಹಣಕ್ಕೆ ವಾರ್ಷಿಕ ಶೇಕಡಾ ೧೫ ಬಡ್ಡಿ ಬರುತ್ತದೆ, ಈಗ ಒಂದು ಹೊಸ ಸ್ಕೀಮ್ ಬಂದಿದೆಯೆಂದು ಹೇಳಿದರು. ಕನಿಷ್ಠ ಐದು ವರ್ಷಗಳ ಕಾಲ ಪ್ರತಿವರ್ಷ ಒಂದು ನಿಗದಿತ ಮೊತ್ತವನ್ನು ಠೇವಣಿ ಮಾಡಿದರೆ ಆರನೇ ವರ್ಷದಿಂದಲೇ ನಿಮಗೆ ಆದಾಯ ಬರಲು ಪ್ರಾರಂಭವಾಗುತ್ತದೆ. ಆದರೆ ನಿಮಗೆ ಅರವತ್ತು ವಯಸ್ಸು ದಾಟಿರುವುದರಿಂದ ಠೇವಣಿಯನ್ನು ನಿಮ್ಮ ಹೆಸರಿನಲ್ಲಿ ಮಾಡಲು ಆಗುವುದಿಲ್ಲ. ನಿಮ್ಮ ಮಕ್ಕಳ ಹೆಸರಿನಲ್ಲಿ

ಮಾಡಬಹುದು. ನಾವು ಎಲ್ಲರಿಗೂ ಅದನ್ನೇ ಸೂಚಿಸುತ್ತಾ ಇದ್ದೇವೆ" ಎಂದು ಹೇಳಿದರು. ಮಗ ಮತ್ತು ತಮ್ಮ ಹೆಸರಿನಲ್ಲಿ ಜಂಟಿ ಖಾತೆ ತೆರೆಯಬೇಕು ಎಂದು ಹೇಳಿ, ಇಬ್ಬರ ಫೋಟೋ, ಪಾನ್ ಕಾರ್ಡ್, ಆಧಾರ್ ಕಾರ್ಡ್, ಪಾಸ್ಪೋರ್ಟ್ ಕಾಪಿ, ಮಗನಿಗೆ ಫೋನ್ ಮಾಡಿ ಅವನ ಆದಾಯಪತ್ರ ತರಿಸಿಕೊಂಡು ಬೇಕಾದ ಎಲ್ಲ ದಾಖಲೆಗಳನ್ನೂ ಒದಗಿಸಿದರು. "ಏನಪ್ಪಾ, ನೀವೇನಾದರೂ ಸಾಲದ ಅರ್ಜಿ ಸಲ್ಲಿಸುತ್ತಾ ಇದ್ದೀರಾ ಹೇಗೆ, ನನ್ನ ಕಚೇರಿಯ ವಿಳಾಸ, ಸಂಬಳದ ಚೀಟಿ ಯಾಕೆ ಬೇಕು" ಎಂದು ಕೇಳಿ ಮಗ ಒಲ್ಲದ ಮನಸ್ಸಿನಿಂದಲೇ ಅದನ್ನೆಲ್ಲಾ ಕಳುಹಿಸಿದ್ದನು. ಸುಮಾರು ಎರಡು ಗಂಟೆಗಳ ಕಾಲ ಅಲ್ಲಿಯೇ ಇದ್ದರು. ಮನೆಗೆ ಹೋಗಿ ಮತ್ತೆ ಬರುತ್ತೇನೆ ಎಂದರೂ ಬಿಡದೆ ಅಲ್ಲಿಯೇ ಚಹಾ ತರಿಸಿಕೊಟ್ಟರು. "ಯಾಕೇ, ನಾನು ಮನೆಗೆ ಹೋದರೆ ನನ್ನ ಮನಸ್ಸು ಬದಲಾಯಿಸಿ ಬಿಡಬಹುದೆಂದು ನಿಮಗೆ ಭಯವೇ" ಎಂದು ಕಿರಿ ವಯಸ್ಸಿನ ಉತ್ತರ ಭಾರತದ ಆಫೀಸರ್‌ನನ್ನು ರೇಗಿಸಿದರು. ಅವನೂ ನಗುನಗುತ್ತ ಶ್ರೀಹರಿಯವರ ಪ್ರಶ್ನೆಗಳಿಗೆ ತಾನು ಕಲಿತಿದ್ದ ಅರ್ಧಂಬರ್ಧ ಕನ್ನಡದಲ್ಲಿ ಉತ್ತರಿಸುತ್ತಿದ್ದನು. ಅದೇನನ್ನಿಸಿತೋ ಏನೋ ಎಲ್ಲದಕ್ಕೂ ರುಜು ಮಾಡುವ ಮೊದಲು "ನನಗೆ ಬೇಕಾದಾಗ ಹಣ ತೆಗೆಯಬಹುದೇ, ಠೇವಣಿಯ ಮೇಲೆ ಸಾಲ ಪಡೆಯಬಹುದೇ" ಎಂದು ಕೇಳಿದರು. ನಿಮ್ಮ ಹಣ ಐದು ವರ್ಷಗಳ ನಂತರ ಮಾತ್ರ ತೆಗೆಯಬಹುದು, ನಿಮ್ಮ ಮಗನಿಗೆ ಕೊಡುತ್ತೇವೆ" ಎಂಬ ಉತ್ತರ ಕೇಳಿ ಇಂತಹ ಇಳಿವಯಸ್ಸಿನಲ್ಲಿ ನನಗಿಷ್ಟ ಬಂದಂತೆ ಸಾತ್ವಿಕ ಜೀವನ ನಡೆಸದೆ ನನ್ನ ಮಕ್ಕಳಿಗೆ ಬಿಟ್ಟು ಹೋಗಲು ಉಳಿತಾಯ ಮಾಡಬೇಕೇಕೆ ಎನ್ನುವ ಚಿಂತನೆ ಶ್ರೀಹರಿಯ ಮನದಲ್ಲಿ ಸುಳಿಯಿತು. ಎಲ್ಲಾ ಫಾರಂಗಳನ್ನೂ ವ್ಯಾಪಾರ ಅಭಿವೃದ್ಧಿ ಅಧಿಕಾರಿಯೇ ಭರ್ತಿ ಮಾಡಿದ್ದರು. ಮಧ್ಯದಲ್ಲಿ ಯಾವುದೋ ಕರೆ ಬಂದಿತೆಂದು ಎದ್ದು ಹೋದಾಗ ಶ್ರೀಹರಿಯವರು ನಾಮನಿರ್ದೇಶನ ಮಾಡುವ ಸಲುವಾಗಿ ಅರ್ಜಿಯನ್ನು ತೆಗೆದುಕೊಂಡು ಭರ್ತಿಮಾಡಿ, ನನ್ನ ಸೊಸೆಯ ವಿವರಗಳೂ, ದಾಖಲೆಗಳೂ ಬೇಕೇ ಎಂದು ಕೇಳಿದರು. ಆ ಅಧಿಕಾರಿ "ಬೇಡ, ನಾಮನಿರ್ದೇಶನ ನಿಮ್ಮ ಹೆಸರಿಗೇ ಮಾಡುತ್ತೇನೆ" ಎಂದಾಗ ತಾನೆಂತಹ ವಂಚನೆಯ ಜಾಲದಲ್ಲಿ ಸಿಲುಕಿ ಹಾಕಿಕೊಳ್ಳುತ್ತಿದ್ದೆ, ಸದ್ಯ, ಯಾರೋ ಪುಣ್ಯಾತ್ಮ ಅಧಿಕಾರಿಗೆ ಕರೆ ಮಾಡಿ ನನ್ನ ಪಾಲಿನ ದೇವರಾದರು ಎಂದು ಆತನಿಗೆ ಮನದಲ್ಲೇ ವಂದಿಸಿದರು. ತಮ್ಮ ಅರ್ಜಿ ತೆಗೆದುಕೊಂಡು "ಮತ್ತೆ ಬರುತ್ತೇನೆ" ಎಂದು ಹಿಂತಿರುಗಿದರು. ನನ್ನ ಉಳಿತಾಯದ ಹಣ ನನ್ನ ಕಷ್ಟಕ್ಕೆ ಆಗದಿದ್ದರೆ ಹೇಗೆ, ಮುಂದೆ ಹೇಗೋ, ಎಂತೋ ಎನ್ನಿಸಿತ್ತು ಅವರಿಗೆ

ಇತ್ತೀಚಿಗೆ ಎಲ್ಲಿ ನೋಡಿದರೂ ಸೈಬರ್ ಕ್ರೈಂ ವಿಷಯ. ಗೊತ್ತಿಲ್ಲದೇ ಇರುವ ಯಾವುದೇ ಲಿಂಕ್ಗಳನ್ನು ತೆರೆಯಬೇಡಿ. https :/ ಎಂದು ಇರುವುದು ಮಾತ್ರ ಸುರಕ್ಷಿತ. ಕೇವಲ http:/ ಇದ್ದರೆ ಅದನ್ನು ನೋಡಲು ಹೋಗಬೇಡಿ. ಆನ್‌ಲೈನಲ್ಲಿ ಬರುವ ರಿಯಾಯಿತಿಗಳಿಗೆ ಮಾರುಹೋಗಬೇಡಿ, ಮತ್ತಷ್ಟು ಜಾಗೃತಿ ವಹಿಸಿ. ಯಾವುದೇ ಅನಾಮಧೇಯ ಕರೆ ಬಂದರೂ ಸ್ವೀಕರಿಸಬೇಡಿ, ಯಾವುದೇ ಕಾರಣಕ್ಕೂ ನಿಮ್ಮ ವೈಯಕ್ತಿಕ ವಿಷಯಗಳನ್ನು ಇತರರ ಮುಂದೆ ಹೇಳಬೇಡಿ, ಓ.ಟಿ.ಪಿ ಹಂಚಿಕೊಳ್ಳಬೇಡಿ, ನಿಮ್ಮ ಹಣ ಒಂದೇ ಕ್ಷಣದಲ್ಲಿ ಮಾಯವಾಗಿ ಹೋಗುತ್ತದೆ ಎನ್ನುವುದರ ಜೊತೆಗೆ ಇನ್ನು ಮುಂದೆ ಬೇರೆಯವರ ಮಾತಿಗೆ ಮರುಳಾಗಿ ನಿಮ್ಮ ಹಣವನ್ನು ಗೊತ್ತಿಲ್ಲದೇ ಇರುವ ಡಿಪಾಸಿಟ್ ಸ್ಕೀಂಗಳಲ್ಲಿ ತೊಡಗಿಸಬೇಡಿ, ಸಂಪೂರ್ಣ ವಿವರಗಳನ್ನು ಪಡೆದು, ಒಂದಿಬ್ಬರು ಹಿತೈಷಿಗಳೊಂದಿಗೆ ಚರ್ಚಿಸಿ ನಿರ್ಧಾರ ಮಾಡಿರಿ ಎನ್ನುವುದನ್ನೂ ಸೇರಿಸಬೇಕು ಎಂದುಕೊಂಡರು.

ಎಲ್ಲಾದರೂ ಇರಿ, ಎಂತಾದರು ಇರಿ, ಎಲ್ಲದಕ್ಕೂ ಇಬ್ಬರು ಮೂವರ ಸಲಹೆ ಪಡೆದು ನಂತರ ನಿರ್ಧರಿಸುವುದು ಒಳ್ಳೆಯದು ಎಂದು ನಿರ್ಣಯಿಸಿ ಅದನ್ನು ತಮಗೆ ತಿಳಿದವರಿಗೂ ಹೇಳುತ್ತಿದ್ದರು, ಶ್ರೀಹರಿಯವರು.

***

# ವಸುದೈವ ಕುಟುಂಬಕಂ

**– ಸಿಂಧು ಹರಿಥಸ್**

ಈಗ ನಾವು ಹೊಸವರ್ಷ ೨೦೨೫ಕ್ಕೆ ಕಾಲಿಟ್ಟಿದ್ದೇವೆ. ಹೊಸ ವರ್ಷವನ್ನು ಸ್ವಾಗತಿಸಲು ಎಲ್ಲರೂ ತಮ್ಮದೇ ವಿಧಾನಗಳನ್ನು ಆಯ್ದುಕೊಳ್ಳುತ್ತಾರೆ. ಯುವಕರು ಸ್ನೇಹಕೂಟವನ್ನು ಆಯೋಜಿಸಿ, ಆಟ, ವಿನೋದ, ಹಾಡು ಇತ್ಯಾದಿಯ ನಂತರ ಮಧ್ಯರಾತ್ರಿ ಘಂಟೆ ೧೨ ಹೊಡೆದಾಕ್ಷಣ ಕೇಕ್ ಕತ್ತರಿಸಿ ಸಂಭ್ರಮಾಚಾರಿಸುತ್ತಾರೆ. ಇನ್ನಷ್ಟು ಜನ ಆರಾಮಾಗಿ ನಿದ್ರಿಸಿ, ಹಿಂದಿನ ವರ್ಷ ಮಲಗಿ ಈ ವರ್ಷ ಎದ್ದೆ ಎಂದು ಹಾಸ್ಯ ಮಾಡುತ್ತಾರೆ.

ಕೆಲವರು ಹೊಸವರ್ಷದ ಶುಭಾಶಯಗಳನ್ನು ಸಂತಸದಿಂದ ಸಾರಿದರೆ, ಕೆಲವರು ಹೊಸ "ಕ್ಯಾಲೆಂಡರ್" ವರ್ಷ ಎಂದು ಒತ್ತಿ ಹೇಳುತ್ತಾರೆ. ಮಿಕ್ಕವರು ತರ್ಕಕ್ಕೇ ಇಳಿಯುತ್ತಾರೆ. 'ಇದೆಲ್ಲಾ ಪಾಶ್ಚಾತ್ಯ ಸಂಸ್ಕೃತಿ. ಇದು ಹೊಸ ವರ್ಷ ಆಚರಿಸುವ ಸೂಕ್ತ ಸಮಯವಲ್ಲ. ಎಲೆಗಳು ಉದುರಿ, ಮರಗಿಡಗಳು ಬೋಡಾಗುವ ಕಾಲದಲ್ಲಿ ಎಂತಹ ಹೊಸತು' ಎನ್ನುವುದು ಅವರ ವಾದ. 'ನಮ್ಮ ಯುಗಾದಿಯಲ್ಲಿ ಮರಗಿಡಗಳಲ್ಲಿ ಎಲೆಗಳು ಚಿಗುರುತ್ತವೆ, ಹೂಗಳು ಅರಳುತ್ತವೆ, ಚಳಿ ಹೋಗಿ ಸೂರ್ಯನ ಕಿರಣಗಳು ಬೆಚ್ಚನೆಯ ವಾತಾವರಣವನ್ನು ಸೃಷ್ಟಿಸುತ್ತದೆ. ಎಲ್ಲೆಡೆ ನವಚೈತನ್ಯ ಮೆರೆಯುತ್ತದೆ' ಎಂದು ಘಂಟಾಘೋಷದಿಂದ ಉಲುಬುತ್ತಾರೆ.

ಹೀಗಿರುವಾಗ, ಕೆಲವು ವರ್ಷಗಳ ಹಿಂದೆ ಪ್ರಕಟವಾದ ಒಂದು ವರದಿ ನನ್ನ ಗಮನ ಸೆಳೆಯಿತು. ಇನ್‌ಸ್ಟಿಟ್ಯೂಟ್ ಫಾರ್ ಸೈಂಟಿಫಿಕ್ ರೀಸರ್ಚ್ ಫಾರ್ ವೇದಾಸ್ (I-SERVE) ಎಂಬ ಸಂಸ್ಥೆಯು ಪ್ಲಾನೆಟೋರಿಯಂ ಸಾಫ್ಟ್‌ವೇರ್ ಬಳಸಿ ಹಲವು ಪೌರಾಣಿಕ ಘಟನೆಗಳ ದಿನಾಂಕಗಳನ್ನು ಕಂಡುಹಿಡಿದಿದ್ದಾರೆ.

ವಾಲ್ಮೀಕಿ ರಾಮಾಯಣದಲ್ಲಿ ರಾಮನ ಜನ್ಮದ ವೇಳೆಯಲ್ಲಿದ್ದ ಗ್ರಹ, ನಕ್ಷತ್ರಗಳ ಸ್ಥಾನಗಳನ್ನು ಮಾನದಂಡವಾಗಿ ಇಟ್ಟುಕೊಂಡು ಸಾಫ್ಟ್‌ವೇರ್‌ನಲ್ಲಿ ಲೆಕ್ಕಾಚಾರ ಹಾಕಿದಾಗ ಈಗ ಬಳಸುವ ಗ್ರೇಗೋರಿಯನ್ ಕ್ಯಾಲೆಂಡರ್ ಪ್ರಕಾರ ದಿನಾಂಕ ತಿಳಿಯಿತು. ರಾಮನ ಜನ್ಮವು ಕ್ರಿಸ್ತಪೂರ್ವ ೫೧೧೪ನೇ ಇಸವಿ, ಜನವರಿ ೧೦ರಂದು ಆಗಿದ್ದು ಎನ್ನಲಾಗಿದೆ.

ನಾವು ಆಚರಿಸುವ ರಾಮನವಮಿಯು ಚೈತ್ರಮಾಸದ ನವಮಿಯಂದು, ಎಂದರೆ ಯುಗಾದಿಯ ನಂತರ ಒಂಬತ್ತನೇ ದಿನ. ನಮಗೆಲ್ಲ ತಿಳಿದಂತೆ, ಚಾಂದ್ರಮಾನ ತಿಥಿಗಳು ೨೪ ಗಂಟೆಗಳ ದಿನಕ್ಕಿಂತ ಕೊಂಚ ವ್ಯತ್ಯಾಸದಲ್ಲಿರುತ್ತದೆ. ಹಾಗಾಗಿ, ನವಮಿಯು ಎಂಟು, ಒಂಬತ್ತು ಹಾಗು ಹತ್ತು ದಿನಗಳಲ್ಲಿ ಯಾವಾಗಲಾದರೂ ಬರಬಹುದು. I-SERVE ಪ್ರಕಾರ ಜನವರಿ ೧೦ರಂದು ರಾಮ ಜನ್ಮವೆಂದರೆ, ಅಂದಿನಿಂದ ಆರಿಂದ ೧೦ ದಿನಗಳ ಹಿಂದೆ ಯುಗಾದಿಯಾಗಿತ್ತು. ಅಂದರೆ ಆ ವರುಷ ಚಾಂದ್ರಮಾನ ಯುಗಾದಿಯು ಜನವರಿ ೧ರಂದು ಆಗಿರಬಹುದಲ್ಲವೇ!

ಸುಮಾರು ೭೦೦೦ ವರ್ಷಗಳ ಹಿಂದೆ ನಮ್ಮ ಚಾಂದ್ರಮಾನ ಯುಗಾದಿಯು ಈಗ ಬಳಸುವ ಗ್ರೇಗೋರಿಯನ್ ಕ್ಯಾಲೆಂಡರಿನ ವರುಷ ಒಂದೇ ದಿನ ಎನ್ನುವುದು ಸತ್ಯವಾದರೆ, ಮುಂದೆ ಕೆಲವು ಸಾವಿರ ವರ್ಷಗಳ ನಂತರ ಮತ್ತೆ ಹೊಂದಬಹುದಲ್ಲವೇ! ಆಗ ಯಾರ ಪದ್ಧತಿಯೂ ಮೇಲಲ್ಲ, ಯಾರ ಸಂಪ್ರದಾಯವೂ ಕೀಳಲ್ಲ ಎಂದು ನಾವೆಲ್ಲರೂ ಅರಿಯಬಹುದೇನೋ!

ಇವೆಲ್ಲವನ್ನು ಗ್ರಹಿಸಿದ ಮೇಲೆ ಸ್ಮರಣೆಗೆ ಒಂದು ಸುಭಾಷಿತ ಬರುತ್ತದೆ.

"ಅಯಂ ನಿಜಃ ಪರೋ ವೇತಿ ಗಣನಾ ಲಘುಚೇತಸಾಮ್ ।
ಉದಾರಚರಿತಾನಾಂ ತು ವಸುದೈವ ಕುಟುಂಬಕಮ್ ॥"

***

# ಕರ್ಮಯೋಗಿ

– ಗೌರಿ ಭಟ್ಟ



ಸದಾ ಗಾಲಿಕುರ್ಚಿಗೆ ಅವಲಂಬಿತಳಾದ ಭಾರತೀಯ ಸ್ಟೇಟ್ ಬ್ಯಾಂಕ್ ಮಂಗಳೂರು ಶಾಖೆಯ ಸಿಬ್ಬಂದಿಗಳಿಗೆ ಆತ್ಮೀಯಳು ಹಾಗೂ ಗ್ರಾಹಕರಿಗೆ ಚಿರಪರಿಚಿತಳು ಅಶ್ವಿನಿ.

ಅಶ್ವಿನಿಯದು ಚುರುಕು ಕಣ್ಣು, ಸ್ಪಷ್ಟವಾದ ಆಕರ್ಷಕ ಮೆಲುದನಿ, ಬ್ಯಾಂಕಿನ ಯಾವುದೇ ವ್ಯವಹಾರಗಳನ್ನು ಸುಲಲಿತವಾಗಿ ನಿಭಾಯಿಸುವ ದೈವದತ್ತ ಛಾತಿ ಹೊಂದಿರುವ ಅಶ್ವಿನಿ ಎಲ್ಲರ ಅಚ್ಚುಮೆಚ್ಚಿನ ಮೆನೇಜರ್. ನನ್ನಿಷ್ಟದ ಕನ್ನಡವನ್ನು ಅರಳು ಹುರಿದಂತೆ ಮಾತನಾಡುವ ಅವಳು ಹಿಂದಿ, ಇಂಗ್ಲೀಷ್ ಹಾಗೂ ಮಲಯಾಳಂ ಚೆನ್ನಾಗಿ ಬಲ್ಲ, ತುಳು ಮಾತನಾಡುವ, ಕೂಡು ಕುಟುಂಬದ ಪರಿವಾರ ಬಂಟರ ಹುಡುಗಿ.

ತೆಳ್ಳಗೆ, ಬೆಳ್ಳಗೆ ನೋಡಲು ಸುಂದರವಾಗಿದ್ದ ಮಗಳಿಗೆ ಅಪ್ಪ ಅಮ್ಮ, ಅಶ್ವಿನಿ ಅಂತ ಹೆಸರಿಡುತ್ತಾರೆ. ನಕ್ಷತ್ರದಂತೆ ಮನೆಯವರ ಮನಗಳನ್ನು ಬೆಳಗುತ್ತಾಳೆ. ಶಾಲಾಪಾಠಗಳಲ್ಲಿ ಅಗ್ರಸ್ಥಾನದಲ್ಲಿದ್ದ ಅಶ್ವಿನಿ ಉತ್ತಮ ಆಟಗಾರ್ತಿಯೂ ಆಗಿದ್ದಳು. ಖೋಖೋ ಅವಳ ಮೆಚ್ಚಿನ ಆಟ ಆಗಿತ್ತು. ಓದಿನ ಜೊತೆಗೆ ಮನೆಕೆಲಸಗಳಲ್ಲಿ, ಕೊಟ್ಟಿಗೆಯಲ್ಲಿ ಹಿರಿಯರಿಗೆ ಸಹಾಯ ಮಾಡುತ್ತಿದ್ದಳು. ಮನೆತುಂಬಾ ಮಕ್ಕಳು ಹಾಗೂ ಶಾಲೆಯ ಸಹಪಾಠಿಗಳ ಜೊತೆಗೆ ಅವಳ ಬಾಲ್ಯ ಸ್ವರ್ಗದ ಬೀಡಾಗಿತ್ತು. ಓದಿನಲ್ಲಿ ಸದಾ ಮುಂದೆ ಇರುವ ಅಶ್ವಿನಿ ಪಿಯುಸಿಯಲ್ಲಿ ಒಳ್ಳೆಯ ಅಂಕಗಳನ್ನು ಪಡೆದುಕೊಂಡು ಮುಂದೆ ಬಿಎಸ್ಸಿಯಲ್ಲೂ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣಳಾದಳು. ಕನಸುಗಳನ್ನು ಕಂಡ ಕಣ್ಣುಗಳು ಅವುಗಳನ್ನು ನಿಜ ಮಾಡಿದವು.

ಅವಳ ಆಸೆಯಂತೆ ಎಂಎಸ್ಸಿಗೆ ಗಣಿತ ವಿಷಯದಲ್ಲಿ ಪ್ರವೇಶ ದೊರೆಯಿತು. ಆದರೆ ವಿಧಿಯ ಲೆಕ್ಕಾಚಾರ ಕಠೋರವಾಗಿತ್ತು. ಕಷ್ಟವನ್ನೇ ಕಾಣದ ಆರೋಗ್ಯದ ಚಿಲುಮೆಗೆ ಕ್ರಮೇಣ ಬಾಗಿಲು ದಾಟಲು, ಮೆಟ್ಟಿಲುಗಳನ್ನು ಹತ್ತಲು ಕಷ್ಟವಾಗತೊಡಗಿದವು. ಕೈಕಾಲುಗಳಲ್ಲಿ ನಿ:ಶ್ಯಕ್ತಿ ಕಾಣಿಸಿಕೊಂಡವು. ವೈದ್ಯರುಗಳಲ್ಲಿ ತೋರಿಸಲಾಗಿ ಅವರು ಕಾಸರಗೋಡಿನವರಲ್ಲಿ ಸಾಮಾನ್ಯವಾಗಿ ಕಾಡುವ ಎಂಡೋಸಲ್ಫಾನ್ ನಿಂದ ಉಂಟಾದ ಅಡ್ಡಪರಿಣಾಮ ಅಂತ ಹೇಳಿದರು. ದಿನಗಳೆದಂತೆ ಕೈ, ಕಾಲು, ತೊಡೆಯ ಮಾಂಸಖಂಡಗಳು ದುರ್ಬಲವಾಗುತ್ತಾ ಹೋದವು. ಮನೆಯವರಿಗೆ ಮನೆಯ ಮಗಳ ಮುಂದಿನ ದಾರಿ ಪ್ರಶ್ನಾರ್ಥಕವಾಗಿ ಕಂಡಿತು. ಮುಂದಿನ ದಾರಿಯಲ್ಲಿ ಬೆಳಕು ಕಾಣದಂತಾಯಿತು.

ಆಗ ಅಶ್ವಿನಿ ಧೃತಿಗೆಡದೆ ವಿಧಿಯಾಟದ ಸೋಲನ್ನು ಸವಾಲು ಅಂತ ಸ್ವೀಕರಿಸಿದಳು. ಬಾಗಿಲು ಮುಚ್ಚಿದರೆ ತೆರೆದಿರುವ ಕಿಟಕಿಯಿಂದ ಹೊರಬರಲು ನಿರ್ಧರಿಸಿದಳು. ತನ್ನ ಎಲ್ಲಾ ಋಣಾತ್ಮಕ ಚಿಂತನೆಗಳನ್ನು ಬದಿಗಿಟ್ಟು ಸಾಧನೆಯ ಬೆನ್ನೇರಿ ೨೦೧೦ರಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ ನಲ್ಲಿ ಕ್ಲಾರ್ಕ್ ಆಗಿ ಸೇರಿಕೊಂಡಳು. ತೃಪ್ತಿ ಆಗುವಷ್ಟು ಗ್ರಾಹಕರ ಸೇವೆ ಮಾಡುತ್ತಾ ಅದರಲ್ಲೂ ಹಿರಿಯ ನಾಗರಿಕರ ವಿನಮ್ರ ಚೇತನವಾಗಿ ಎಲ್ಲಾ ಗ್ರಾಹಕರ ಹಾಗೂ ಸಿಬ್ಬಂದಿಗಳ ಮನ ಗೆಲ್ಲುವಲ್ಲಿ ಸಫಲಳಾದಳು. ಬ್ಯಾಂಕಿನ ಎಲ್ಲಾ ಮಜಲುಗಳಲ್ಲಿ ಕೆಲಸಮಾಡಿ, ಎಲ್ಲಾ ಕೆಲಸಗಳನ್ನೂ ಕಲಿತುಕೊಂಡು ಬ್ಯಾಂಕಿಂಗ್ ಕ್ಷೇತ್ರದಲ್ಲಿ ಎನ್ಸೈಕ್ಲೋಪೀಡಿಯಾ ಅನ್ನಿಸಿಕೊಂಡಳು.

ಈ ಮಧ್ಯೆ ಅಶ್ವಿನಿಯ ಆರೋಗ್ಯ ದಿನದಿಂದ ದಿನಕ್ಕೆ ಹದಗೆಟ್ಟಿತು. ಮನೆಮದ್ದು, ಆಯುರ್ವೇದ, ಅಲೋಪತಿ ಔಷಧಿಗಳು ಸಹಾಯ ಮಾಡಲಿಲ್ಲ. ಮಾಸಖಂಡ, ನರಗಳಲ್ಲಿ ಶಕ್ತಿ ಕುಂಠಿತವಾಗುತ್ತಾ ಬಂತು. ಅವಳು IBM ಅಂದರೆ Inclusive Body Myositis (ಮಾಂಸಖಂಡಗಳು ದುರ್ಬಲಗೊಳ್ಳುವಿಕೆ) ಎನ್ನುವ ಅಪರೂಪದ ಖಾಯಿಲೆಯಿಂದ ನರಳುತ್ತಿದ್ದಾಳೆ ಅಂತ

ವೈದ್ಯರು ಖಚಿತ ಪಡಿಸಿದರು. ಆ ರೋಗಕ್ಕೆ ಯಾವುದೇ ನಿರ್ದಿಷ್ಟ ಚಿಕಿತ್ಸೆ ಇಲ್ಲ. ಪರಿಹಾರವಿಲ್ಲದ ಅವಳು ಉಪಶಮನಕ್ಕೆ ಪರಾವಲಂಬಿ ಆದಳು.

ಪೂರ್ತಿಯಾಗಿ ಬೇರೆಯವರನ್ನು ಅವಲಂಬಿಸಬೇಕಾಯಿತು. ಮೊದಮೊದಲು ಅಮ್ಮನ ಸಹಾಯ ತೆಗೆದುಕೊಳ್ಳುತ್ತಿದ್ದಳು. ಅಮ್ಮನಿಗೆ ವಯಸ್ಸಾದಂತೆ ಅಣ್ಣ ಅವಳ ಬೆನ್ನೆಲುಬಾಗಿ ನಿಂತಿದ್ದಾರೆ. "ಚಂದ್ರಣ್ಣ, ನೀವು ಅಶ್ವಿನಿಗೆ ದೇವರು ಕೊಟ್ಟ ಅಣ್ಣ" ಅಂತ ಹೇಳಿದರೆ, "ಹಾಗೇನಿಲ್ಲ ಮೇಡಂ, ಅವಳಿಗೆ ಒಳ್ಳೆಯದಾದರೆ ಸಾಕು" ಅಂತ ಹೇಳುವ ಸಹೃದಯಿ ಅಣ್ಣ. ತಂಗಿಯ ಏಳ್ಗೆಯಲ್ಲೇ ಖುಷಿಯನ್ನು ಕಾಣುವ ದೊಡ್ಡ ಮನಸ್ಸು. ಗಾಲಿ ಕುರ್ಚಿಯಲ್ಲಿ ಕುಳಿತುಕೊಳ್ಳಲು ಅಣ್ಣನ ಸಹಾಯ ಬೇಕು. ಊಟ, ತಿಂಡಿಗಳನ್ನು ತೆಗೆದುಕೊಳ್ಳಲು ಚಂದ್ರಣ್ಣ ಬೇಕು.

ಅವಳು ಆದಷ್ಟು ಸ್ವಾವಲಂಬಿ ಆಗಿರಲು ಬಯಸುತ್ತಾಳೆ. ಮೂತ್ರಕ್ಕೆ ಅವಸರ ಆಗುತ್ತದೆ ಎಂದು ನೀರನ್ನೇ ಕುಡಿಯುವುದಿಲ್ಲ. ಬಹುಶಃ ಅಶ್ವಿನಿ ತನ್ನ ಅಸಹಾಯಕತೆಯನ್ನು ಅಥವಾ ಸಿಟ್ಟನ್ನು ಪ್ರಕಟಿಸಿದರೆ ಅವಳನ್ನು ಅಷ್ಟು ಇಷ್ಟಪಡುತ್ತಿರಲಿಲ್ಲ. ಒಂದೊಂದು ಸಲ ಜೀವನವೇ ಸಾಕೆನಿಸುವ ಅವಳು ಯಾರಮುಂದೂ ತನ್ನ ದು:ಖ ತೋರಿಸಿಕೊಳ್ಳುವುದಿಲ್ಲ.ತ ನ್ನ ಅಸಹಾಯಕತೆಯನ್ನು ಎಂದೂ ಆಡಿಕೊಳ್ಳದ, ತೋರಿಸಿಕೊಳ್ಳದ ದಿಟ್ಟೆ.ಎಲ್ಲವನ್ನೂ ಸಾಧಿಸಿ ತೋರಿಸುವ ಛಲಗಾತಿ. ಯಾವಾಗಲೂ ಒಳ್ಳೆಯ ಉಡುಗೆ ತೊಡುವ ಆಕೆಯದು ಸದಾ ಮಂದಸ್ಮಿತ. ಕುಂದದ ಚೇತನ.

ಅಶ್ವಿನಿ ತನ್ಮಧ್ಯೆ ಸಿಎಐಐಬಿ ಪರೀಕ್ಷೆಗಳನ್ನೂ ಪಾಸು ಮಾಡುತ್ತಾಳೆ. ಅವಳು ರೋಗಕ್ಕೆ ಸೆಡ್ಡು ಹೊಡೆದು ಬದುಕುವುದನ್ನು ಕಲಿತಳು. ಬ್ಯಾಂಕಿನ ಕೆಲಸ ಮುಗಿಸಿ ಮನೆಗೆ ಹೋದಮೇಲೆ ಶಾಲಾಮಕ್ಕಳಿಗೆ ಪಾಠ ಹೇಳಿಕೊಟ್ಟು ಮಕ್ಕಳ ಮುದ್ದು 'ಮ್ಯಾಮ್' ಆಗುತ್ತಾಳೆ. ೨೦೧೭ರಲ್ಲಿ ಬ್ಯಾಂಕಿನಲ್ಲಿ ಅಧಿಕಾರಿಯಾಗಿ ಪದೋನ್ನತಿ ಹೊಂದಿದಳು. ಇಷ್ಟುದಿನ ಬೆಳಿಗ್ಗೆ ೧೦ ಗಂಟೆಯಿಂದ ಸಂಜೆ ೫ರವರೆಗೆ ಬ್ಯಾಂಕ್ ಕೆಲಸದಲ್ಲಿ ತೊಡಗಿಕೊಂಡ ಅಶ್ವಿನಿಗೆ ಅಧಿಕಾರಿ ಆದಮೇಲೆ ಸಮಯದ, ಜವಾಬ್ದಾರಿಯ ಪರಿಮಿತಿ ಇರಲಿಲ್ಲವಾಗಿ ಇದು ಒಂದು ಸವಾಲಾಗಿತ್ತು. ಬೆಳಿಗ್ಗೆ ಎಲ್ಲರಿಗಿಂತಲೂ ಮೊದಲು ೯ ಗಂಟೆಗೆ  ಅಣ್ಣನ ನೆರಳಲ್ಲಿ ಬ್ಯಾಂಕಿಗೆ ಬರುವ ಅಶ್ವಿನಿಗೆ ಮನೆಗೆ ಹೋಗಲು ಸಮಯದ ಮಿತಿ ಇರಲಿಲ್ಲ. ಕರ್ಮಯೋಗಿ ಅಶ್ವಿನಿ ಗ್ರಾಹಕರ ಸೇವೆಯಲ್ಲಿ ತೃಪ್ತಿ ಕಂಡುಕೊಂಡಳು. ಸಹೋದ್ಯೋಗಿಗಳು ಅವಳಿಗೆ ಸಾಥ್ ಕೊಡುತ್ತಿದ್ದರು. ಅನ್ನ ಕೊಡುವ ಬ್ಯಾಂಕಿನ ಸರ್ವತೋಮುಖ ಏಳ್ಗೆಗೆ ಕೆಲಸಮಾಡುವ ಮನೋಭಾವ ಹೊಂದಿರುವ ಈಕೆಗೆ ಮೇಲಿನ ಅಧಿಕಾರಿಗಳ ಪ್ರಶಂಸೆಯೂ ಸಿಕ್ಕಿತು. ಈಗ ಸ್ಕೇಲ್ ೨ ಪಾಸಾಗಿ ಇನ್ನೊಂದು ಬಡ್ತಿಗಾಗಿ ಕಾಯುತ್ತಿದ್ದಾಳೆ.

ನಾನು ಮಂಗಳೂರಿನ ಶಾಖೆಯಲ್ಲಿ ಅವಳೊಡನೆ ಕಳೆದ ಕ್ಷಣಗಳು ಜಿಲೇಬಿಯಂತೆ ಸಿಹಿಯಾಗಿದ್ದವು. ಈ ಅಪ್ರತಿಮ ಪ್ರತಿಭೆ ನನಗೆ ಕೇವಲ ಬರೀ ದಡ್ಡಿ ಅಲ್ಲ,  ಪ್ರೀತಿಯ ಧಡ್ಡಿ. ಈಗಲೂ ನನಗೆ ಅವಳೆಂದರೆ ಅಸಾಧ್ಯ ಪ್ರೀತಿ. ಅವಳ ಪರಿಶ್ರಮಕ್ಕೆ ಯಾರಾದರೂ ತಲೆ ದೂಗಲೇಬೇಕು. ಅವಳು ವೃತ್ತಿ ಜೀವನದಲ್ಲಿ ಇನ್ನೂ ಉತ್ತುಂಗಕ್ಕೆ ಏರಲಿ, ಅವಳ ಗ್ರಾಹಕ ಸೇವೆ ನಿರಂತರವಾಗಿ ಸಾಗಲಿ. ನಿಜಾರ್ಥದಲ್ಲಿ ವಿಶೇಷಚೇತನರಿಗೆ ಅಷ್ಟೇ ಅಲ್ಲದೇ ಎಲ್ಲರಿಗೂ ಮಾದರಿಯಾಗಿ ಬದುಕುತ್ತಿದ್ದಾಳೆ ಅಶ್ವಿನಿ.

ನನ್ನ ಧಡ್ಡಿ ಯಾವಾಗಲೂ ಅಶ್ವಿನಿ ನಕ್ಷತ್ರದಂತೆ ಹೊಳೆಯುತ್ತಿರಬೇಕು. ಪುತ್ತೂರಿನ ಮಹಾಲಿಂಗೇಶ್ವರ ದೇವರು ಅವಳ ಬಾಳನ್ನು ಸದಾ ಬೆಳಗುತ್ತಿರಲಿ.

***

# ರಾಜನನ್ನು ಹುಡುಕಿದ ರಾಜನ ಕತೆ

**– ವಿಠ್ಠಲ. ಇಜೇರಿ**

ಇದು ಸ್ವಾಮಿ ವಿವೇಕಾನಂದರು ಅದ್ವೈತ ತತ್ವವನ್ನು ಮನದಟ್ಟು ಮಾಡಲು ತಮ್ಮ ಶಿಷ್ಯರಿಗೆ, ಭಕ್ತರಿಗೆ ಹೇಳುತ್ತಿದ್ದ ಕತೆ. ತತ್ವಮಸಿ ಆ ಪರಬ್ರಹ್ಮ ವಸ್ತು ಸ್ವತಃ ನೀನೇ ಆಗಿರುವಿ ಎಂಬುದನ್ನು ಈ ಕತೆಯ ಮೂಲಕ ಹಾಸ್ಯಮಯವಾಗಿ ತಿಳಿಸಿ ಕೊಡುತ್ತಿದ್ದರು. ಹೊರಗೆಲ್ಲೋ ದೇವರಿದ್ದಾನೆ ಎಂದು ಹುಡುಕಬೇಡಿ, ಎಲ್ಲೆಲ್ಲಿಯೂ ಇರುವ ಅವನು ನಮ್ಮೊಳಗೇ ಇದ್ದಾನೆ. ನಮ್ಮೊಳಗಿರುವ ಚೈತನ್ಯವೇ ಅವನು. ನಾವೇ ಆ ಪರಬ್ರಹ್ಮವಸ್ತು ಎಂಬ ಅರಿವಾದರೆ ಹೊರಗಡೆಯ ಹುಚ್ಚು ಹುಡುಕಾಟ ತೊರೆದು ಸಂತೋಷದಲ್ಲಿ ಮುಳುಗುತ್ತೇವೆ. ಆತ್ಮರಾಮರಾಗುತ್ತೇವೆ. ಅದು ಉನ್ನತ ಮಟ್ಟದ ತತ್ವ ವಿಚಾರ. ಅದನ್ನು ಮನವರಿಕೆ ಮಾಡಿಕೊಡಲು ಒಬ್ಬ ಗುರು ಬೇಕು. ಅದನ್ನು ಒಂದು ದೃಷ್ಟಾಂತದ ಮೂಲಕ ವಿವೇಕಾನಂದರು ಹೇಳುತ್ತಿದ್ದರು.

ಆದಿತ್ಯಪುರಂವೆಂಬ ರಾಜ್ಯದಲ್ಲಿ ಒಬ್ಬ ಮತಿವಿಕಲನು ತನ್ನ ರಾಜ್ಯದ ಮಹಾರಾಜರನ್ನು ಕಾಣಬೇಕು ಎಂದು ಅಲ್ಲಿ ಇಲ್ಲಿ ಹುಡುಕುತ್ತ ಬೇರೆಬೇರೆ ಊರುಗಳಲ್ಲಿಯೂ ಅಲೆಯುತ್ತಿದ್ದನು. ಜನರು 'ರಾಜರು ತಮ್ಮ ಅರಮನೆಯಲ್ಲಿರುತ್ತಾರೆ, ಅವರೇಕೆ ಊರು ಊರು, ಮನೆ ಮನೆ ಅಲೆಯುತ್ತಾರೆ' ಎಂದು ಹೇಳುತ್ತಿದ್ದರು. ಆದರೆ ಆ ಮತಿವಿಕಲನಿಗೆ ಅದಾವುದೂ ಅರ್ಥವಾಗುತ್ತಿರಲಿಲ್ಲ. ಮತ್ತೆ ಮುಂದೆ ಬೇರೊಂದು ಊರಿಗೆ ಹೋಗಿ ಅಲ್ಲಿ "ಮಹಾರಾಜರು ನಿಮ್ಮೂರಿಗೆ ಬಂದಿದ್ದಾರಾ.., ನಾನು ಅವರನ್ನು ಕಾಣಬೇಕು" ಎನ್ನುತ್ತಿದ್ದನು. ಅಲ್ಲಿಯೂ ಅಷ್ಟೇ, "ಸ್ವಾಮಿ, ಮಹಾರಾಜರಿಗೆ ಬೇರೆ ಕೆಲಸವಿಲ್ಲವೇ, ಅವರೇಕೆ ನಮ್ಮಲ್ಲಿಗೆ ಬರುತ್ತಾರೆ ನಿಮಗೆಲ್ಲೊ ಹುಚ್ಚು" ಅನ್ನುತ್ತಿದ್ದರು. ಆ ವಿಕಲಮತಿ ಬೇರೆ ಬೇರೆ ಕಡೆ ತಿರುಗಾಡಿ ಮರಳಿ ತನ್ನ ಊರು ಆದಿತ್ಯಪುರಕ್ಕೆ ಬಂದು, ಅಲ್ಲಿಯೂ "ನಾನು ಮಹಾರಾಜರನ್ನು ಭೇಟಿ ಮಾಡಬೇಕು, ಅವರು ಇಲ್ಲಿಗೆ ಬಂದಿದ್ದಾರಾ?" ಎಂದು ವಿಚಾರಿಸಿದನು. ಅಲ್ಲಿಯ ಜನರೆಲ್ಲಾ, "ಎಲ್ಲಿಯ ಮಹಾರಾಜರು, ನಮ್ಮ ಮಹಾರಾಜರು ಅದೆಲ್ಲಿಗೋ ಹೊರಟು ಹೋಗಿದ್ದಾರಂತೆ ಮಂತ್ರಿಗಣವೆಲ್ಲ ಅವರನ್ನೇ ಹುಡುಕುತ್ತಿದ್ದಾರೆ" ಎಂದು ಹೇಳುತ್ತಿದ್ದರು. ಹೀಗೆ ಆದಿತ್ಯಪುರದಲ್ಲಿ ಸುತ್ತಾಡುವಾಗ ಒಬ್ಬ ಮಂತ್ರಿಗಳು ಎದುರಾದರು. ಅವರನ್ನೇ ಮತಿವಿಕಲನು "ನಾನು ಮಹಾರಾಜರನ್ನು ಕಾಣಬೇಕು, ಅವರು ಎಲ್ಲಿ?" ಎಂದು ಕೇಳಿದ. ಆ ಮತಿವಿಕಲ ಬೇರಾರೂ ಆಗಿರಲಿಲ್ಲ, ಆ ರಾಜ್ಯದ ರಾಜರಾಗಿದ್ದು ಯಾವುದೋ ಚಿತ್ತವಿಸ್ಮೃತಿಗೆ ತುತ್ತಾಗಿ, ತಮ್ಮನ್ನು ತಾವೇ ಮರೆತು ರಾಜರನ್ನು ಹುಡುಕಿಕೊಂಡು ಹೊರಟುಬಿಟ್ಟಿದ್ದರು. ಮಂತ್ರಿಗಳು ಮಹಾರಾಜರನ್ನು ಗುರುತಿಸಿ, ಇವರಿಗೆ ಸ್ಮೃತಿ ವಿಭ್ರಮೆಯಾಗಿದೆ ಎಂದು ಅರ್ಥವಾಗಿ, "ಸ್ವಾಮಿ, ನನ್ನೊಡನೆ ಬನ್ನಿ, ನನಗೆ ಮಹಾರಾಜರು ಗೊತ್ತು" ಎಂದು ಹೇಳಿ, ಅವರನ್ನು ಅರಮನೆಗೆ ಕರೆತಂದು ಅವರಿಗೆ ಸ್ನಾನ ಮಾಡಿಸಿ, ರಾಜರ ಉಡುಪು ತೊಡಿಸಿ, ಸಿಂಹಾಸನದ ಮೇಲೆ ಕೂಡಿಸಿದರು. ರಾಜಭಟರಿಂದ ಬಹುಪರಾಕು ಹೇಳಿಸಿ, ನೀವೇ ನಮ್ಮ ಮಹಾರಾಜರು ಎಂದು ಪುನಃ ಪುನಃ ಹೇಳಿ ಮನವರಿಕೆ ಮಾಡಿಕೊಟ್ಟರು. ಬೇರೆಯವರೆಲ್ಲರೂ ಮತ್ತೆ ಮತ್ತೆ ಜ್ಞಾಪಕ ಮಾಡಿಕೊಟ್ಟಾಗ ದೈವಾನುಗ್ರಹದಿಂದ ಮಹಾರಾಜರ ಸ್ಮೃತಿ ಮರಳಿ ನಾನೇ ಮಹಾರಾಜ ಎಂಬುದನ್ನು ಅರಿತರು.

ಒಬ್ಬನು ನಾಟಕದಲ್ಲಿ ಭಿಕ್ಷುಕನ ಪಾತ್ರ ವಹಿಸಿದ್ದನು, ಇನ್ನೊಬ್ಬನು ಭಿಕ್ಷೆ ಬೇಡುತ್ತ ಬೀದಿ ಬೀದಿ ಅಲೆಯುತ್ತಿದ್ದನು. ಹೊರನೋಟಕ್ಕೆ ಇಬ್ಬರೂ ಒಂದೇ ರೀತಿ ಕಾಣುತ್ತಾರೆ. ಮಾತುಕತೆ, ರೂಪ ಒಂದೇ. ಆದರೆ ನಾಟಕದ ಭಿಕ್ಷುಕ ಸಂತಸದಿಂದ ಇದ್ದರೆ, ನಿಜವಾದ ಭಿಕ್ಷು ದುಃಖದಲ್ಲಿರುತ್ತಾನೆ. ನಾಟಕದ ಭಿಕ್ಷುಕನಿಗೆ ತನ್ನ ವೃತ್ತಿ ಭಿಕ್ಷುಕ ವೃತ್ತಿಯಲ್ಲವೆಂಬುದು ತಿಳಿದಿದೆ. ಆದುದರಿಂದ ಸಂತೋಷದಿಂದ ಪಾತ್ರವಹಿಸುತ್ತಾನೆ. ನಿಜವಾದ ಭಿಕ್ಷುಕನಿಗೆ ಭಿಕ್ಷೆಯಲ್ಲಿ ದೊರೆತದ್ದರಿಂದಲೇ ಜೀವನ. ಆದುದರಿಂದ ಅವನು ಆತಂಕದಿಂದಲೇ ಜೀವಿಸುತ್ತಾನೆ. ಈ ಮೂಲಕ ಸ್ವಾಮಿ ವಿವೇಕಾನಂದರು ಎಲ್ಲಿಯವರೆಗೆ ಪಾತ್ರಧಾರಿಗೆ ನಾನು ಭಿಕ್ಷುಕನಲ್ಲ ಎಂಬ ಅರಿವಿರುತ್ತದೋ ಅಲ್ಲಿಯವರೆಗೆ ಸಂತಸದಿಂದಿರುತ್ತಾನೆ. ಯಾವಾಗ ನಮ್ಮ ಸಹಜ ಸ್ಥಿತಿಯ ಜ್ಞಾನವಿರುವುದಿಲ್ಲವೋ ಆಗ ದುಃಖದಲ್ಲಿರುತ್ತೇವೆ ಎಂದು ತಿಳಿಸುತ್ತಾರೆ. ಆತ್ಮಜ್ಞಾನದಿಂದ ನಮ್ಮನ್ನು ನಾವು ತಿಳಿದುಕೊಳ್ಳಲು ಸಾಧ್ಯ, ಮತ್ತು ನಾವು ಸುಖಿಗಳಾಗುತ್ತೇವೆ.

***

# ಬಾಲ್ಯ ವಿವಾಹ

– ಕೆ.ಆರ್. ವೆಂಕಟೇಶ್ (ಮನೋಹಂಸ)

*(ಬಾಲ್ಯ ವಿವಾಹದ ಬಗ್ಗೆ ಜಾಗೃತಿ ಮೂಡಿಸುವ ನನ್ನ ಸ್ವರಚಿತ ಜಾನಪದ ಶೈಲಿಯ ಗೀತೆ. ಈ ಹಾಡಿನ ಸನ್ನಿವೇಶ ಹೀಗಿದೆ: ಒಂದು ಹಳ್ಳಿಯಲ್ಲಿ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವ ಸುಬ್ಬಿ ಎಂಬ ೧೧ ವರ್ಷದ ಬಾಲಕಿ ಸುಬ್ಬುಲಕ್ಷ್ಮಿ. ಅವಳನ್ನು ಸುಬ್ಬಿ ಎಂದು ಕರೆಯುವರು. ಅವಳ ತಾಯಿ ತಂದೆ ಯಾವುದೋ ಶ್ರೀಮಂತ ಮನೆತನದ ಸಂಬಂಧ ಸಿಕ್ಕಿತೆಂದು ಅವಳಿಗೆ ಮದುವೆ ಮಾಡಲು ಹೊರಟಿದ್ದಾರೆ. ಇದು ಸುಬ್ಬಿ ಶಾಲೆಯ ಶಿಕ್ಷಕರಿಗೆ ತಿಳಿದು ಅವರು ಸುಬ್ಬಿಯ ತಾಯಿ ಸರಸಮ್ಮನನ್ನು ಶಾಲೆಗೆ ಬಂದು ಭೇಟಿ ಯಾಗಲು ಹೇಳುತ್ತಾರೆ. ಆಗ ಅವರ ನಡುವೆ ಜರುಗುವ ಸಂಭಾಷಣೆ ಯಲ್ಲಿ ಶಿಕ್ಷಕರು ಸರಸಮ್ಮನಿಗೆ ಸುಬ್ಬಿಯ ಎದುರು ಬುದ್ಧಿ ಹೇಳುವ ಮಾತುಗಳೇ ಈ ಜಾನಪದ ಶೈಲಿಯ ಗೀತೆಯಾಗಿ ಹೊರಹೊಮ್ಮಿದೆ.)*

ಸರಸವ್ವ ಮಗಳಿಗೆ ಮದುವೆ ಯಾಕವ್ವಾ
ಲಂಗ ದಾವಣಿ ಇರಲಿ ಅವಳಿಗೆ ಸೀರೆ ಯಾಕವ್ವಾ

ಶಾಲೆಗೆ ಹೋಗಿ ಕಲಿಯುವ ವಯಸು
ಕುಂಟಾಬಿಲ್ಲೆ ಆಡುವ ವಯಸು
ಇನ್ನೂ ಅವಳದು ಮೊಗ್ಗಿನ ಮನಸು
ಬೆಳೆಯಲು ಬಿಟ್ಟರೆ ಅದುವೇ ಸೊಗಸು

ಸುಬ್ಬಿ ನಿನಗೆ ಮದುವೆ ಬೇಡವ್ವಾ
ಓದು ಬರೆಹ ಕಲಿತು ನೀನು ಬೆಳೆದು ದೊಡ್ಡವಳಾಗವ್ವಾ.

ಚಿಗುರುವ ಎಲೆಗಳ ಹೊಸಕುವುದೇಕೆ
ನಲ್ಮೆಯ ಬಾಳನು ಹಿಂಡುವಿರೇಕೆ
ದೇಹ ಮನಸು ಬಲಿಯುವ ತನಕ
ಕೂಡಿಸಬೇಡಿ ಹಸೆಮಣೆ ಮೇಲೆ

ಸರಸವ್ವ ಮಗಳಿಗೆ ಮದುವೆ ಯಾಕವ್ವಾ
ಲಂಗ ದಾವಣಿ ಇರಲಿ ಅವಳಿಗೆ ಸೀರೆ ಯಾಕವ್ವಾ

ಎಳೆಯ ಕರುವನು ಬಂಡಿಗೆ ಬಿಗಿದರೆ
ಬಂಡಿಯನದು ಎಳೆಯುವುದೇನು
ಬಾಲಕಿಯ ಸಂಸಾರಕೆ ಬಿಗಿದರೆ
ಭರಿಸುವುಳೇನು ಅದರ ಹೊರೆಯ

ಸರಸವ್ವ ಮಗಳಿಗೆ ಮದುವೆ ಯಾಕವ್ವಾ
ಲಂಗ ದಾವಣಿ ಇರಲಿ ಅವಳಿಗೆ ಸೀರೆ ಯಾಕವ್ವಾ

ಸುಬ್ಬಿ ನಿನಗೆ ಮದುವೆ ಬೇಡವ್ವಾ
ಓದು ಬರೆಹ ಕಲಿತು ನೀನು ಬೆಳೆದು ದೊಡ್ಡವಳಾಗವ್ವಾ.

***

**ಕರೋನಾ ಡೈರಿಯಿಂದ**

# ಬದುಕಾಗಿದೆ ಲಂಗರು ಹಾಕಿದ ಹಡಗು

**– ನಾಗರತ್ನ ಚಂದ್ರಶೇಖರ್**

**ತಾರೀಕು – 28.03.2020, ಬೆಂಗಳೂರು.**

*ಪ್ರೀತಿಯ ಮಕ್ಕಳೇ, ಮೊಮ್ಮಕ್ಕಳೆ ಹಾಗೂ ಅಳಿಯಂದಿರೆ,*

ಇಲ್ಲಿ ಎಲ್ಲರೂ ಎಲ್ಲವೂ ಕ್ಷೇಮ, ಸುರಕ್ಷಿತ ಎಂದು ಎಂದಿನಂತೆ ಬರೆಯಲು ಮನಸ್ಸು ಹೃದಯ ತಡವರಿಸುತ್ತಿದೆ. ಪ್ರಪಂಚದ ಅತ್ಯುನ್ನತ ವ್ಯವಸ್ಥೆ, ಜೀವನ ಶೈಲಿಯನ್ನು ಅಳವಡಿಸಿಕೊಂಡು ಅಗಾಧ ಆರ್ಥಿಕ ಸಂಪನ್ಮೂಲಗಳಿಂದ ತುಂಬಿ ತುಳುಕುತ್ತಿರುವ ಅಮೆರಿಕವೇ ಇಂದು ಕಣ್ಣುಬಾಯಿ ಬಿಡುತ್ತಾ ಅಸಹಾಯಕತೆಯಿಂದ ತಳಮಳಿಸುತ್ತಿರುವ ದೃಶ್ಯಗಳನ್ನು ನೋಡುತ್ತಾ ಇಲ್ಲಿ ನಾವಿಬ್ಬರು ನಿಮ್ಮೆಲ್ಲರ ಆರೋಗ್ಯ ಕ್ಷೇಮಕ್ಕಾಗಿ ಆತಂಕಪಡುತ್ತಿದ್ದೇವೆ.

ನಾವು ಜನವರಿ 8, 2020ರಂದು ಬೆಂಗಳೂರಿಗೆ ಬಂದಮೇಲೆ ಆಗುತ್ತಿರುವ ಭಯಂಕರ ಬದಲಾವಣೆಗಳ ಸುದ್ದಿಗಳಿಂದ ನಮ್ಮ ಆತ್ಮವಿಶ್ವಾಸವೇ ಕುಗ್ಗಿ ಹೋಗುತ್ತಿದೆ. 70ರ ಅಂಚಿನಲ್ಲಿರುವ ನಾವಿಬ್ಬರು ಬದುಕಿನ ಎಲ್ಲಾ ಕಷ್ಟ ಸುಖಗಳನ್ನು ಕಂಡಿದ್ದೇವೆ, ಉಂಡಿದ್ದೇವೆ. ಕಷ್ಟಕೋಟಲೆಗಳನ್ನು ಜಯಿಸಿದ್ದೇವೆ. ಸತ್ಯ ನಿಷ್ಠುರತೆ, ಧರ್ಮ, ನ್ಯಾಯಸಮ್ಮತವಾದ ದಾರಿಯಲ್ಲಿ ನಾವು ಗಳಿಸಿ ಉಳಿಸಿದ ಅಷ್ಟಿಷ್ಟು ಸಂಪತ್ತನ್ನು ನಿಮಗಾಗಿ ತೆಗೆದಿರಿಸಿ ನಮ್ಮ ಉಳಿದ ಬದುಕಿನ ದಿನಗಳನ್ನು ಸಂತೋಷದಿಂದ ಕಳೆಯಬೇಕೆಂಬ ನಮ್ಮ ಕನಸು, ಕಲಸಿ ಹೋಗುವುದೇನೋ ಎಂಬ ಭಯ ಪ್ರಾರಂಭವಾಗಿದೆ. ವಿಶ್ವ ಮಹಾಯುದ್ಧಗಳನ್ನು ನಾವು ಕಣ್ಣಾರೆ ಕಾಣಲಿಲ್ಲ. ಅವುಗಳ ಭಯಾನಕ ವಿವರಗಳನ್ನು ಚರಿತ್ರೆಯಲ್ಲಿ ಓದಿದ್ದಷ್ಟೇ. ಮನುಷ್ಯನ ಪೈಶಾಚಿಕ ಅಟ್ಟಹಾಸದಿಂದ ಅದೆಷ್ಟು ನಿರ್ದೋಷಿಗಳು ಆಗ ಪ್ರಾಣ ಕಳೆದುಕೊಂಡರು. ಆದರೀಗ ಮೂರನೇ ಮಹಾಯುದ್ಧವನ್ನು ಪ್ರಕೃತಿಯೇ ಶಿಕ್ಷೆಯ ರೂಪದಲ್ಲಿ ಇಡೀ ವಿಶ್ವದ ಜನರ ಮೇಲೆ ಭಯಾನಕ ವೈರಾಣು ರೂಪದಲ್ಲಿ ನೀಡಿದೆ. ರಕ್ತಬೀಜಾಸುರನಂತೆ ಅದು ಚಲಿಸುತ್ತಾ ಬರುತ್ತಿದೆ. ಇದರ ಕಾಲು ತುಳಿತಕ್ಕೆ ಸಿಕ್ಕಿ, ಉಳಿಯಬಲ್ಲವರಷ್ಟೇ ಇಡೀ ಭೂಮಂಡಲದಲ್ಲಿ ಮನುಷ್ಯ ಜೀವಿತದ ಕುರುಹಾಗಿ ಉಳಿಯಬಲ್ಲರು ಎನಿಸುತ್ತಿದೆ. ಮಣ್ಣು, ಗಾಳಿ, ನೀರು ಈ ಯಾವುದೂ ಮಾಲಿನ್ಯರಹಿತವಾಗಿ ಇಲ್ಲ ಇಂದು.ಇ ವುಗಳನ್ನು ವಿಷಮಯವಾಗಿಸಿದ್ದು ಮಾನವನೇ ಅಲ್ಲವೇ ಈಗ ಪ್ರಾರಂಭವಾಗಿರುವುದು ಮೂರನೇ ವಿಶ್ವ ಯುದ್ಧವೇ.

ಒಂದು ವಾರವೆಂದು ಪ್ರಾರಂಭವಾದ ಲಾಕ್‌ಡೌನ್ 21 ದಿನಗಳವರೆಗೂ ವಿಸ್ತರಣೆಯಾಗಿದೆ. ಅಂಗಡಿ ಮುಂಗಟ್ಟು, ಮನರಂಜನೆಗಳು, ಹೋಟೆಲುಗಳು ಸೀಲ್‌ಡೌನ್ ಆದಮೇಲೆ ಆಹಾರಕ್ಕೆ ಹಾಹಾಕಾರ ಎಲ್ಲೆಲ್ಲೂ. ಇಷ್ಟರಮೇಲೆ ಕೆಮ್ಮುವ ಹಾಗಿಲ್ಲ, ಸೀನುವ ಹಾಗಿಲ್ಲ. ತಲೆ ಬಿಸಿಯಿಂದ ಮೈ ಬಿಸಿಯಾದರೆ ಮನೆ ಮುಂದೆ ಅಂಬುಲೆನ್ಸ್ ಬಂದೇಬಿಡುತ್ತದೆ. ವಿದೇಶ ಪ್ರಯಾಣದಿಂದ ಇತ್ತೀಚೆಗೆ ಬಂದವರ ಮನೆಯ ಗೇಟಿಗೆ ಬೀಗ ಜಡಿದು ಗೋಡೆಗೆ ಪೋಸ್ಟರ್ ಅಂಟಿಸಿ 14 ದಿನ ಕ್ವಾರಂಟೈನ್ ಶಿಕ್ಷೆ ಬೇರೆ. ಪೊಲೀಸರ ಸರ್ಪಗಾವಲಿನ ಜೊತೆಗೆ ದಿನವೂ ಅವರ ಮುಂಗೈ ಮೇಲೆ ಸೀಲ್ ಹಾಕಿ ತಾರೀಕು ಬರೆಯುವ ಹಿಂಸೆ. ಜೂ ಒಳಗೆ ಇರುವ ಕಾಡುಪ್ರಾಣಿಗಳೋ ಎಂಬಂತೆ ಅಕ್ಕಪಕ್ಕದವರು ಇವರನ್ನು ದೂರದಿಂದ ವೀಕ್ಷಿಸುತ್ತಾರೆ. ಇನ್ನು ಇವರ ಗ್ರಹಚಾರವೇನಾದರೂ ಕೆಟ್ಟು ಕೊರೋನಾ ಪಾಸಿಟಿವ್ ಬಂದರಂತೂ ಅವರ ಕಥೆ ಮುಗೀತೆಂದೇ ಎಲ್ಲರ ಭಾವನೆ. ಮಕ್ಕಳು ಶಾಲೆಗೆ ಹೋಗದೆ, ಆಡದೆ, ದಣಿಯದೆ, ಬಿಸಿಲಿನ ಮುಖ ನೋಡದೆ ನಾಲ್ಕು ಗೋಡೆಗಳಲ್ಲಿ ಬಂದಿಯಾಗಿದ್ದಾರೆ. ಮನೆಯಲ್ಲೇ ಕುಳಿತ ಅಭ್ಯಾಸವೇ ಇರದ ಗಂಡಸರಿಗಂತೂ ಕಾಲಿಗೆ ಬೇಡಿ ಹಾಕಿದಂತಾಗಿದೆ. ಹಿರಿಯ ನಾಗರಿಕರು ಎಂಬ ವಿಶೇಷಣದಿಂದಾಗಿ ಕರೋನ ಮಾರಿಯ ಕೃಪೆ ನಮ್ಮ ಮೇಲೆ ಹೆಚ್ಚು ಬೀಳಬಹುದು ಎಂಬ ಭಯ. ನಾಳೆ ಬೆಳಗಾಗುತ್ತದೋ ಇಲ್ಲವೋ ಎಂಬ ನಿರಾಸೆಯ ಕಾರ್ಮೋಡಗಳಲ್ಲಿ ಸಂಚರಿಸುತ್ತ ಭವಿಷ್ಯಕ್ಕಿಂತ ವರ್ತಮಾನವೇ ನಮಗೆ ಭಯಾನಕವಾಗಿ ಕಾಡುತ್ತಿದೆ. ಔಷಧಿಗಾಗಿಯೋ ಹಾಲು, ದಿನಸಿಗೋ, ಹೊರಗೆ ಹೋಗಿ ಮನೆಗೆ ವಾಪಸ್ ಬರುವ ತನಕ ಎಲ್ಲಿ ಪೊಲೀಸರ ಕಣ್ಣಿಗೆ ಬಿದ್ದು ಲಾಠಿ ಏಟಿನ ರುಚಿ ನೋಡಬೇಕಾಗುತ್ತದೋ ಎಂದು ಜೀವ ಚಡಪಡಿಸುತ್ತದೆ. ತರಕಾರಿ ಮತ್ತು ಹಣ್ಣುಗಳ

ತಳ್ಳುಗಾಡಿಗಳಂತೂ ಈಗ ವಿತರಣೆಯ ಸಮಸ್ಯೆಯಿಂದಾಗಿ ಬೆಲೆ ಏರಿ ಕೂತಿದೆ. ಸಭೆ. ಸಮಾವೇಶ, ಪೂಜೆ ಪುನಸ್ಕಾರಗಳು, ಮದುವೆ ಸಮಾರಂಭಗಳಿಗೆಲ್ಲ ಬ್ರೇಕ್ ಬಿದ್ದ ಮೇಲೆ ದೇವರಿಗೆ ಕೂಡ ಬಾಗಿಲು ಮುಚ್ಚಿ ಕರೋನ ಭಯದಿಂದ ಗೃಹಬಂಧನಕ್ಕೆ ಒಳಗಾಗಿದ್ದಾನೆ. ಅಂಗೈಯಲ್ಲೇ ಈಗ ವಿಶ್ವ ಎಂದು ಜಂಬ ಕೊಚ್ಚಿಕೊಳ್ಳುತ್ತಿದ್ದ ನಾವು ಈ ಮಹಾಮಾರಿ ಸಪ್ತಸಾಗರಗಳನ್ನು ದಾಟಲು ಏಣಿ ಮೆಟ್ಟಿಲಾಗಿದೆ ಎನ್ನುವುದೇ ದುರಂತ.

05.04.2020 – ಈದಿನ ನಿನ್ನೊಡನೆ ಮಾತನಾಡಿದ ಮೇಲೆ ಮನಸ್ಸು ಸ್ವಲ್ಪ ಶಾಂತವಾಗಿದೆ, ಹಗುರವಾಗಿದೆ. ಮಾಸ್ಕ್ ಹಾಕಿಕೊಳ್ಳುವುದನ್ನು ಮರೆಯಬೇಡಿ. ಕಾರಿನಲ್ಲಿ ನಾವಿಬ್ಬರೇ ಹೋದರೂ ಕೂಡ ಮಾಸ್ಕ್ ಕಡ್ಡಾಯವಾಗಿ ಹಾಕಿಕೊಳ್ಳಲೇಬೇಕು. ಇಡೀ ದಿನ ಮೂಗು–ಬಾಯಿ ಮುಚ್ಚಿದ ಮಾಸ್ಕುಗಳು, ಕೈಗಳನ್ನು ಉಜ್ಜಿ ಉಜ್ಜಿ ತೊಳೆಯಲು ದೊಡ್ಡ ದೊಡ್ಡ ಸ್ಯಾನಿಟೈಸರ್ ಬಾಟಲುಗಳು, ಆಗಾಗ ಬಿಸಿ ನೀರಿನ ಹಬೆ ಗಂಟಲಿಗೆ, ಮೂಗಿಗೆ. ಇನ್ನೂ ಬೇಕೆಂದರೆ ಇಡೀ ಮುಖ ಮುಚ್ಚುವ ಪ್ಲಾಸ್ಟಿಕ್ ಕವಚ. ಜೊತೆಗೆ ಹೈಡ್ರಾಕ್ಸಿ ಕ್ಲೋರೋಕ್ವಿನ್ ಮಾತ್ರೆ ಕೋವಿಡ್–19ಗೆ ಮದ್ದು ಎನ್ನುವ ಪ್ರಚಾರ ಪ್ರಾರಂಭವಾಗುತ್ತಿದ್ದಂತೆಯೇ ಆ ಮಾತ್ರೆಗಳೆಲ್ಲ ಔಷಧಿ ಅಂಗಡಿಯಿಂದ ಬಹುಬೇಗ ಮಾಯವಾದವು. ಜೊತೆಗೆ ಆಯುರ್ವೇದದ ಬಗೆಬಗೆಯ ಕಷಾಯಗಳು. ಹೀಗೆ ಮಾಡಬಾರದ್ದನ್ನೆಲ್ಲ ಮಾಡುತ್ತಾ, ತಿನ್ನಬಾರದನ್ನೆಲ್ಲ ತಿನ್ನುತ್ತ ರಾಕ್ಷಸ ಸಂಹಾರಕ್ಕೆ ಹೋರಾಟ ಶುರುವಾಗಿದೆ. ರೈಲು, ಬಸ್ಸು ವಿಮಾನಗಳೆಲ್ಲ ನಿದ್ರೆ ಮಾಡುತ್ತಿವೆ.

ರಸ್ತೆಗಳಲ್ಲಿ ಜನಸಂಚಾರ ನಿಂತ ಮೇಲೆ ಕಾರ್ಖಾನೆಗಳಿಂದ ಮಾಲಿನ್ಯದ ಹೊಗೆಯು ಇಲ್ಲದೆ ರಸ್ತೆಗಳಲ್ಲಿ ನವಿಲುಗಳು ನರ್ತಿಸುತ್ತಿವೆ. ಪಕ್ಷಿಸಂಕುಲವೆಲ್ಲ ಮರಗಳ ಮೇಲೆ ಕೂತು ಹಾಡುತ್ತಿವೆ. ಪರಿಶುದ್ಧ ಗಾಳಿಯ ಸಂಚಾರ ಮೊದಲ ಬಾರಿಗೆ ಎಲ್ಲಾ ಕಡೆ ಪ್ರಾರಂಭವಾಗಿದೆ. ಕೆಲಸವಿಲ್ಲದ ಕೂಲಿ ಕಾರ್ಮಿಕರು ನಗರಗಳನ್ನು ತೊರೆದು ತಮ್ಮ ಊರಿನತ್ತ ಮೈಲಿಗಟ್ಟಲೆ ನಡೆಯುತ್ತಾ ಗುಳೆ ಹೊರಟಿದ್ದಾರೆ. ಮನೆ ಕೆಲಸದವರು ಕೂಡ ದೀರ್ಘ ರಜೆ ಹೋದಮೇಲೆ ಮನೆಯಲ್ಲಿ ಧೂಳು, ದುಂಬು ಹೊಡೆಯಲು ನಮಗೆ ಭಯವಾಗಿದೆ. ನೆಗಡಿ, ಕೆಮ್ಮು ಬಂದರೆ ಏನು ಗತಿ ಎಂದು ನಾವು ದಿನವೂ ಬೆಳಿಗ್ಗೆ ಹೋಗುತ್ತಿದ್ದ ನಗೆಕೂಟ ಕೂಡ ಬಂದಾದ ಮೇಲೆ ಮನೆಯಲ್ಲೇ ನಾವು ಅಷ್ಟಿಷ್ಟು ವ್ಯಾಯಾಮ ಮಾಡಿಕೊಳ್ಳುತ್ತಿದ್ದೇವೆ. ಬೀದಿಗಳಲ್ಲಿ ಆಗಾಗ ತರಕಾರಿ ಮಾರುವವರ ಕೂಗು ಕೇಳುತ್ತದೆ. ಈಗ ಅವರು ಕೂಡ ಮಾಸ್ಕ್ ಧರಿಸುವುದರಿಂದ ರೆಕಾರ್ಡ್ ಮಾಡಿದ ತರಕಾರಿ ಮತ್ತು ಅವುಗಳ ಬೆಲೆಯನ್ನು ತುತ್ತೂರಿ ಊದುತ್ತಾ ಹೋಗುತ್ತಾರೆ. ಐವತ್ತು, ನೂರರ ನೋಟುಗಳನ್ನು ಖರೀದಿ ಮಾಡಲು ತೆಗೆದುಕೊಂಡು ಹೋದರೆ ಮತ್ತೆ ಉಳಿಯುವ ಚಿಲ್ಲರೆಯನ್ನು ತೆಗೆದುಕೊಳ್ಳಲು ಅದನ್ನು ಮುಟ್ಟಲು ಕೂಡ ಭಯ. ಹಾಗಾಗಿ ಪೂರ್ಣ ಲಾಭ ತರಕಾರಿಯವರಿಗೆ. ಈಗ ಪ್ಲಾಸ್ಟಿಕ್ ಬಳಕೆ ಕಡಿಮೆಯಾಗಿದೆ. ಕಡ್ಡಾಯ ಬುಟ್ಟಿ, ಚೀಲ ತರಬೇಕು ಎಂದು ಆಗ್ರಹಿಸುತ್ತಾರೆ.

ನಿಮ್ಮ ಅಮೆರಿಕದಲ್ಲಿ ಪರಿಸ್ಥಿತಿ ಹೇಗಿದೆ? ಮುಖಗವಸು, ಸ್ಯಾನಿಟೈಸರ್, ಸೋಶಿಯಲ್ ಡಿಸ್ಟನ್ಸಿಂಗ್ ಇವೆಲ್ಲ ಪ್ರೀತಿ, ಪ್ರೇಮ, ಪ್ರಣಯ ಎಂದು ಡೇಟಿಂಗುಗಳಿಗೆ ಸ್ವಲ್ಪ ವಿರಾಮ ನೀಡಿದೆಯೆ? ಪಾನಿಪೂರಿ ಅಂಗಡಿಗಳೆಲ್ಲ ಮಾಯವಾಗಿದೆ. ದೇವರ ಪ್ರಸಾದವೂ ಇಲ್ಲ, ಹೆಂಡದಂಗಡಿಗಳ ತೀರ್ಥವೂ ಇಲ್ಲ. ಮನೆಯೇ ಮಂತ್ರಾಲಯ, ಪತಿಯೇ ಶ್ರೀಮನ್ನಾರಾಯಣ ಎಂದು ದಿನದ ಇಪ್ಪತ್ತನಾಲ್ಕು ಗಂಟೆ ಮನೆ ಮಂದಿಗೆಲ್ಲಾ ಆಹಾರ ತಯಾರಿಸುವ ಹೆಣ್ಣುಮಕ್ಕಳ ಬಗ್ಗೆ ಯಾರಿಗೆ ಕನಿಕರವಿದೆ ಹೇಳು? ಆದರೆ ಮನೆ ಊಟದ ಸವಿ, ಅದರ ಬೆಲೆ ಈಗ ಎಲ್ಲರಿಗೂ ಗೊತ್ತಾಗುತ್ತಿದೆ.

24.04.2020 – ಈ ದಿನ "ಕರೋನ ಮದುವೆ" ಎಂಬ ಹಾಸ್ಯ ನಾಟಕ ಬರೆದೆ. ಈವರೆಗೆ ವಿಶ್ವದಲ್ಲಿ ಕರೋನಾದಿಂದ ಸಾವಿಗೀಡಾದವರ ಸಂಖ್ಯೆ ಅಮೇರಿಕಾದಲ್ಲಿ 52000, ಸ್ಪೈನ್‌ನಲ್ಲಿ 22902, ಫ್ರಾನ್ಸಿನಲ್ಲಿ 22279, ಇಟಲಿ 26384. ಏಪ್ರಿಲ್ 25ಕ್ಕೆ ಎರಡು ಲಕ್ಷ ಜನ ಸತ್ತು 28 ಲಕ್ಷ ಜನ ಸೋಂಕಿತರು ಇದ್ದಾರಂತೆ. ಇಂದು ನಾವೆಲ್ಲ ಅಕ್ಕತಂಗಿಯರು ಜೂಮ್‌ನಲ್ಲಿ ಒಬ್ಬರಿಗೊಬ್ಬರು ಮಾತಾಡಿಕೊಂಡೆವು. ಪ್ರಧಾನಿ ಮೋದಿಜಿಯವರು ಮೇ 3ರವರೆಗೆ ಲಾಕ್‌ಡೌನ್ ವಿಸ್ತರಿಸಿ ಭಾಷಣ ಮಾಡಿದರು ಕೂಡ. ಕರೋನಾ ಜಾಗೃತಿಗಾಗಿ ಇಡೀ ದೇಶಾದ್ಯಂತ ಒಂದು ಸಂಜೆ ಜಾಗಟೆ, ತಟ್ಟೆ, ಡ್ರಮ್ ಇತ್ಯಾದಿಗಳನ್ನು

ಮನೆಮನೆಯಲ್ಲೂ ಬಡಿದು ದೊಡ್ಡ ಶಬ್ದಗಳ ಅಲೆಗಳ ತರಂಗ ಉಂಟು ಮಾಡಲಾಯಿತು. ಇಷ್ಟಾದರೂ ಒಬ್ಬರನ್ನೊಬ್ಬರು ಮುಟ್ಟಿ, ಸ್ಪರ್ಶಿಸಿ, ಆನಂದಿಸುವ ಸಂತೋಷವನ್ನು ಸೋಶಿಯಲ್ ಡಿಸ್ಟೆನ್ಸ್ ಹೆಸರಿನಲ್ಲಿ ನಿಷೇಧಿಸಲಾಗಿದೆ. ಸೋಂಕಿತರು, ಶಂಕಿತರು ಹಾಗೂ ರೋಗದ ವಿರುದ್ಧ ಸೆಣಸಲಾಗದೆ ಸತ್ತವರು ಇವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಆಸ್ಪತ್ರೆಗಳಲ್ಲಿ ಸತ್ತ ಅನೇಕ ಶವಗಳು ಅನಾಥವಾಗಿ ಸುಡಲು, ಹೂಳಲೂ ಸಾಧ್ಯವಾಗದೆ ಬೀದಿಬದಿಯ ಹೆಣಗಳಾಗಿವೆ. ಸತ್ತವರ ಸಂಬಂಧಿಕರಿಗೂ ಮುಖ ಸಿಗದೆ ಮುಚ್ಚಿದ ಚೀಲದಲ್ಲಿ ಕ್ರೇನ್ ಮೂಲಕ ತೆರೆದ ಗುಂಡಿಗಳಲ್ಲಿ ಹೂತು ಹಾಕುತ್ತಿದ್ದಾರೆ. ಜನರ ಕಣ್ಣೀರು ಬತ್ತಿ ಹೋಗುತ್ತಿದೆ.

02.05.2020 – ಇವತ್ತು ವಿಶ್ವದಲ್ಲಿ 33,66.714 ಸೋಂಕಿತರು, 2,39,345 ಸಾವು. ಅದರಲ್ಲಿ ಅಮೆರಿಕದಲ್ಲಿಯೇ 65,173 ಜನ ಸಾವಿಗೀಡಾಗಿದ್ದಾರಂತೆ. ನಗರ, ಪಟ್ಟಣಗಳ ಬಡಾವಣೆಗಳನ್ನು ಹಸಿರು, ಹಳದಿ ಕಿತ್ತಲೆ ವಲಯಗಳಾಗಿ ವಿಂಗಡಿಸಿದ್ದಾರೆ. ಹಸಿರು ವಲಯದಲ್ಲಿ ಸ್ವಲ್ಪಮಟ್ಟಿನ ಓಡಾಟ ಸಾಧ್ಯವಾಗಿದೆ. ಕಿತ್ತಳೆ ವಲಯದಲ್ಲಿ ಬ್ಯಾರಿಕೇಡ್ ಹಾಕಿ ಸಂಪೂರ್ಣ ಓಡಾಟ ನಿಷೇಧ ಮಾಡಿದ್ದಾರೆ. ಇಷ್ಟೆಲ್ಲಾ ಇದ್ದರೂ ಪಾಪ. ಕಸ ಸಂಗ್ರಹಣೆಗಾಗಿ ಬರುವವರು ಕಸದ ವ್ಯಾನ್ ಮೇಲೆ ನಿಂತು ಅಪಾಯವನ್ನು ಲೆಕ್ಕಿಸದೆ ಕಾಯಕ ಮಾಡುತ್ತಿದ್ದಾರೆ. ಈ ಪೌರಕಾರ್ಮಿಕರಿಗೆ ನಗರಪಾಲಿಕೆ ಸಾಕಷ್ಟು ಮುಂಜಾಗ್ರತಾ ವ್ಯವಸ್ಥೆ ಕೂಡ ಮಾಡಿಲ್ಲ.

ಎಪ್ಪತ್ತು ವರ್ಷ ದಾಟುತ್ತಿರುವ ನಮಗೆ ಉಳಿದ ನಮ್ಮ ಜೀವಮಾನ ಕಾಲ ಬೋನಸ್ ಪೀರಿಯಡ್. ಸಾಯಲು ಅಂಜಿಕೆ ಇಲ್ಲ. ಆದರೆ ಈ ವ್ಯಾಮೋಹಗಳ ಜಾಲದಿಂದ ಬಿಡಿಸಿಕೊಳ್ಳಲಾಗದ ಸಂಕಟ ಒಮ್ಮೊಮ್ಮೆ ನಮ್ಮನ್ನು ಕಟ್ಟಿ ಹಾಕುತ್ತಲೇ ಹೋಗುತ್ತದೆ. ಮುಂದೆ  ನಾವೆಲ್ಲ ಮತ್ತೆ ಸೇರಬಹುದು ಎಂಬ ಆಸೆ ಮಾತ್ರ ಇನ್ನೂ ಜೀವಂತವಾಗಿದೆ. ಲಾಕ್ಡೌನ್, ಸೀಲ್‌ಡೌನ್ ಎಲ್ಲಾ ಜಾರಿಯಾದ ಮೇಲೆ ಮಕ್ಕಳು ಶಾಲೆಗೆ ಹೋಗಿ ತಿಂಗಳುಗಳೇ ಕಳೆದುಹೋಗಿವೆ. ಬೀದಿಗಳಲ್ಲಿ, ಮೈದಾನಗಳಲ್ಲಿ ಕಲರವವಿಲ್ಲ ಬಿಕೋ ಎನ್ನುವ ಬೀದಿಗಳಲ್ಲಿ ಅದೃಷ್ಟವಶಾತ್ ಹಕ್ಕಿಗಳ ಹಾಡು ಮತ್ತೆ ಕೇಳಬರತೊಡಗಿದೆ. ಕಾಡು ಪ್ರಾಣಿಗಳಲ್ಲಿ ಕೆಲವಾದರೂ ನಿರ್ಜನ ರಸ್ತೆಗಳಲ್ಲಿ ವಾಕಿಂಗ್ ಬರತೊಡಗಿವೆ. ಇಷ್ಟಾಗಿಯೂ ಸಾವನ್ನು ಸಂಭ್ರಮಿಸುವ ಜನರು ಈ ಪ್ರಪಂಚದಲ್ಲಿ ಇದ್ದಾರೆ. ಇಲ್ಲಿ ಎಲ್ಲವೂ ಸರಿ ಇಲ್ಲ. ಮನೆಯೊಳಗೆ ಇರಲು ಒಪ್ಪದ ಜನ ಹೊರಗೆ ದಂಗೆ ಎದ್ದು ಪೋಲೀಸರಿಗೆ ಕರೋನ ವಾರಿಯರ್ಸ್ ಗಳಿಗೆ ಮುತ್ತಿಗೆ ಹಾಕುತ್ತಿದ್ದಾರೆ. ಕಾನೂನಿನ ಕೈಗೆ ಸಿಕ್ಕದೆ ಪುಂಡಾಟವಾಡುತ್ತಾ, ಗಲಭೆ ಮಾಡುತ್ತಾ ಸಮಾಜದ ಸ್ವಾಸ್ಥ ಕೆಡಿಸುವ ಇಂಥ ಜನರ ನಿಯಂತ್ರಣಕ್ಕೆ ಮಿಲಿಟರಿ ಬರಬೇಕಾಗಿತ್ತು.

20.04.2020– ಹೇ ದೇವಾ, ನನ್ನ ಬುರುಡೆಯೆಲ್ಲ ಬ್ಲಾಂಕ್ ಆಗಿದೆ. ಈಗಂತೂ ಯಾವುದೇ ಕಥೆ ಕವನ ಇದರಲ್ಲಿ ಹುಟ್ಟುತ್ತಿಲ್ಲ. ಈದಿನ ರಾಮಾಯಣ ಮಹಾಭಾರತ ನೋಡುತ್ತಿದ್ದೆ. ಒಂದು ನಿರ್ಣಾಯಕ ಹಂತಕ್ಕೆ ಇಂದು ರಾಮಾಯಣ ಬಂದಿದೆ. ರಾಮ ಪಟ್ಟಾಭಿಷೇಕವಾಯಿತು. ಇನ್ನು ಮಹಾಭಾರತದಲ್ಲಿ ದ್ರೌಪದಿಯ ವಸ್ತ್ರಾಭರಣವಾಗಿ ಅವಳು ಸಿಟ್ಟಿನಿಂದ ಶಾಪ ಕೊಡುತ್ತೇನೆ ಎನ್ನುವಾಗ ಅಯ್ಯೋ ಈ ರೀತಿ ಶಾಪ ಕೊಡುವ ತಾಕತ್ತು ನನಗೂ ಇದ್ದಿದ್ದರೆ ಇಷ್ಟು ದಿನ ನಮ್ಮ ಈ ಆಕ್ರಂದನಕ್ಕೆ ಕಾರಣವಾದವರನ್ನು ಎಷ್ಟು ಶಪಿಸಬಹುದಿತ್ತಲ್ಲ ಎನಿಸಿತು.

ಮಗಳೇ, ಈ ದಿನ ನೀನು ವಿಡಿಯೋ ಕಾಲ್ ಮಾಡಿ ಮಾತನಾಡಿದಾಗ ಮನಸ್ಸು ಎಷ್ಟು ಹಗುರವಾಯಿತು ಗೊತ್ತಾ? ಹೊರಗೆ ರಾಕ್ಷಸನ ಕಾಟ, ಮನೆಯೊಳಗೆ ಬೇಸರದ ಒಡನಾಟ. ಇದೊಂದು ಏಕಾಂಗಿ ಹೋರಾಟ. ಅಪ್ಪ ಅಂತೂ ಯಾವಾಗಲೂ ಕಂಪ್ಯೂಟರಿನಲ್ಲಿ ಮುಳುಗಿರುತ್ತಾರೆ. ನಾನಂತೂ ಸೋಫಾದಲ್ಲಿ ಕೂತು, ಮಲಗಿ ಆ ಶ್ರೀರಂಗನಾಥನಂತೆ ಕಲ್ಲಾಗಿಬಿಟ್ಟಿರುವೆ. ಪಕ್ಕದಲ್ಲಿರುವ ಮೊಬೈಲ್, ಪೆನ್ನು, ಒಂದೆರಡು ಪುಸ್ತಕಗಳು ಇದೇ ನನ್ನ ಜಗತ್ತಾಗಿದೆ. ನೀನು ಸಾಮಾನುಗಳನ್ನು ಎಷ್ಟು ಜಾಗ್ರತೆಯಿಂದ ಮನೆಯೊಳಗೆ ತರುತ್ತೀಯ ಎಂದು ಹೇಳುತ್ತಿದ್ದಾಗ ನನಗೆ ನಿಜಕ್ಕೂ ಗಾಬರಿಯಾಯಿತು. ಇಲ್ಲಿ ನಾವ್ಯಾರೂ ಅಷ್ಟೊಂದು ಎಚ್ಚರಿಕೆ ಖಂಡಿತ ವಹಿಸುತ್ತಿಲ್ಲ. ನಿನ್ನ ಹಾಗೆ ಮಾಡಿದರೆ ಹುಚ್ಚು ಹಿಡಿಯುತ್ತೆ ಅಷ್ಟೇ. ನಿಮ್ಮಹಾಗೆ ಥರ್ಮಲ್ ಸ್ಕ್ರೀನಿಂಗ್ ಇರಲಿ. ಎದುರು ಮನೆ ಅಜ್ಜ ಕೈಯಲ್ಲಿ ಪೊರಕೆ ಹಿಡಿದು ಮನೆಯೆಲ್ಲ ಶುದ್ಧ ಮಾಡುವ ಚಿತ್ರ ಕಂಡು, ಪರಮಾಶ್ಚರ್ಯ. ಚೀಲ ಹಿಡಿದು ಹಾಲು ತರಕಾರಿ ತರಲು ಹೊರಡುತ್ತಾರೆ. ಅಂಗಳದಲ್ಲಿರುವ ಎರಡು ಕಾರುಗಳನ್ನು ಸ್ವತಃ

ಒರೆಸಿಡುತ್ತಾರೆ. ದೊಡ್ಡ ಅಧಿಕಾರಿಯಾಗಿ ನಿವೃತ್ತಿ ಹೊಂದಿದ ಮೇಲೂ ಆಳುಕಾಳು ಎಂದು ಜಬರ್ದಸ್ತಿನಲ್ಲೇ ಬದುಕಿದ್ದವರೆಷ್ಟೋ ಜನ ದಾರಿಯಲ್ಲಿ ಯಾರಾದರೂ, ಅಪರಿಚಿತರಾದರೂ ಕೈಬೀಸಿ ಹಲೋ ಎನ್ನುವಂತಾಗಿದ್ದಾರೆ. ಕರೋನಾ ಜನರಿಗೆ ಅದೆಷ್ಟೋ ಒಳ್ಳೆಯ ಪಾಠಗಳನ್ನು ಕಲಿಸುತ್ತಿದೆ.

ಕರೋನಾದ ಎರಡನೇ ಅಲೆ ಬರುವ ಸಂಭವವಿದೆ. ನಮ್ಮಿಬ್ಬರಿಗೂ ಸ್ವಲ್ಪ ಗಂಟಲು ಕೆರೆತ ಶುರುವಾಗಿದೆ. ಬಿಸಿ ನೀರಿನ ಹಬೆ, ಉಪ್ಪು ನೀರಿನ ಬಾಯಿ ಮುಕ್ಕಳಿಸುವುದು ನಿಯಮಿತವಾಗೇ ಇದೆ. ಕರೋನ ವ್ಯಾಕ್ಸೀನ್ ಪ್ರಯೋಗ ಮುಗಿದು ನಮಗೆಲ್ಲ ವ್ಯಾಕ್ಸಿನ್ ಸಿಗುವ ತನಕ ಬದುಕಿದ್ದರೆ ಪವಾಡವೇ ಸರಿ ಎನಿಸತೊಡಗಿದೆ. ಈ ರೂಪಾಂತರ ಮಹಾಮಾರಿ ಅನೇಕ ಸ್ನೇಹಿತರು, ನೆಂಟರು, ಪರಿಚಿತರನೆಲ್ಲ ನುಂಗಿ ನೀರು ಕುಡಿದಾಯಿತು. ಆಮ್ಲಜನಕದ ಕೊರತೆ, ಆಸ್ಪತ್ರೆಗಳಲ್ಲಿ ಹಾಸಿಗೆಗಳ ಅಭಾವ, ಚಿಕಿತ್ಸೆಯ ದುಬಾರಿ ವೆಚ್ಚ ಭರಿಸಲಾಗದೆ ಜನ ಆಸ್ತಿಪಾಸ್ತಿಗಳನ್ನೆಲ್ಲ ಮಾರುವಂತ ಸ್ಥಿತಿ.

ಜುಲೈ 29, 2021 – ನಾವಿಬ್ಬರೂ ಕರೋನಾ ಟೆಸ್ಟಿಗೆಂದು ವರಮಹಾಲಕ್ಷ್ಮಿ ಹಬ್ಬದ ದಿನವೇ ಹೋಗಿದ್ದೆವು. ಪರೀಕ್ಷೆ ಮುಗಿಸಿ ರಿಸಲ್ಟ್‌ಗಾಗಿ ಕಾಯುವ ವಿದ್ಯಾರ್ಥಿಗಳಿಗಿಂತ ಹೆಚ್ಚಾಗಿ ನಾವು ಕಾಯುತ್ತಿದ್ದೆವು. ಕಡೆಗೂ ನಾವು  ರೇಂಕ್ ಬಂದಷ್ಟು ಸಂಭ್ರಮಿಸಿದ್ದು ನಮ್ಮ ರಿಸಲ್ಟ್ ನೆಗೆಟಿವ್ ಎಂದು ಬಂದಾಗ. ಬೆಳಿಗ್ಗೆ ಮಾಡದ ಪಾಯಸವನ್ನು, ಸಂಜೆ ಲಕ್ಷ್ಮಿಗೆ ತುಪ್ಪದ ದೀಪ ಹಚ್ಚಿ ಪಾಯಸದ ಎಡೆ ಮಾಡಿ, ನಾವು ಸಂತಸದಿಂದ ತಿಂದೆವು. ರಾಪಿಡ್ ಟೆಸ್ಟ್‌ನಲ್ಲಿ ನಾವು ಲಾಟರಿ ಹೊಡೆದಂತೆ ಸಂಭ್ರಮಿಸಿದೆವು.

ಯಾರೂ ಕೇಳದ ಕಥೆಗಳಿವು. ಯಾರಿಗೂ ತಲುಪದ ಗೀತೆಗಳು. ನೋವಿಗೆ ನರಳದ, ನಲಿವಿಗೆ ಕುಣಿಯದ, ಭಾವಕೆ ನಿಲುಕದ ನುಡಿಗಳಿವು. ಅಳಿವಿನ ಉಳಿವಿನ ಸುದ್ದಿಗಳೆಷ್ಟೋ, ಹಾಳೆಗಳಲ್ಲಿ ಬರೆಯಲೇ ಇಲ್ಲ.

ಈಗ ಬದುಕಾಗಿದೆ ಲಂಗರು ಹಾಕಿದ ಹಡಗು. ಕಡಲಾಚೆಯ ಊರ ದಾರಿ ಕಾಣದೆ ಹಸಿದ ಹೊಟ್ಟೆಗಳಿಗಿದೆ ಸದ್ಯ ಒಂದಿಷ್ಟು ಕೂಳು. ಹೇಗೆ ಬರಲಿದೆಯೋ ಸಾವು ಎಂಬ ಭಯದ ನೆರಳು ಮುಗಿಯುವುದೆಂದೋ ಕಾಣೆ. ಯಾರಿಗೂ ತಿಳಿಯದು ಈ ಸಮರದ ಸಂಪೂರ್ಣ ವಿವರ. ನೌಕೆಯೊಳಗೆ ಏರುತಿಹುದು ಹೆಣಗಳ ಭಾರ, ಮುಳುಗಬಾರದಿದು ತಲುಪಬೇಕು ತೀರ.

ಸಾವು ನೋವಿಂದ ಪಾರಾಗಿ ಭರವಸೆಗಳತ್ತ ಸಾಗಲೆಂದು ಕಾಯುತಿಹೆವು ಹೊಸ ಬದುಕಿನತ್ತ.


*ಇಂತಿ, ನಿಮ್ಮ ಅಮ್ಮ, ಅಜ್ಜಿ, ಅತ್ತೆ*

*(ನಾಗರತ್ನ ಚಂದ್ರಶೇಖರ್)*

***

ಕೃತಿ ಪರಿಚಯ

# "ಸಂದರ್ಭ ಸೂಕ್ತಿ"




**ಲೇಖಕರು: ವಿದ್ವಾನ್ ಎನ್. ರಂಗನಾಥಶರ್ಮ**
**ಪ್ರಕಾಶಕರು: ಕಾವ್ಯಾಲಯ ಪ್ರಕಾಶನ, ಜಯನಗರ, ಮೈಸೂರು**

**– ಶಾಂತಾ ನಾಗಮಂಗಲ**

**ಲೇಖಕರ ಪರಿಚಯ:**

ಈ ಪುಟ್ಟದಾದರೂ, ವಿಶಿಷ್ಟವಾದ ಪುಸ್ತಕ ಬರೆದಿರೋರ ಹೆಸರು ಕೇಳದೇ ಇರೋ ಕನ್ನಡಿಗರು ಇರಲಿಕ್ಕಿಲ್ಲ. ಅವರೇ ವಿದ್ವಾನ್ ಮಹಾಮಹೋಪಾಧ್ಯಾಯ ಎನ್. ರಂಗನಾಥ ಶರ್ಮ ಅವರು. ಬೆಂಗಳೂರಿನ ನರಸಿಂಹರಾಜಾ ಕಾಲೋನಿಯ ರಾಮಮಂದಿರವು ಪ್ರಕಟಿಸಿದ 'ಶ್ರೀಮದ್ ವಾಲ್ಮೀಕೀರಾಮಾಯಣ'ದ ಅತ್ಯಂತ ಸುಂದರವಾದ ಕನ್ನಡದ ಅನುವಾದ ಮಾಡಿಕೊಟ್ಟ ಮಹನೀಯರು. ರಸಜ್ಞರು.

ಇವರು ಹುಟ್ಟಿದ್ದು: ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕು, ದಂಡವತೀ ನದೀ ತೀರದ ನಡಹಳ್ಳಿಯಲ್ಲಿ
ಇಷ್ಟ ದೈವ : ಶ್ರೀರಾಮಚಂದ್ರ
ಇಷ್ಟಗುರು : ಭಗವತ್ಪಾದ ಶಂಕರಾಚಾರ್ಯರು
ಎಂದು ಹೇಳಿಕೊಂಡಿರುವ ಇವರು ಹುಟ್ಟಿದ ತಿಥಿ ವೈಶಾಖ ಶುದ್ಧ ಪಂಚಮಿ (ಶಂಕರಜಯಂತಿ) ಮತ್ತು ಜನ್ಮನಕ್ಷತ್ರ ಪುನರ್ವಸು (ರಾಮನ ಜನ್ಮನಕ್ಷತ್ರ) ಆಗಿರೋದು ಕಾಕತಾಳೀಯ. ಭಗವಂತನ ಲೀಲಾವಿಲಾಸ.

ಇವರಿಂದ ರಾಮಾಯಣದ ಕೈಕಂರ್ಯ ಮಾಡಿಸಲು ಮತ್ತು ಶಾಂಕರ ತತ್ವಕ್ಕೆ ತಮ್ಮ ಕೊಡುಗೆಗಳನ್ನು ಸಲ್ಲಿಸಲು ಭಗವಂತನೇ ಮಾಡಿದ ಸಂಕಲ್ಪವಿರಬೇಕು. ಒಟ್ಟಿನಲ್ಲಿ ನಮ್ಮ ಕನ್ನಡಿಗರ ಭಾಗ್ಯ ಇವರು ಕನ್ನಡನಾಡಿನಲ್ಲಿ ಹುಟ್ಟಿದ್ದು.

ಕೃತಿಗಳ ರಚನೆ:

ಸಂಸ್ಕೃತ, ಕನ್ನಡ, ಇಂಗ್ಲೀಷು ಸಂಸ್ಕೃತದಿಂದ ಮಾಡಿದ ಅನುವಾದಗಳು, ಎಲ್ಲವೂ ಸೇರಿ ಸುಮಾರು ೧೦೦ಕ್ಕೂ ಹೆಚ್ಚಿನ ಗ್ರಂಥಗಳನ್ನು ರಚಿಸಿದ್ದಾರೆ. ಕೆಲವು ಬಹಳ ವಿಸ್ತಾರವಾದವುಗಳು. ಕೆಲವು ಬಹಳ ಚಿಕ್ಕವು. ವೇದಾಂತ, ವ್ಯಾಕರಣವೇ ಮೊದಲಾದ ಶಾಸ್ತ್ರಗೀ, ಕಾವ್ಯ, ಸ್ತೋತ್ರ, ಸುಭಾಷಿತಗಳು, ಪಾತ್ರವಿಶ್ಲೇಷಣೆಗಳು, ವ್ಯಕ್ತಿಚರಿತ್ರೆ... ಹೀಗೆ ಅವರ ಬರಹಗಳ ಹರಹು ಬಹಳ ದೊಡ್ಡದು. ಈಗ ಎಲ್ಲವೂ ಆರ್ಕೈವ್ಸ್ ನಲ್ಲಿ ಸಿಗುತ್ತವೆ.

ಪ್ರಶಸ್ತಿಗಳು:

ಶ್ರೀಯುತ ಶರ್ಮರ ಗುಣ, ಪಾಂಡಿತ್ಯ, ಪ್ರತಿಭೆಯನ್ನು ಗುರುತಿಸಿ ಅನೇಕ ಮಠಗಳು, ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಇವರನ್ನು ಗೌರವಿಸುವ ಮೂಲಕ ತಮ್ಮ ಗೌರವವನ್ನು ಹೆಚ್ಚಿಸಿಕೊಂಡಿವೆ. ನಡಹಳ್ಳಿಯ ಗ್ರಾಮಸ್ಥರ ಪ್ರೀತಿಯ ಸನ್ಮಾನ ಕಾರ್ಯಕ್ರಮದಿಂದ ಆರಂಭಿಸಿ ರಾಷ್ಟ್ರಪತಿ ಪುರಸ್ಕಾರದವರೆಗಿನ ಎಲ್ಲಾ ಪ್ರಶಸ್ತಿಗಳೂ ಇವರಿಗೆ ಸಂದಿವೆ.

ಇವರಿಗೆ ಮಹಾಮಹೋಪಾಧ್ಯಾಯ ಎಂಬ ಗೌರವವೂ ಸಂದಿತ್ತು.

## 'ಸಂದರ್ಭ ಸೂಕ್ತಿ' ಪುಸ್ತಕ ಪರಿಚಯ:

ಈಗ ನಾನು ಪರಿಚಯಿಸುತ್ತಿರುವ ಪುಸ್ತಕ "ಸಂದರ್ಭಸೂಕ್ತಿ" ಇದರ ವಸ್ತು ಬಹಳ ವಿಶಿಷ್ಟವಾದದ್ದು. ಕಥೆಯಲ್ಲ. ಕಾವ್ಯವಲ್ಲ. ಶಾಸ್ತ್ರವಲ್ಲ. ಆದರೆ ಎಲ್ಲ ಕಡೆಗೂ ಸಲ್ಲುವ ಸೂಕ್ತಿಗಳ ಪ್ರಪಂಚವನ್ನು ತೆರೆದಿಡುವ ೧೨೬ ಪುಟಗಳ ಪುಸ್ತಕ.

ಈ ಪುಸ್ತಕದಲ್ಲಿ ಲೇಖಕರು ಸಂಸ್ಕೃತ ಸಾಹಿತ್ಯದ ಕಾವ್ಯ ಶಾಸ್ತ್ರಗಳಲ್ಲಿ ವಿಪುಲವಾಗಿ ಹರಡಿಹೋಗಿರುವ "ನ್ಯಾಯ" ಗಳನ್ನು ಸಂಗ್ರಹಿಸಿ, ಅದರ ವಿವರಣೆಗಳನ್ನು, ಅವುಗಳ ಬಳಕೆಯ ಸಂದರ್ಭಗಳನ್ನು ಸ್ವಾರಸ್ಯಕರವಾಗಿ ಪರಿಚಯಿಸಿದ್ದಾರೆ.

ನ್ಯಾಯ – ಹೀಗಂದರೆ ಏನು ? ನಾವು ಬಳಸುವ ನ್ಯಾಯ–ನೀತಿ... ಈ ಅರ್ಥವಲ್ಲ.

ನ್ಯಾಯ – ಸುಭಾಷಿತ ಸಾಹಿತ್ಯದ ಇನ್ನೊಂದು ಪ್ರಕಾರ ಎನ್ನಬಹುದು.

ನ್ಯಾಯ – ಇವು ಎರಡು ಬಗೆಯದಾಗಿವೆ – ೧. ಶಾಸ್ತ್ರೀಯ ನ್ಯಾಯಗಳು ೨. ಲೌಕಿಕ ನ್ಯಾಯಗಳು

ಇವೆರಡರ ವ್ಯತ್ಯಾಸವನ್ನು ಲೇಖಕರು ತಮ್ಮ ಪ್ರಸ್ತಾವನೆಯಲ್ಲಿ – ಮೀಮಾಂಸಾದಿ ಶಾಸ್ತ್ರಗಳಲ್ಲಿ ಉಪಯೋಗಕ್ಕೆ ಬರುವಂಥವಹವು, ಶಾಸ್ತ್ರಜ್ಞರಿಗೆ ಮಾತ್ರ ಅವಶ್ಯಕವೋ ಅವು "ಶಾಸ್ತ್ರೀಯ ನ್ಯಾಯಗಳು".

ಲೋಕದಲ್ಲಿ ಸಾಮಾನ್ಯರ ಜೀವನದಲ್ಲೂ ಉಪಯೋಗಕ್ಕೆ ಬರುವಂಥಹವು "ಲೌಕಿಕ ನ್ಯಾಯಗಳು". ಇವು ಸಾಮಾನ್ಯ ಜನರಿಗೂ ಅರ್ಥವಾಗುವಂಥವು. ಲೋಕವನ್ನು ಬಿಟ್ಟು ಶಾಸ್ತ್ರವಿಲ್ಲ. ಆದ್ದರಿಂದ ಇವುಗಳಿಗೆ– ಅಂದರೆ ಲೌಕಿಕ ನ್ಯಾಯಗಳಿಗೆ ಶಾಸ್ತ್ರದಲ್ಲಿಯೂ ಬಳಕೆಯುಂಟು ಎಂದಿದ್ದಾರೆ.

ಶಾಸ್ತ್ರೀಯ ನ್ಯಾಯಗಳು ಮುಖ್ಯವಾಗಿ ವೇದಾರ್ಥ.. ನಿರ್ಣಯಕ್ಕೆ ಸಹಾಯಕವಾದವು. ಇವುಗಳಿಗೆ ಅಲ್ಲಿ ಬಹಳ ಬೆಲೆಯುಂಟು ಎನ್ನುತ್ತಾರೆ.

ಇನ್ನು ಇಲ್ಲಿ ಹೇಳುತ್ತಿರುವ "ನ್ಯಾಯ" ಶಬ್ದಕ್ಕೆ ಕನ್ನಡದಲ್ಲಿ ಹೊಂದಾಣಿಕೆಯಾಗುವಂಥ ಶಬ್ದವಿಲ್ಲ ಎನ್ನುತ್ತಾರೆ ಲೇಖಕರು. Maxim... ಇದೂ ಇದಕ್ಕೆ ಪರ್ಯಾಯವಾಗಲಾರದು. ಗಾದೆ... ಈ ಶಬ್ದ ಸ್ವಲ್ಪ ಹತ್ತಿರಕ್ಕೆ ಬರುತ್ತದೆ. ಆದರೂ ಪೂರ್ತಿಯಾಗಿ ನ್ಯಾಯಕ್ಕೆ ಪರ್ಯಾಯವಾಗಲಾರದು ಎಂಬ ಅಭಿಪ್ರಾಯ ಲೇಖಕರದ್ದು.

ಬಹುಶಃ ಸಂಸ್ಕೃತ ಭಾಷೆಯನ್ನು ಬಿಟ್ಟರೆ ಬೇರೆ ಭಾಷೆಗಳಲ್ಲಿ ಈ ಬಗೆಯ ಸಾಹಿತ್ಯ ಪ್ರಕಾರ ಇಲ್ಲದೇ ಇರೋದೆ ದೇಶಭಾಷೆಗಳಲ್ಲಿ ಇದಕ್ಕೆ ಪರ್ಯಾಯ ಪದಗಳು ಹುಟ್ಟದೇ ಇರಬಹುದು ಎಂಬುದು ಲೇಖಕರ ಅಭಿಪ್ರಾಯವಾಗಿದೆ.

ಈ ಎಲ್ಲವನ್ನೂ ಚಿಕ್ಕದಾದ ಪ್ರಸ್ತಾವನೆಯಲ್ಲಿ ಬಹಳ ಸಾರವತ್ತಾಗಿ ಪ್ರಸ್ತಾಪಿಸಿದ್ದಾರೆ.

"ಸಂದರ್ಭಸೂಕ್ತಿ"– ಈ ಹೊತ್ತಗೆಯನ್ನು ರಚಿಸುವ ಮೊದಲು ಲೇಖಕರು ಕೆಲವು ಉಪಯುಕ್ತವಾದ ಲೌಕಿಕ ನ್ಯಾಯಗಳನ್ನು ಸಂಗ್ರಹಿಸಿ "ಲೌಕಿಕ ನ್ಯಾಯಗಳು" ಅನ್ನುವ ಕಿರುಹೊತ್ತಿಗೆಯನ್ನು ರಚಿಸಿದ್ದರು. ಆಮೇಲೆ ಇನ್ನೂ ಕೆಲವು ಗ್ರಂಥಗಳನ್ನು ಪರಿಶೀಲಿಸಿ ಮತ್ತೂ ಕೆಲವು ನ್ಯಾಯಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ "ಸಂದರ್ಭಸೂಕ್ತಿ" ಈ ಗ್ರಂಥವನ್ನು ರಚಿಸಿರುವುದಾಗಿ ಹೇಳಿದ್ದಾರೆ.

ಇಲ್ಲಿ ೨೭೪ ನ್ಯಾಯಗಳನ್ನು ವಿವರಣೆಯೊಂದಿಗೆ ಸಂಗ್ರಹಿಸಿದ್ದಾರೆ. ಇವು "ಅ"ಕಾರಾದಿ ಕ್ರಮದಲ್ಲಿವೆ. ಹುಡುಕಲು ಸುಲಭವಾಗಿದೆ. ಇವಲ್ಲದೆ, "ವೈಯರ್ಥ್ಯ ಬೋಧಕ ನ್ಯಾಯಗಳು" ಎಂಬ ಹೆಸರಿನ ೧೬ ನ್ಯಾಯಗಳನ್ನು ಪರಿಶಿಷ್ಟವಾಗಿ ಕೊಟ್ಟಿದ್ದಾರೆ. ಲೇಖಕರೇ ಇದನ್ನು "ಕನ್ನಡ ಸಾಹಿತ್ಯಕ್ಕೆ ಚಿಕ್ಕದಾದರೂ ಇದೊಂದು ಬೆಲೆಬಾಳುವ ಸಂಸ್ಕೃತದ ಕೊಡುಗೆ" ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ.

**ಈ ಬೆಲೆಬಾಳುವ  ನ್ಯಾಯಗಳ ವಿಶೇಷಗಳೇನು?**
ಕೆಲವು ನ್ಯಾಯಗಳು ಮತ್ತವುಗಳ ವಿವರಣೆಗಳನ್ನು ನೋಡಿದರೆ ಗೊತ್ತಾಗಬಹುದು. ಈ ಪುಸ್ತಕದ ವಸ್ತುವೂ ಇವೇ ಆಗಿರುವುದರಿಂದ ಕೆಲವನ್ನು ಅಲ್ಲಿರುವಂತೆಯೇ ಗಮನಿಸೋಣ.

**ಅಂಗಾರ ನ್ಯಾಯ:** ಅಂಗಾರ= ಇದ್ದಿಲು. ಇದು ಬಿಸಿಯಾಗಿದ್ದಾಗ ಅಂದರೆ ಕೆಂಡ ಹಿಡಿದರೆ ಕೈಸುಡತ್ತೆ, ಆರಿದ ಮೇಲೆ ಮುಟ್ಟಿದರೆ ಕೈ ಮಸಿಯಾಗತ್ತೆ. ದುಷ್ಟರ ಸಹವಾಸ ಹೀಗೆ ಅಂತಾ ಹೇಳೋಕೆ ಉಪಯೋಗಿಸೋ ನ್ಯಾಯ.

**ಅಲಂಕೃತ್ಯ ಶಿರಚ್ಛೇದಃ** ಕುರಿಯನ್ನು ಬಲಿಕೊಡೋ ಮೊದಲು ಚೆನ್ನಾಗಿ ಅಲಂಕಾರ ಮಾಡಿ, ಮೆರವಣಿಗೆ ಮಾಡೋ ತರ ಮೊದಲು ಒಬ್ಬರನ್ನು ಹೊಗಳಿ ಅಟ್ಟಕೇರಿಸಿ ಆಮೇಲೆ ಅವರಲ್ಲಿ ತಪ್ಪು ಕಂಡುಹಿಡಿದು ಹೀನಾಯ ಮಾಡುವ ಲೋಕದ ಸ್ವಭಾವವನ್ನು ಹೀಗೆ ಈ ನ್ಯಾಯ ಹೇಳುತ್ತದೆ.

**ಅಶಕ್ತೋಹಂ ಗೃಹಾರಂಭೇ ಶಕ್ತೋಹಂ ಗೃಹಭಂಜನೇ –** ಯಾವುದೇ ರಚನಾತ್ಮಕವಾದ ಕೆಲಸ, ವಿಮರ್ಶೆ ಮಾಡೋರು ಲೋಕದಲ್ಲಿ ಯಾವಾಗಲೂ ಕಡಿಮೆ. ಕಟ್ಟಿದ ಮನೇನ ಒಡೆಯೋದು ಸುಲಭ. ಕಟ್ಟೋದು ಕಷ್ಟ. ಹಾಗೆಯೇ ಸಂಘ ಸಂಸ್ಥೆಗಳು, ಸಮಾಜದ ಕೆಲಸಗಳು ಕೂಡ. ನಡೆಯೋದರಲ್ಲಿ ತಪ್ಪು, ಕುಂದುಕೊರತೆ ಕಂಡುಹಿಡಿದು ಒಡಕು ಮೂಡಿಸಿ ನಡೀತಿರೋ ಒಳ್ಳೆಯ ಕೆಲಸವನ್ನು ನಿಲ್ಲಿಸುವ ಜನರನ್ನು ಕಂಡು ಈ ನ್ಯಾಯ ಹುಟ್ಟಿದೆ.

**ಆಮ್ರಾಶ್ಚ ಸಿಕ್ತಾಃ ಪಿತರಶ್ಚ ತೃಪ್ತಾ –** ಇದು ಕನ್ನಡದಲ್ಲಿ ಬಳಸೋ ನುಡಿಗಟ್ಟು "ಸ್ವಾಮಿಕಾರ್ಯ ಸ್ವಕಾರ್ಯ" ಎರಡೂ ಆದಹಾಗೆ ಅನ್ನುವ ಅರ್ಥದಲ್ಲಿ ಹೊರಟಿರೋ ನ್ಯಾಯ. ಮಾವಿನ ಮರದ ಕೆಳಗೆ ಕುಳಿತು ಪಿತೃಗಳಿಗೆ ತರ್ಪಣ ಕೊಟ್ಟರೆ ಮಾವಿನ ಮರಕ್ಕೂ ನೀರುಣಿಸಿದಂತಾಯ್ತು, ಪಿತೃಗಳಿಗೂ ತೃಪ್ತಿಯಾದಂತಾಯ್ತು ಎಂಬುದು ಇದರ ವಿವರಣೆ ಬಹಳ ಸ್ವಾರಸ್ಯವಾಗಿದೆ.

ಕೆಲವು ಕನ್ನಡದ ಗಾದೆಗಳ ಸಾಮ್ಯವನ್ನು ಇವುಗಳಲ್ಲಿ ಕಾಣಬಹುದು.

**ಅಜಾತಪುತ್ರ ನಾಮೋತ್ಕೀರ್ತನ ನ್ಯಾಯ –** ಇದು ಹೆಚ್ಚು ಕಡಿಮೆ ನಮ್ಮ "ಕೂಸು ಹುಟ್ಟೋಕ್ಕೆ ಮೊದಲು ಕುಲಾವಿ ಹೊಲೆಸಿದ ಹಾಗೆ" ಗಾದೆಗೆ ಸಮಾನಾರ್ಥಕವಾದದ್ದು. ಮಗು ಹುಟ್ಟೋ ಲಕ್ಷಣವೇ ಇಲ್ಲ, ಆಗಲೇ ಹೆಸರುಗಳ ಪಟ್ಟಿ ತಯಾರುಮಾಡಿದಂತೆ ಎಂಬುದು ಇದರ ಅರ್ಥ.

**ನಿರಸ್ತಪಾದಪೇ ದೇಶೇ ಏರಂಡೋಪಿ ದ್ರುಮಾಯತೇ –** (ಹಾಳೂರಿಗೆ ಉಳಿದೋನೇ ಗೌಡ) – ಮರಗಳಿಲ್ಲದೆಡೆಯಲ್ಲಿ ಹರಳೇ ದೊಡ್ಡ ಮರ

**ಕೂಪಮಂಡೂಕ ನ್ಯಾಯ –** (ಬಾವಿಯೊಳಗಣ ಕಪ್ಪೆಯಹಾಗೆ)

**ಕಂಬಲ ನಿರ್ಣೇಜನ ನ್ಯಾಯ –** (ಒಂದೇ ಕಲ್ಲಲ್ಲಿ ಎರಡುಹಕ್ಕಿ)

**ಗಂಡಸ್ಯೋಪರಿ ಪಿಟಕಃ ಸಂವೃತ್ತ –** (ಗಾಯದಮೇಲೆ ಬರೆ ಹಾಕಿದಂತೆ)

**ಗತಾನುಗತಿಕೋ ಲೋಕೋ ನ ಲೋಕಃ ಪಾರಮಾರ್ಥಿಕ–** (ಕುರಿಯಂತೆ ಹಿಂಬಾಲಿಸೋದು– ಇದಕ್ಕೆ ಹತ್ತಿರ ಬರೋ ನ್ಯಾಯ) – ಇದಕ್ಕೊಂದು ಕಥೆಯೂ ಇದೆ. ಒಮ್ಮೆ ಗಂಗಾ ನದಿಯಲ್ಲಿ ಸ್ನಾನಮಾಡಲು ಬಂದ ಯಾತ್ರಿಕನಿಗೆ ಸ್ನಾನ ಮುಗಿಸಿ ನಗರದೊಳಗೆ ಹೋಗಬೇಕಾದ ಕೆಲಸವಿತ್ತು. ಅವನು ತನ್ನ ತಾಮ್ರದ ಚೊಂಬನ್ನು ತೆಗೆದುಕೊಂಡು ಹೋಗೋದ್ಯಾಕೆ ಅಂತ, ಅಲ್ಲೇ ಗಂಗೆಯ ದಡದ ಮರಳಿನಲ್ಲಿ ಅದನ್ನು ಹೂತು, ಗುರುತಿಗಾಗಿ ಅದರ ಮೇಲೆ ಎರಡು ಲಿಂಗದ ಆಕಾರವನ್ನು ಮರಳಲ್ಲೇ ಮಾಡಿಟ್ಟು ಹೋದ. ಅದನ್ನು ನೋಡುತ್ತಿದ್ದ ಮತ್ತೊಬ್ಬ ಯಾತ್ರಿಕ "ಓಹೋ, ಇದು ಇಲ್ಲಿಯ ಪದ್ಧತಿಯಿರಬೇಕು ಅಂತ ತಾನೂ ಹಾಗೆ ಮಾಡಿದ. ಅದನ್ನು ನೋಡಿ ಮತ್ತೊಬ್ಬನೂ ಹಾಗೇ ಮಾಡಿದ. ನೋಡಿದವರೆಲ್ಲ ಹೀಗೆ ಮಾಡಿ ಮಾಡಿ ಆ ಮೊದಲ ಯಾತ್ರಿಕ ಬರುವ ವೇಳೆಗೆ ಗಂಗೆಯ ತಟದ ಮರಳಲ್ಲಿ ಎಲ್ಲ ಕಡೆ ಲಿಂಗಾಕಾರದ ಮರಳ ಗುಡ್ಡೆಗಳೇ ತುಂಬಿದ್ದವು. ಇವನಿಗೆ ತನ್ನ ತಾಮ್ರದ ಚೊಂಬಿರುವ ಜಾಗವನ್ನು ಗುರುತಿಸಲು ಆಗದೇ ಹೀಗೆ ಉದ್ಗರಿಸಿದನಂತೆ–

> ಗತಾನುಗತಿಕೋ ಲೋಕೋ ನ ಲೋಕಃ ಪಾರಮಾರ್ಥಿಕಃ ।
> ಪಿಂಡದ್ವಯ ಪ್ರದಾನೇನ ಗತಂ ಮೇ ತಾಮ್ರಭಾಜನಂ॥

**ಇತೋ ವ್ಯಾಘ್ರಃ ಇತಸ್ತಟೀ** – (ಇತ್ತ ದರಿ ಅತ್ತ ಹುಲಿ)

**ವಧೂಹಸ್ತಮಾಷಮಾಪನ ನ್ಯಾಯ** – (ಗಂಟು ನಂಟು ಎರಡೂ ಉಳಿಸುವ ಜಿಪುಣತನವನ್ನು ಹೇಳುವಾಗ ಬಳಸ ಬಹುದಾದ ನ್ಯಾಯ) – ಒಬ್ಬ ಗೃಹಸ್ಥ ದಿನವೂ ಬಿಕಾರಿಗಳಿಗೆ ಒಂದು ಮುಷ್ಟಿ ಉದ್ದು ದಾನ ಕೊಡುವ ಪದ್ಧತಿ ಇಟ್ಟುಕೊಂಡಿದ್ದ. ಆದರೆ ಜಿಪುಣ. ಇವನ ಮನೆಗೆ ಎಳೆಯ ಸೊಸೆ ಬಂದಳು. ಇವನು ಒಂದುಪಾಯ ಮಾಡಿದ. ಸೊಸೆ ಎಳೆಹುಡುಗಿ. ಅವಳ ಮುಷ್ಟಿ ಚಿಕ್ಕದು. ಅವಳ ಮುಷ್ಟಿಯಲ್ಲಿ ಉದ್ದು ಹಾಕಿಸಿದರೆ ಹೆಸರೂ ಬರುತ್ತೆ. ಖರ್ಚೂ ಕಡಿಮೆ ಎಂದು ಯೋಚಿಸಿ, ತನ್ನ ಹೆಂಡತಿಯ ಬದಲು ಸೊಸೆಯನ್ನು ಭಿಕ್ಷೆಹಾಕಲು ನೇಮಿಸಿದ. ಕಾಳು ಖರ್ಚು ಕಡಿಮೆಯಾಗುವುದರ ಬದಲು ಹೆಚ್ಚೇ ಆಯಿತು. ಏಕೆಂದರೆ ಸುಂದರಿಯಾದ ಎಳೆಯ ಹುಡುಗಿಯನ್ನು ನೋಡಲು ಊರೂರಿಂದ ಬಿಕಾರಿಗಳು ಇವನ ಮನೆಯ ಮುಂದೆ ಸಾಲುಗಟ್ಟಲು ಆರಂಭಿಸಿದರಂತೆ.

ಇಂಥಾ ಎಷ್ಟೋ ನ್ಯಾಯಗಳಿವೆ. ಇವುಗಳನ್ನು ಪುಸ್ತಕದಲ್ಲೇ ಓದಿ ಸವಿಯಬೇಕು.

ಈ ನ್ಯಾಯಗಳು ನಮ್ಮ ಹಿಂದಿನವರ ಜೀವನದ ರೀತಿ, ನಂಬಿಕೆಗಳು, ಅವರು ಮಾಡುತ್ತಿದ್ದ ಶಾಸ್ತ್ರವಿಚಾರಗಳು, ವಾದವಿವಾದಗಳು, ಆಚರಣೆಗಳು ಎಲ್ಲವನ್ನೂ ತೆರೆದು ತೋರಿಸುತ್ತವೆ. ಇವುಗಳ ಓದು ಮನಸ್ಸಿಗೆ ಸಂತೋಷವನ್ನೂ, ಬುದ್ಧಿಗೆ ಆಹಾರವನ್ನೂ ಒದಗಿಸುತ್ತದೆ. ಉಪನ್ಯಾಸ ಮಾಡುವವರಿಗೆ, ವ್ಯಾಖ್ಯಾನಕಾರರಿಗೆ, ಲೇಖಕರಿಗೆ ಎಲ್ಲರಿಗೂ ಬಹುವಿಧದಲ್ಲಿ ಉಪಯೋಗಕ್ಕೆ ಬರುತ್ತದೆ.

ಈ ಪುಟ್ಟ ಪುಸ್ತಕವನ್ನು ಕೊಂಡು ಓದಿ ಆನಂದಿಸಿ.

***

# ಸರಪಳಿ

**– ಸರಸ್ವತಿ ನಟರಾಜ್**

ಮಗಳಿಗೆ ಹೋಂ ವರ್ಕ್ ಮಾಡಿಸುತ್ತಿದ್ದೇನೆ. ಪೂಜೆಯ ಕೊಠಡಿಯಲ್ಲಿ ಅತ್ತೆ ವಿಷ್ಣು ಸಹಸ್ರನಾಮವನ್ನು ಹೇಳಿಕೊಳ್ಳುತ್ತಿರುವುದು ಕೇಳುತ್ತಿದೆ. ಹೇಳುತ್ತಾ ಹೇಳುತ್ತಾ ಅದೇಕೋ ಒಂದು ಶ್ಲೋಕದ ಮಧ್ಯದಲ್ಲಿ ಅವರ ದನಿ ನಿಂತುಬಿಟ್ಟಿತ್ತು. ಮತ್ತೆ ಮತ್ತೆ ಮರೀಚಿರ್ದ ಅಂತ ಹೇಳ್ತಾರೆ ಮತ್ತೆ ನಿಲ್ಲಿಸುತ್ತಾರೆ. ಮತ್ತೆ ಮರೀಚಿರ್ದ ಅಂತಾರೆ, ನಿಲ್ಲಿಸುತ್ತಾರೆ ಮೂರು ನಾಲ್ಕು ಸಲ ಇದೇ ಆದಾಗ 'ಇದೇನಾಯ್ತು? ದಿನಾ ಸಲೀಸಾಗಿ ಹೇಳ್ಕೋತಾರಲ್ಲ, ಇವತ್ಯಾಕೆ ಅಲ್ಲಿಗೇ ನಿಲ್ಲಿಸ್ತಿದಾರೆ. ಏನೋ ಯೋಚನೆ ಬರ್ತಾ ಇದೆಯಾ? ಅದ್ಯಾಕೆ ಅಲ್ಲೇ, ಅದೇ ಸಾಲಿನಲ್ಲೇ ಸುತ್ತಾಡ್ತಾ ಇದ್ದಾರೆ ಅಂತ ಯೋಚಿಸ್ತಾ ಇದ್ದೆ. ಮಗಳು "ಅಮ್ಮ, ಇದಕ್ಕೆ ಅರ್ಥ ಗೊತ್ತಿಲ್ಲ ಹೇಳಿಕೊಡು" ಅಂದಿದ್ದು ಕೇಳಿಸಿತು. ಮತ್ತೆ ಅವಳ ಕಡೆ ಗಮನ ಹೋಯಿತು. ಒಂದು ಕಿವಿ ಇತ್ತ, ಒಂದು ಕಿವಿ ಅತ್ತ, ಮತ್ತೆ ಮತ್ತೆ ಅದೇ ಅರ್ಧಕ್ಕೇ ನಿಲ್ಲುತ್ತಿದ್ದ ಶ್ಲೋಕ ನನ್ನನ್ನು ಅಲ್ಲಿಂದ ಏಳುವಂತೆ ಮಾಡಿತು. "ಪಿಂಕಿ, ಹೋಂ ವರ್ಕ್ ಮಾಡ್ತಾ ಇರು, ಬರ್ತೀನಿ" ಎಂದು ಎದ್ದು ಪೂಜೆಯ ಕೊಠಡಿಯತ್ತ ಹೋದೆ. ಅತ್ತೆ ಯಾಕೋ ಅಸಹಾಯಕರಂತೆ ಕಾಣ್ತಾ ಇದ್ದಾರೆ. ಮೊಟ್ಟಮೊದಲಿಗೆ ಅವರ ಮುಖದಲ್ಲಿ ಈ ಅಸಹಾಯಕತೆಯನ್ನು ನಾನು ನೋಡಿದೆ. "ಏನಾಯ್ತಮ್ಮ" ಎಂದೆ. "ಯಾಕೋ ನೆನಪಿಗೆ ಬರ್ತಾ ಇಲ್ಲ. ಎಷ್ಟು ನೆನಪಿಸಿಕೊಂಡರೂ ಅಲ್ಲಿಂದ ಮುಂದೆ ನೆನಪಿಗೆ ಬರ್ತಿಲ್ಲ. ದಿನಾ ಹೇಳ್ಕೊಂಡು ಅಭ್ಯಾಸವಾಗಿರೋದೇನೇ. ಆದ್ರೆ ಯಾಕ್ ಹೀಗೆ ಗೊತ್ತಾಗ್ತಿಲ್ಲ" ಅಸಹಾಯಕತೆಯ ಧ್ವನಿಯಲ್ಲಿ ಅಂದರು. "ಪುಸ್ತಕ ತಂದು ಕೊಡ್ತೀನಿ, ನೋಡ್ಕೊಂಡು ಹೇಳೋರಂತೆ" ಎಂದು ಹುಡುಕಿ ತಂದುಕೊಟ್ಟೆ.

"ಪುಸ್ತಕ ನೋಡ್ಕೊಂಡು ಹೇಳೋದು ಯಾವತ್ತೋ ಬಿಟ್ಟಿದ್ದೆ. ವರ್ಷಾಂತರದಿಂದ ಬಾಯಲ್ಲಿ ಹೇಳಿಕೊಳ್ಳುತ್ತೇನೆ."

"ಒಂದೊಂದ್ಸಲ ಹೀಗೆ ಆಗುತ್ತಮ್ಮ. ಮನಸ್ಸು ಎಲ್ಲೋ ಹೋಗಿರುತ್ತೆ" ಅಂತ ಹೇಳಿ ಮತ್ತೆ ಮಗಳ ಬಳಿ ಬಂದೆ.

ಒಂದೆರಡು ದಿನದ ಮೇಲೆ ಅವರು ಗ್ಯಾಸ್ ಸ್ಟೋವ್ ಹತ್ತಿರ ನಿಂತಿದ್ದವರು ಎಣ್ಣೆ ಕಾದು ಹೋಗಿದ್ದರೂ ನೋಡುತ್ತಾ ನಿಂತೇ ಇದ್ದರು. ಬಂದು ಆಫ್ ಮಾಡಿದೆ.

"ಯಾಕತ್ತೆ, ಎಣ್ಣೆ ಕಾದ್ಹೋಗಿದೆ. ಯಾಕೆ ಒಗ್ಗರಣೆ ಮಾಡ್ತಾ ಇಲ್ಲ" ಅಂದಿದ್ದಕ್ಕೆ ಅದೇನೋ ಒಂದು ರೀತಿ ನೋಡಿ, "ಏನು ಹಾಕಬೇಕು ಅಂತ ಗೊತ್ತಾಗ್ತಿಲ್ಲ" ಅಂತ ಮತ್ತೆ ಅದೇ ಅಸಹಾಯಕತೆಯ ಧ್ವನಿ. "ಇದ್ಯಾಕಮ್ಮ ಹುಷಾರ್ ಇಲ್ವಾ? ಇವತ್ತು ಉಪ್ಪಿಟ್ಟು ಮಾಡೋದು ಅಂತ ಹೇಳಿದ್ರಲ್ಲ. ಬಿಡಿ ನಾನು ಮಾಡ್ತೀನಿ ಬೇಕಿದ್ರೆ." ಅಂದೆ. "ಪರವಾಗಿಲ್ಲ ನಾನೇ ಮಾಡ್ತೀನಿ" ಅಂತ ಒಗ್ಗರಣೆ ಡಬ್ಬಿಗೆ ಕೈ ಹಾಕಿದರು.

ಮತ್ತೊಂದು ದಿನ ಊಟದಲ್ಲಿ ಏನೋ ಕೊರತೆ. ಪ್ರಶಾಂತ, "ಅಮ್ಮ, ಹುಣಸೆಹಣ್ಣು ಸಾಕಾಗಿಲ್ಲ ಅನ್ಸುತ್ತೆ, ಸಾರು ಗದರು ಬೇರೆ" ಅಂದ. ಅವರು ಒಂದು ತುತ್ತು ತಿಂದವರು "ಹುಣಸೆಹಣ್ಣೇ ಹಾಕಿಲ್ಲ" ಅಂದುಕೊಂಡರು. ರಾತ್ರಿ ಸುಧಾಕರನ ಬಳಿ ಹೇಳಿದೆ.

"ನಿಮ್ಮ ಅಮ್ಮನನ್ನ ಗಮನಿಸಿದೆಯಾ? ಈಚೆಗೆ ಅವರಲ್ಲೇನೋ ಬದಲಾವಣೆ ಕಾಣ್ತಿದೆ. ನಾನೆಂದೂ ನೋಡಿಲ್ಲದ ಅಸಹಾಯಕತೆ ಒಂದೊಂದು ಸಲ. ಹುಷಾರಿಲ್ವ, ಏನೂಂತ ವಿಚಾರಿಸು. ನಾನು ವಿಚಾರಿಸಿದರೆ ಏನೂ ಇಲ್ಲ ಅಂದ್ರು"

"ವಯಸ್ಸಾಗ್ತಾ ಇದೆಯಲ್ಲ. ಏನೋ ಸ್ವಲ್ಪ ಆಯಾಸ ಅನಿಸ್ತಿರಬೇಕು." ಅವನಂದ.

"ಅಲ್ಲ, ಅವರಿಗೆ ಮರೆವು ಜಾಸ್ತಿಯಾಗಿದೆ, ಆವಾಗಾವಾಗ ಏನೋ ಮರೆತುಬಿಡ್ತಾರೆ. ಅಸಹಾಯಕರಂತೆ ತೋರ್ತಾರೆ."

“ವಯಸ್ಸಾದ ಮೇಲೆ ಮರೆಯೋದು ಸಹಜ ಅಲ್ವೇನೇ? ನಮ್ಗೇ ಮರೆತುಹೋಗ್ತಾ ಇರುತ್ತೆ. ಇನ್ನು ಅವರು ಮರೆಯೋದು ಏನು ಹೆಚ್ಚು?” ಅವನು ನಕ್ಕ.

“ನಿನಗೆ ಅರ್ಥ ಆಗಿಲ್ಲ. ಇದು ವಯಸ್ಸಿನ ಮಾಮೂಲಿ ಮರೆವಲ್ಲ. ಒಂದ್ಸಲ ಡಾಕ್ಟರ್ ಹತ್ತಿರ ಅವರನ್ನು ಕರ್ಕೊಂಡ್ ಹೋಗು.”

“ಸರಿ... ಸರಿ, ನಿನ್ನ ತಲೆಯಲ್ಲಿ ಏನೋ ಬಂದ್ರೆ ಅದೆಲ್ಲಿಗೋ ಹೋಗುತ್ತೆ. ಕರ್ಕೊಂಡು ಹೋಗೋಣ ಬಿಡು.”

ಆದರೆ ಡಾಕ್ಟರ್ ಹತ್ರ ಹೋಗೋಣ ಅಂದ್ರೆ ಅತ್ತೆ ಕೆಂಡಾಮಂಡಲ. “ರೋಗ ಇಲ್ಲ, ರುಜಿನ ಇಲ್ಲ. ನಾನ್ಯಾಕೆ ಬರಲಿ?” ಅಂತ ರೇಗಿದರು.

ಮದುವೆಯಾಗಿ ಹನ್ನೆರಡು ವರ್ಷಗಳಾದವು. ಅತ್ತೆಯ ವಿವಿಧ ರೂಪಗಳನ್ನು ನೋಡಿದೀನಿ. ಮಾವ ಬೆದರು ಬೊಂಬೆ. ಅವರ ಮಾತಿಗೆ ಮೂರು ಕಾಸಿನ ಬೆಲೆ ಇಲ್ಲ. ಆದರೆ ಅದು ನನ್ನ ಕಣ್ಣಿಗೆ ಬೀಳದಂತೆ ನೋಡಿಕೊಳ್ಳಲು ತುಂಬಾ ಎಚ್ಚರಿಕೆ ವಹಿಸ್ತಾರೆ. ಆದರೆ ನನಗೆ ಚೆನ್ನಾಗಿ ಗೊತ್ತಾಗಿಹೋಗಿದೆ. ಒಂಥರಾ ತಮಾಷೆ ಅನಿಸುತ್ತೆ. ನನ್ನೆದುರು 'ಏನ್ರೀ, ಕಾಫಿ ಕೊಡ್ಲಾ? ಇನ್ನೊಂದ್ ದೋಸೆ ಹಾಕ್ಲಾ?' ಅಂತೆಲ್ಲ ಮಾತಾಡುತ್ತಾರೆ. ಒಬ್ಬರೇ ಇದ್ದಾಗ 'ಬಾಯಿ ಮುಚ್ಕೊಂಡು ಕೂತ್ಕೊಳ್ಳಿ! ಏನು ಎಲ್ಲಾದಕ್ಕೂ ಬಾಯಿ ಹಾಕ್ಕೊಂಡು ಬರಬೇಡಿ! ನಂಗೊತ್ತು ಏನ್ ಮಾಡಬೇಕು ಅಂತ. ಭಾರಿ ಕಂಡಿದ್ದೇನೆ, ಸುಮ್ನೆ ಕೂಡ್ರಿ!' ಅಂತಾರೆ. ತೀರಾ ಒಂದೊಂದ್ಸಲ 'ಕಂಡಿದ್ದೇನೆ, ಸುಮ್ನೆ ಕೂತ್ಕೊಳಯ್ಯ' ಅಂತ ಏಕವಚನದಲ್ಲಿ ಮಾತಾಡಿದ್ದೂ ಇದೆ. ಅದು ಹೇಗೋ ನನ್ನ ಕಿವಿಗೆ ಬಿದ್ದಿದೆ. ಆಶ್ಚರ್ಯವಾಗಿದೆ. ಒಂದ್ಸಲ ಸುಧಾಕರನ್ನ ಕೇಳಿದೆ, “ಸುಧೀ, ನಿಮ್ಮ ಅಮ್ಮ ಅಪ್ಪನ ಕೌಟುಂಬಿಕ ಜೀವನ ಹೇಗೆ? ಒಬ್ಬರಿಗೊಬ್ಬರು ತುಂಬಾ ಜಗಳ ಮಾಡುತ್ತಿದ್ರಾ? ನಿಮ್ ಬಾಲ್ಯ ಹೇಗಿತ್ತು?” ಅಂತ ಕೇಳಿದ್ದೆ.

ಸುಧಾಕರ ಒಂದು ರೀತಿಯ ವಿಷಾದದಿಂದ ನುಡಿದಿದ್ದ. “ನಮ್ಮ ಅಮ್ಮ ಅಪ್ಪನದು ಇಜ್ಜೋಡು. ಮೊದಲೆಲ್ಲಾ ನಮ್ಮಪ್ಪ ಬೇಕಾದಷ್ಟು ಆಟ ಆಡಿದ್ದಾರೆ. ಅಮ್ಮ ಅಪ್ಪನ ಬೇಜವಾಬ್ದಾರಿ, ಉಡಾಫೆ ನಮಗೆ ಗೊತ್ತಾಗದಂತೆ ಬಹಳ ಮುಚ್ಚುಮರೆ ಮಾಡಿದ್ರು. ಆದರೆ ದೊಡ್ಡವರಾಗ್ತಾ ಆಗ್ತಾ ನನ್ಗೆ, ನಮ್ ಅಕ್ಕಂಗೆ ಇಬ್ಬರಿಗೂ ಅಪ್ಪಾ ಜೊಳ್ಳು ಅನಿಸೋಕೆ ಶುರುವಾಯಿತು. ಅದಕ್ಕೆ ಮೊದಲು ನಮ್ಮಮ್ಮ ತುಂಬಾ ಬಜಾರಿ ಅಂದುಕೊಳ್ತಾ ಇದ್ವು. ಆದರೆ ಅಮ್ಮ ಅಪ್ಪನ ದೆಸೆಯಿಂದಲೇ ಹೀಗಾದದ್ದು ಅಂತ ನಮ್ಮ ದೊಡ್ಡಮ್ಮ ದೊಡ್ಡಪ್ಪ ಹೇಳ್ತಾ ಇರ್ತಾರೆ” ಅಂದಿದ್ದ.

ನಾನಾಗ ಒಬ್ಬೊಬ್ಬರ ಜೀವನ ಒಂದೊಂದು ರೀತಿ ಅಂದುಕೊಂಡಿದ್ದೆ. ಒಂದಿಷ್ಟು ಅತ್ತೆಯ ಕುರಿತು ಸಾಫ್ಟ್ ಕಾರ್ನರ್ ಕೂಡ ಇತ್ತು. ಆದರೆ ನಾನು ಎಷ್ಟೇ ಆತ್ಮೀಯತೆ ತೋರಿಸಲು ಹೋದರೂ ಅವರದೊಂತರ ದೂರವಿಡುವ ಸ್ವಭಾವ. ನಂಬಿಕೆಯೇ ಇಲ್ಲದ ನಡವಳಿಕೆ. ಎಲ್ಲರಿಗೂ ಗೊತ್ತಾಗುವ ಹಾಗೆ ನನ್ನನ್ನೇನೂ ಜೋರು ಮಾಡಲ್ಲ. ಆದರೆ ಬೇರೆಯವರ ಎದುರಿಗೆ ತಾವೇನೇ ನಮ್ಮೊಂದಿಗೆ ಹೊಂದಿಕೊಂಡು ಹೋಗ್ತಾ ಇದ್ದೀವಿ ಅಂತ ಮಾತಾಡ್ತಾರೆ. ಹಾಗೆಯೇ ಇರಬೇಕಲ್ವಾ ಎನ್ನುವ ನಾಟಕದ ಮಾತಾಡ್ತಾರೆ. ಯಾರು ನಿಜವಾಗಿಯೂ ಹೊಂದಿಕೊಂಡು ಹೋಗ್ತಾ ಇರೋದು ಅಂತ ಯೋಚಿಸೋದಕ್ಕೆ ನಾನು ಹೋದರೆ ಒಂದು ನೂರು ಉದಾಹರಣೆ ಹೇಳಬಹುದು. ನನ್ನ ಯಾವುದೇ ನಡವಳಿಕೆಯೂ ಸುಧಾಕರನಿಗೆ ಕಷ್ಟವೆನಿಸಬಾರದು ಎನ್ನುವ ಒಂದೇ ಒಂದು ಉದ್ದೇಶದಿಂದ ನಾನು ಆದಷ್ಟು ಅಲ್ಲಲ್ಲೇ ಬಿಡ್ತಾ ಬರುತ್ತೇನೆ. ಯಾವುದೇ ಮನಸ್ತಾಪವನ್ನು ಬೆಳೆಸಿಕೊಂಡು ಹೋಗುತ್ತಿಲ್ಲ. ಮಗುವಿನೊಂದಿಗೂ ಅಷ್ಟೇ. ಬೇರೆ ಅಜ್ಜಿಯರಿಗಿರುವ ಅತಿ ವಾತ್ಸಲ್ಯ, ಮುದ್ದು, ನಾನು ನೋಡಲೇ ಇಲ್ಲ. ಒಂಥರಾ ಶಿಸ್ತು, ಮಕ್ಕಳೊಂದಿಗೆ ಕೂಡ. ಹಾಗಾಗಿ ಮಗುವಿಗೆ ಅಜ್ಜಿ ಎಂದರೆ ಅಸಲಿಗೆ ಅತಿ ಸಲಿಗೆಯೇ ಇಲ್ಲ.

ಐಟಿ ಉದ್ಯೋಗದಲ್ಲಿರುವ ಎಲ್ಲರಿಗೂ ಇರುವಂತೆ ನನಗೂ ಒತ್ತಡವಿದೆ. ಸಹಜವಾಗಿಯೇ ಇರುತ್ತದೆ. ಆದರೆ ಅತ್ತೆ ಒಂದಿಷ್ಟು ಸಪೋರ್ಟಿವ್ ಆಗಿದ್ದರೆ ಏನೋ ಮಾಡಬಹುದಿತ್ತು ಎಂದೆನಿಸಿದ್ದು ಎಷ್ಟು ಸಲವೋ. ಮಗುವಿನ ಜವಾಬ್ದಾರಿ ಸ್ವಲ್ಪ ತೆಗೆದುಕೊಳ್ಳ

ಬಹುದಿತ್ತು. ಜ್ವರ ಬಂದಾಗಲೂ ರಜ ಹಾಕಿ ನೋಡ್ಕೋ ಅಂತಾರೆಯೇ ಹೊರತು ನಾನು ನೋಡ್ಕೋತೀನಿ, ನೀನು ಕೆಲಸಕ್ಕೆ ಹೋಗು ಅನ್ನಲ್ಲ. ನಿಮ್ಮ ನಿಮ್ಮ ಮಕ್ಕಳ ಜವಾಬ್ದಾರಿ ನಿಮ್ಮದು ಅಂತಲೇ ಬಾಯಿಬಿಟ್ಟು ಹೇಳುತ್ತಾರೆ. ಸುಧಾಕರ ಏನೇ ಮಾಡಿದರೂ ಮಗ ತನ್ ಕರ್ತವ್ಯ ಮಾಡ್ತಾ ಇದ್ದಾನೆ ಏನು ಮಹಾ ಅನ್ನೋ ಧಾಟಿಯಲ್ಲಿಯೇ ಇರುತ್ತಾರೆ. ನೆಂಟರಿಷ್ಟರ ಬಳಿಯೂ ಅದೇ ಧೋರಣೆಯನ್ನು ತೋರುತ್ತಾರೆ. ಸುಧಾಕರನಿಗೂ ಹಲವು ಬಾರಿ ತಾಯಿಯ ಮಾತಿಗೆ ಬಹಳಷ್ಟು ನೋವಾಗಿದೆ. ಹಾಗಾಗಿ ನಾನು ಇನ್ನೂ ಅವನ ಮನಸ್ಸನ್ನು ಕೆಡಿಸಬಾರದು ಎಂದು ಸಾಧ್ಯವಾದಷ್ಟು ನನ್ನ ತಾಪತ್ರಯವನ್ನು ಹೇಳಿಕೊಳ್ಳುವುದಿಲ್ಲ.

ಇದೀಗ ಕೆಲವು ತಿಂಗಳಿಂದ ಅತ್ತೆಗೆ ಈ ಮರೆವಿನ ತೊಂದರೆ ಬಂದಾಗ ಸುಧಾಕರ ಇದು ಮಾಮೂಲಿ ಮರೆವು. ವಯಸ್ಸಾದಂತೆ ಬರುವಂತದ್ದು. ಎಂದು ಉದಾಸೀನ ಮಾಡಿದ. ನನ್ನ ಮನಸ್ಸು 'ಅಲ್ಲ! ಏನೋ ತೊಂದರೆ ಇದೆ, ಆದಷ್ಟು ಬೇಗ ತೋರಿಸಬೇಕು' ಎಂಬ ಎಚ್ಚರಿಕೆಯನ್ನು ಕೊಡುತ್ತಲೇ ಇತ್ತು. ಅತ್ತೆಯೊಂದಿಗೆ ಮಾತನಾಡಿದೆ. "ಅಮ್ಮ, ಡಾಕ್ಟರ್ ಹತ್ರ ಕರ್ಕೊಂಡು ಹೋಗ್ತೀನಿ, ನಿಮ್ಮ ಮರೆವಿಗೆ ಔಷಧಿ ಕೊಡಬಹುದು. ಹೋಗೋಣ"

"ಮರೆವಿಗೆ ಎಲ್ಲಾದರೂ ಔಷಧಿ ಇದ್ಯಾ? ಏನ್ ಬುದ್ಧಿ ಇಲ್ವಾ?" ಎಂದುಬಿಟ್ಟರು.

ನನಗೆ ಪೆಚ್ಚಾಯಿತು. ಹೇಳುವುದನ್ನು ಸ್ವಲ್ಪ ಮೆಲ್ಲಗೆ ಹೇಳಬಹುದಿತ್ತು. ಆದರೆ ಅಂದವರು ಜಾಯಮಾನಕ್ಕೆ ಬರುವುದಿಲ್ಲವಲ್ಲ. ನನಗೂ ಅವರು ಹಾಗೆ ಹೇಳಿದ ನಂತರ ಏನು ಮಾಡಲೂ ತೋಚದೆ ಸುಮ್ಮನಾದೆ. ಆದರೆ ಮುಂದಿನ ನಾಲ್ಕಾರು ವಾರದಲ್ಲಿ ಅವರ ಪರಿಸ್ಥಿತಿ ಬಿಗಡಾಯಿಸಿತು. ಒಂದು ದಿನ ಬೆಳಗ್ಗೆ ಎದ್ದವರು ಮುಖ ತೊಳೆಯಲು ಎಂದಿನಂತೆ ಬಚ್ಚಲು ಮನೆಗೆ ಹೋಗದೆ ಅಡುಗೆಮನೆಯ ಬಾಗಿಲಲ್ಲಿ ನಿಂತುಬಿಟ್ಟಿದ್ದರು. ನನಗೆ ಅಚ್ಚರಿಯಾಯಿತು. "ಅಮ್ಮ, ಮುಖ ತೊಳ್ಕೊಂಡ್ರಾ?" ಎಂದೆ.

ಆಗ ಅವರಿಗೆ ತಬ್ಬಿಬ್ಬಾಯಿತು. ಮತ್ತೆ ನನ್ನ ಮನದೊಳಗೆ ಏನೋ ಗಾಬರಿ. ತೋರಗೊಡದೇ, "ಹೋಗಿ ಮುಖ ತೊಳೆದು ಬನ್ನಿ" ಎಂದೆ. ಆಗ ಎಚ್ಚರಾದಂತೆ ಬಚ್ಚಲಮನೆಗೆ ನಡೆದರು.

ಎಲ್ಲೋ ಓದಿದ್ದು ತಟ್ಟೆಂದು ತಲೆಗೆ ಬಂತು. ಇದು ಡಿಮೆನ್ಷಿಯಾ ಇರಬಹುದೇ? ಕೊನೆಗೆ ಡಾಕ್ಟರ ಬಳಿ ಬಲವಂತವಾಗಿ ಕರೆದುಕೊಂಡು ಹೋದಾಗ ನನ್ನ ಊಹೆ ನಿಜ ಎಂದು ತಿಳಿಯಿತು. 'ಒಬ್ಬರನ್ನೇ ಬಿಟ್ಟು ಎಲ್ಲೂ ಹೋಗಬೇಡಿ' ಎಂದರು ಡಾಕ್ಟರ್. ಮನೆಯಲ್ಲಿರುವವರು ಯಾರು? ಪ್ರಶ್ನೆ ಬಂದಾಗ ನಾನು ವಿಧಿ ಇಲ್ಲದೆ ಮನೆಯಿಂದಲೇ ಕೆಲಸ ಮಾಡುವ ತೀರ್ಮಾನ ಮಾಡಿದೆ. ಅದು ಅಷ್ಟು ಸುಲಭವಾಗಿರಲಿಲ್ಲ. ಆಫೀಸಿನಲ್ಲಿ ಬಹಳಷ್ಟು ಜನರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕಾಯಿತು.

ಮುಂದಿನ ಆರೇಳು ತಿಂಗಳಲ್ಲಿ ನನ್ನೊಬ್ಬಳಿಂದ ಅವರನ್ನು ನೋಡಿಕೊಳ್ಳುವುದು ಕಷ್ಟವಾದಾಗ ಒಬ್ಬ ಶುಶ್ರೂಷಕಿಯನ್ನು ಗೊತ್ತು ಮಾಡಬೇಕಾಯಿತು. ಇದೆಲ್ಲವೂ ಮನೆಯ ಪರಿಸ್ಥಿತಿಯನ್ನು ತೀರ ಬದಲಾಯಿಸಿತು.

ಮಗುವಿನ ಬೇಕು ಬೇಡಗಳನ್ನು ಗಮನಿಸುವುದೂ ಒಮ್ಮೊಮ್ಮೆ, ಒಮ್ಮೊಮ್ಮೆ ಏನು ಪದೇಪದೇ ಕಷ್ಟವಾಗಿತ್ತು. ಇಷ್ಟರಮೇಲೆ ಸುಧಾಕರನೂ ತಾಳ್ಮೆ ಕಳೆದುಕೊಳ್ಳುತ್ತಿದ್ದ. ಮಾವನವರದು ಈಗ ಬೇರೆಯೇ ಆಟ ಶುರುವಾದಂತೆ ತೋರಿತು. ಬೆಳಗೆದ್ದು ಅತ್ತೆ ಕೊಟ್ಟ ಕಾಫಿ ಕುಡಿದು ವಾಕಿಂಗ್ ಹೋಗಿ ಒಂದೆರಡು ಗಂಟೆ ಕಳೆದು ಬರುತ್ತಿದ್ದವರು, ಈಚೆಗೆ ನಾನು ಕಾಫಿ ಕೊಡುವ ಮುಂಚೆಯೇ ಎದ್ದು ಅತ್ತೆಯ ಕೊಠಡಿಯಲ್ಲಿ ಇರುವುದು ಕಾಣಿಸಿತು. ಹೆಂಡತಿ ಹೀಗಾಗಿರುವುದು ಅವರಿಗೂ ಮನಸಿಗೆ ಕಷ್ಟವಾಗಿರಬಹುದು, ಎಷ್ಟೇ ಆದರೂ ನಲವತ್ತೇಳು ನಲವತ್ತೆಂಟು ವರ್ಷಗಳ ದಾಂಪತ್ಯ. ಎಲ್ಲೋ ಒಂದು ಕಡೆ ತಾವು ಸರಿಯಾಗಿ ನೋಡಿಕೊಳ್ಳಲಿಲ್ಲ ಅನಿಸಿದ್ರೂ ಅನಿಸಿರಬಹುದು. ಈಗ ಅದನ್ನೊಪ್ಪಿಕೊಂಡರೂ ಅತ್ತೆಗೆ ಅರ್ಥವಾಗುತ್ತದೆಯೇ ಎನಿಸಿತು.

ಒಂದು ದಿನ ಶುಶ್ರೂಶಕಿ ರೇಖಾ ಬಂದವಳು ಅತ್ತೆಗೆ ಸ್ನಾನ ಮಾಡಿಸಲು ಕರೆದುಕೊಂಡು ಹೋದವಳು, "ಮೇಡಂ ಬನ್ನಿ ಇಲ್ಲಿ" ಎಂದು ಕರೆದಳು. ಸ್ಟೌ ಮೇಲೆ ಕಾವಲಿ ಇಟ್ಟು ದೋಸೆ ಹುಯ್ಯುವುದರಲ್ಲಿದ್ದೆ. ಸ್ಟೌ ಸಣ್ಣ ಮಾಡಿ, "ಏನಾಯ್ತು" ಎಂದು ಹೋದೆ.

“ಮೇಡಂ, ಅಜ್ಜಿಯ ಕೈಯಲ್ಲಿ ಬಳೆ ಇತ್ತಲ್ವಾ, ತೆಗೆದಿಟ್ಟಿದೀರಾ?” ಎಂದಳು.

“ಇಲ್ವಲ್ಲಾ! ಕೈಯಲ್ಲೇ ಇತ್ತು.”

“ದಿನಾ ಇರ್ತಿತ್ತು ಮೇಡಂ. ಇವತ್ತು ಇಲ್ಲ. ನಾನು ಈಗತಾನೇ ಬಂದಿದೀನಿ. ಆಮೇಲೆ ನನ್ನ ಮೇಲೆ ಬರಬಾರದು. ನೋಡಿ ಎಲ್ಲಾದರೂ ಬಿಚ್ಚಿಟ್ಟಿದಾರಾ ಅಂತ.”

“ಅಮ್ಮಾ , ಬಳೆ ಬಿಚ್ಚಿಟ್ರಾ? ಎಲ್ಲಿಟ್ಟಿದೀರಾ?” ಅತ್ತೆಗೆ ಅರ್ಥ ಆಗಲಿಲ್ಲ ಅಂತ ಗೊತ್ತಾಯ್ತು.

“ರೇಖಾ, ನಾನು ಹುಡುಕ್ತೀನಿ. ಅಲ್ಲೇ ಎಲ್ಲಾದರೂ ಹಾಸಿಗೆ ಮೇಲೆ ಇರಬಹುದು. ಗಾಬರಿ ಏನೂ ಬೇಡ “ ಅಂದೆ.

ಅವಳು ಸ್ನಾನ ಮಾಡಿಸಿ, ನೈಟಿ ಹಾಕಿ ಕರೆದುಕೊಂಡು ಬರುವಷ್ಟರಲ್ಲಿ ನಾನು ಹಾಸಿಗೆ ಕೊಡವಿ, ದಿಂಬಿನ ಕೆಳಗೆ, ಮಂಚದ ಕೆಳಗೆ, ಟೇಬಲ್ ಡ್ರಾನಲ್ಲಿ ಎಲ್ಲಾ ಕಡೆ ಹುಡುಕಿದರೂ ಸಿಗಲಿಲ್ಲ. ಹಾಗೆಂದು ರೇಖಾಳನ್ನು ಕಳೆದುಕೊಳ್ಳುವ ಪರಿಸ್ಥಿತಿಯಲ್ಲಿ ನಾನಿರಲಿಲ್ಲ. ಹಾಗಾಗಿ ಅದರ ವಿಷಯ ಏನೂ ತೆಗೆಯದೇ ನಿಭಾಯಿಸಿದೆ. ಮನದೊಳಗೆ ಕೊರೆಯುತ್ತಿತ್ತು.

ಇನ್ನೊಂದು ದಿನ ದೇವರ ಮನೆಯಲ್ಲಿದ್ದ ಬೆಳ್ಳಿಯ ಪಂಚಪಾತ್ರೆ ಕಾಣದಾಯಿತು. ನಾನು ವಿಶೇಷ ಹಬ್ಬಗಳ ಹೊರತು ಎಂದೂ ಪೂಜೆ ಮಾಡಿದ್ದಿಲ್ಲ. ದಿನಾ ಅತ್ತೆಯೇ ದೇವರ ಮನೆಯಲ್ಲಿ ಕಾಲ ಕಳೆಯುತ್ತಿದ್ದು ಅಲ್ಲೇ ಕೂತು ಒಂದೊಂದು ದಿನ ಒಂದೊಂದು ದೇವರ ಸಹಸ್ರನಾಮಗಳನ್ನು, ಅಷ್ಟೋತ್ತರಗಳನ್ನು ಹೇಳಿಕೊಳ್ಳುತ್ತಿದ್ದರು. ಅಕಸ್ಮಾತಾಗಿ ಸುಧಾಕರ ಆದಿನ ದೇವರ ಮನೆಗೆ ಹೋದಾಗ ಪಂಚಪಾತ್ರೆ ಎಲ್ಲಿ ಎಂದು ಕೇಳಿದಾಗ, ಅದಿಲ್ಲ ಎಂದು ಗೊತ್ತಾಯಿತು. ಎಂದಿನಂತೆ ಅತ್ತೆಯನ್ನು ಕೇಳಿದರೆ ಸುಮ್ಮನೆ ಮುಖ ನೋಡಿದರು. ಇವರೇನಾ ‘ಎಲ್ಲಾ ನನ್ನದೇ’ ಎಂದು ಯಜಮಾನಿಕೆ ಮಾಡುತ್ತಿದ್ದವರು ಎನಿಸಿಬಿಟ್ಟಿತ್ತು. ಒಂದು ವಯಸ್ಸಿನ ನಂತರ ಯಜಮಾನಿಕೆ ಬಿಡಬೇಕು, ಆದರೆ ಹೀಗಲ್ಲ ಅಂದುಕೊಂಡೆ. ಈಗ ಏನು ಕೇಳಿದರೂ ಉತ್ತರ ಕೊಡಲು ಸಾಧ್ಯವಾಗದ ಈಕೆ ಇಷ್ಟು ವರ್ಷ ಎಂತಹ ಬಿಗುಮಾನದಲ್ಲಿ ನನ್ನನ್ನು ನಡೆಸಿಕೊಂಡರು. ವಯಸ್ಸಾದಾಗ ಹೀಗೆ ಏನಾದರೂ ಆಗಬಹುದು ಎಂದು ಒಂದಿಷ್ಟೇ ಇಷ್ಟು ನಿರೀಕ್ಷೆ ಇದ್ದರೂ ಮನುಷ್ಯ ಗರ್ವದಿಂದ ಮೆರೆಯಲಾರ ಅನಿಸಿತು.

ಇರುವ ಒತ್ತಡದ ಜೊತೆಗೆ ಈಗ ಬೆಲೆ ಬಾಳುವ ವಸ್ತುಗಳು ಕಾಣದಾದಾಗ ತಲೆ ಕೆಟ್ಟಂತಾಯಿತು. ಮಾವ ‘ಹೌದಾ?’ ಎಂದು ಕೇಳಿ “ಎಲ್ಲೋ ಇರಬೇಕು, ನಿಮ್ಮತ್ತೆ ಎಲ್ಲೋ ಇಟ್ಟಿರ್ತಾಳೆ” ಎಂದು ಕೈ ತೊಳೆದುಕೊಂಡರು. ಸುಧಾಕರ, “ಮನೇಲಿ ಇರೋಳು ನೀನು, ಸ್ವಲ್ಪ ಆಕಡೆ ಈಕಡೆ ದೃಷ್ಟಿ ಇಟ್ಟಿರಬೇಕಮ್ಮಾ” ಅಂದುಬಿಟ್ಟ.

ರೇಗಿಬಿಟ್ಟೆ. “ವಾಟ್ ಡು ಯು ಮೀನ್? ಯಾವ್ಯಾವ ಕಡೆ ಅಂತ ನೋಡಿಕೊಳ್ಳಲಿ? ಪಿಂಕಿ ಸ್ಕೂಲಿನಿಂದ ನೋಟ್ ಕಳಿಸಿದಾರೆ, ಬಂದು ನೋಡಿ ಅಂತ. ನಿಮ್ಮ ಅಪ್ಪ ಮನೇಲಿ ಇರೋದೂ ಒಂದೇ ಇಲ್ಲದಿರೋದೂ ಒಂದೇ, ನಿಮ್ಮ ಅಮ್ಮ ನೋಡಿದರೆ ಹೀಗೆ. ಹೇಗೆ ಹೋಗಲಿ? ನೀನು ರಜಾ ಹಾಕಿ ಸ್ಕೂಲಿಗೆ ಹೋಗಿ ಬಾ. ಇಲ್ಲಾಂದ್ರೆ ಮನೇಲಿರು, ನಾನು ವಿಚಾರಿಸ್ತೀನಿ.” ಅವನು ತಣ್ಣಗಾದ.

“ಸಾರಿ, ನಂಗೂ ಸಿಕ್ಕಾಪಟ್ಟೆ ಪ್ರೆಶರ್. ನಂಗೊತ್ತು ನಿಂಗೆ ತುಂಬಾ ಸ್ಟ್ರೇನ್ ಆಗಿದೆ ಅಂತ. ಏನಾದ್ರೂ ಮಾಡೋಣ.” ಅಂದು ಆಫೀಸ್ ಗೆ ಹೊರಟುಬಿಟ್ಟ.

“ಏನು ಮಾಡ್ತೀಯಾ? ಏನೂ ಇಲ್ಲ” ಅಳು ಬಂತು. ಈಚೀಚೆಗೆ ತಲೆನೋವು ಪದೇಪದೇ ಬರ್ತಾ ಇದೆ. ಸಣ್ಣ ಸಣ್ಣ ವಿಷಯಗಳಿಗೂ ರೇಗುವ ಅಥವಾ ಅಳುವ ಹಂತಕ್ಕೆ ಬಂದಿದೀನಿ.

ಆಫೀಸ್ ಕೆಲಸಕ್ಕೆ ಸಮಯಕ್ಕೆ ಸರಿಯಾಗಿ ಕೂರಲು ಆಗದೇ, ಕೊನೆಗೆ ರಾಜೀನಾಮೆ ಕೊಟ್ಟು, ಮಾಡುತ್ತಿದ್ದ ಕೆಲಸಗಳನ್ನು ಬೇರೆಯವರಿಗೆ ಬಿಟ್ಟು ಕೊಡಬೇಕಾಯಿತು. ತಲೆನೋವು ತಡೆಯಲಾಗದೇ ವೈದ್ಯರ ಬಳಿ ಹೋದಾಗ, ಡಿಪ್ರೆಷನ್ನಿಗೆ ಹೋಗಿದ್ದೀರಿ. ಕೆಲವು ತಿಂಗಳುಗಳ ಕಾಲ ಆಂಟಿ ಡಿಪ್ರೆಸೆಂಟ್‌ಗಳನ್ನು ತೆಗೆದುಕೊಳ್ಳಲೇಬೇಕೆಂದರು.

ಈ ಸರಪಳಿಯಲ್ಲಿ ನನ್ನದೇನೂ ತಪ್ಪಿಲ್ಲವಾದರೂ ನಾನೂ ಬಂಧಿಯಾಗಿದ್ದೆ! ಬಿಟ್ಟೇನೆಂದರೂ ಬಿಡದೀ ಪ್ರಾರಬ್ಧ!

ಒಂದು ದಿನ ಬೆಳಿಗ್ಗೆ ಕಾಫಿ ಲೋಟ ಕೈಗಿಟ್ಟಾಗ ಅತ್ತೆಯ ಎಡ ಹೆಬ್ಬೆರಳಲ್ಲಿ ಶಾಯಿಯ ಕರೆಯಿತ್ತು. ಏನತ್ತೇ ಯಾರು ಇದನ್ನು ಹಚ್ಚಿದ್ದು? ಅಂತ ಕೇಳಿದರೆ ಅತ್ತೆ ಥೇಟ್ ಪಿಂಕಿ ಒಮ್ಮೊಮ್ಮೆ ಮಾಡುವಂತೆ ಮುಖ ಮಾಡಿದರು. ಬೀರುವಿನಲ್ಲಿದ್ದ ಅತ್ತೆಯ ಕೆಲವು ಕಾಗದ ಪತ್ರಗಳು ವಸ್ತುಗಳು ಆಚೀಚೆ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಬೆಳಿಗ್ಗೆಯಿಂದ  ಮಾವ ಮನೆಯಲ್ಲಿ ಕಾಣಲಿಲ್ಲ.

ಇಡುವುದೇನು? ಕೊಡುವುದೇನು? ನಾನು ನಾನು ಎಂಬ ಹೆಮ್ಮೆ!

ತಲೆ ಚಚ್ಚಿಕೊಳ್ಳುವುದರ ಹೊರತು  ಬೇರೆ ದಾರಿ ಯಾವುದಿತ್ತು!

***

## ಕಾಡಿಗೆ

– ರಾಧಿಕಾ.ವಿ.ಗುಜ್ಜರ್

ತಾಯ ಮೃದು ಬೆರಳ ತುದಿಯಿಂದ
ಹಸುಳೆಯ ಹಣೆಗೆ ಚುಕ್ಕೆಯಾಗಿ
ಗಲ್ಲಕ್ಕೆ ಒಂದು ದೃಷ್ಟಿ ಬೊಟ್ಟಾಗಿ
ಮಮತೆಯ ಸ್ಪರ್ಶದ ನವಿರು ಕಾಡಿಗೆ

ಉಂಗುರದ ಬೆರಳಿಂದ ನಯವಾಗಿ
ನಯನ ಮನೋಹರಿಯ ಸಖಿಯಾಗಿ
ಅರಳುತಿಹ ನೇಹದ ಅಂಚಾಗಿ
ತೀಡಿ ಕನಸುಗಳ ನೀಡಿದೆ ಕಾಡಿಗೆ

ವಧು ವರರ ಎಡಗೆನ್ನೆಯನೇರಿ
ಅರಿಸಿನ ಬಣ್ಣದ ಗಾಂಭೀರ್ಯದಿ
ಬಿಚ್ಚಿಕೊಳ್ಳುತಿಹ ಮನದ ಕಾದಲಿಗೆ
ಕವಿತೆಯೊಂದ ಗುನುಗಿದೆ ಕಾಡಿಗೆ

ಬಾಗಿನದ ಮೊರದ ಮಂಗಳದೆ
ಸರ್ವಮಂಗಳೆಯ ರಾಯಭಾರಿಯೆನಿಸಿ
ಗೌರಿಯ ಸಿರಿಯ ಸೆರಗು ಹೊದ್ದು
ತೂಗಿ ತವರಿನ ಭಾರ ಇಳುಹಿದೆ ಕಾಡಿಗೆ

ಸೀಮಂತಕೆ ಹಸಿರು ಪ್ರಕೃತಿಯ
ಬಳೆ, ಗಂಧ, ಅಲಂಕಾರ ಆರತಿಯು
ನಾಜೂಕು ಬಾಣಂತಿ, ಕಂದಮ್ಮನ
ಕಷಾಯ, ಗುಟ್ಟಿಯ ರಕ್ಷೆಯು ಕಾಡಿಗೆ

ಕವಿಯ ಕಲ್ಪನೆಯ ಕಣ್ಣು ಇದು
ಕಥೆಗಾರನ ಪಾತ್ರದ ವಿವರಣೆಯು
ವಿಮರ್ಶಕನ ತೀಕ್ಷ್ಣ ಬಾಣವಹುದು
ಬಂಡಾಯಕೆ ಕಪ್ಪು ಪಟ್ಟಿಯು ಕಾಡಿಗೆ

ಚೋಖ, ತುಕಾರಾಮ, ನಾಮದೇವರ
ಅಭಂಗಕೆ ಪ್ರಾಣನಾದ ವಿಠ್ಠಲನ
ಭಕ್ತಿ, ಪ್ರೇಮ, ಏಕತೆಯ ಸಾರವು
ಅಭೀರದ ಮುಕ್ತಿ ಕಣವು ಕಾಡಿಗೆ

ಲಯವಾದ ಬೂದಿಯ ಹುಡಿಗೆ
ಮೆತ್ತಿಕೊಳ್ಳುವ ಜಿಗಿ ಜಿಡ್ಡು ಬೆರೆಯೆ
ಸಂಯೋಗದೆ ಮೈತಳೆದ ಕಾಡಿಗೆ
ರಕ್ತ ವಿರಕ್ತಗಳನೆಣಿಸದೆ ಸಲ್ಲಿದೆ

***

# ಅಂಬಕ್ಕನ ಆತ್ಮಹತ್ಯೆ

- ಮಾಲತಿ ಶ್ರೀನಿವಾಸನ್

ಮನೆ ಮುಂದಿನ ಬಾಗಿಲು ತೆಗೆದು ಹೊರಗೆ ಬಂದ ವಿಠಲನಿಗೆ ಸೂರ್ಯ ರಶ್ಮಿಯ ಬೆಚ್ಚನೆಯ ಕಾವು ಹಿತ ಎನಿಸಿತು. ಜಗುಲಿಗೆ ಒರಗಿನಿಂತು ಹಾಗೆ ಸುತ್ತ ಕಣ್ಣು ಹಾಯಿಸಿದ. ಸುತ್ತೆಲ್ಲ ಹಸಿರು ಪೈರಿನಿಂದ ನಳನಳಿಸುತ್ತಿದ್ದ ಹೊಲ, ತೋಟದ ಗಿಡಮರಗಳು. ಹೆಂಡತಿ ಸುಬ್ಬಿ ಇನ್ನೂ ಎದ್ದಿರಲಿಲ್ಲ. ಮಲಗಲಿ ಬಿಡು, ಮಾಗಿ ಚಳಿಯಲ್ಲಿ ಕಂಬಳಿ ಒಳಗಿನ ಬಿಸುಪು ನೆನೆದು ಕಚಗುಳಿ ಕೊಟ್ಟಂತೆ ಅನಿಸಿತು ಮನಸ್ಸಿಗೆ.

"ಲೋ ವಿಠ್ಲ, ಬಾರೋ ಇಲ್ಲಿ" ಮನೆ ಕಿತ್ತು ಹೋಗೋ ಹಾಗೆ ಅಕ್ಕ ಅಂಬಕ್ಕನ ಕೂಗು ವಾಸ್ತವಕ್ಕೆ ಸೆಳೆಯಿತು ಅವನನ್ನು. ದಡಬಡನೆ ಒಳಕ್ಕೆ ಓಡಿದ, ಹಜಾರದ ಪಕ್ಕದಲ್ಲಿದ್ದ ಅಕ್ಕನ ಕೋಣೆ ಬಾಗಿಲು ತೆರೆದಿತ್ತು. ''ಏನಕ್ಕ ನಿಂದು ಬೆಳಿಗ್ಗೆ ಬೆಳಿಗ್ಗೆನೇ" ಅಂದಾಗ, "ಹೌದು ಕಣೋ, ಪಕ್ಕಕ್ಕೊಬ್ಳು ಸೋಗ್ಲಾಡಿ ಬಂದ್ಲು ನೋಡು, ಈ ಅಕ್ಕನ ಕೂಗ್ ಕೇಳೋದಿಲ್ಲ. ಈಗ ಅಕ್ಕ ಹಳೆ ಕೊರಡು, ಬರೀ ಸುಡುವುದಕ್ಕೆ ಲಾಯಕ್ಕು ಅಷ್ಟೇ" ಅಂತ ಒದ್ದೆಯಾಗಿರದ ಕಣ್ಣನ್ನು ಸುಮ್ಮನೆ ಒರೆಸಿಕೊಂಡಳು ಅಂಬಕ್ಕ.

"ಛೆ, ಬೆಳಗ್ಗೆ ಎದ್ದು ಎಂಥ ಅಪಶಕುನದ ಮಾತಾಡ್ತೀಯಾ ಅಕ್ಕ, ನಮ್ಮಿಬ್ಬರಿಗೆ ನಿನ್ನ ಬಿಟ್ರೆ ಯಾರಿದ್ದಾರೆ. ಏನಾಗಬೇಕಿತ್ತು ಈಗ?"

"ನಾ ಎದ್ದು ಒಂದು ಗಂಟೆ ಆಯ್ತು, ಚಳಿ.. ಒಂದು ಲೋಟ ಕಾಫಿ ಗತಿ ಇಲ್ಲ, ಇನ್ನ ಹಸಿದಿರೋ ಹೊಟ್ಟೆಗೆ ತಿಂಡಿ ಯಾವಾಗ್ಲೋ. ಹೀಗೇ ಆದರೆ ನಾನು ಯಾವುದಾದರೂ ಕೆರೇನೋ ಬಾವಿನೋ..." ಅಂತ ಮಾತು ಪೂರ್ತಿ ಮಾಡದೆ ಅರ್ಧಕ್ಕೆ ನಿಲ್ಲಿಸಿದ ಅಕ್ಕನನ್ನು ನೋಡಿ ವಿಠಲನಿಗೆ ಜೋರಾಗಿ ನಗಬೇಕು ಅನಸಿತು.  ಆದ್ರೂ ಸಮಾಧಾನವಾಗಿ "ಇರಕ್ಕ, ಕಾಫಿ ತರ್ತಾಳೆ. ಎದ್ದು ಮಾಡ್ತಾ ಇದ್ದಾಳೆ. ಎಲ್ಲರಿಗೂ ಚಳೀನೇ,." ಅಂದ.

"ಹಾಂ, ಇದಕ್ಕೇನೂ ಕಡಿಮೆ ಇಲ್ಲ. ಬಂದ್ ಐದಾರು ವರ್ಷದಲ್ಲಿ ಅದೇನು ಮೋಡಿ ಮಾಡಿದಾಳೆ ಈ ಸುಬ್ಬಿ, ಎದ್ದು ಸಲೀಸಾಗಿ ಓಡಾಡೋಕ್ಕೆ ಆಗಿದ್ರೆ ನಾ ಯಾಕೆ ಕೇಳ್ತಾ ಇದ್ದೆ" ಅಂತ ಗೊಣಗಿದ ಅಕ್ಕನನ್ನು ನೋಡಿ ಅಯ್ಯೋ ಪಾಪ ಅನಿಸಿದರೂ ಕೇಳಬೇಕೆನಿಸಿತು, 'ಇದು ಸ್ವಯಂಕೃತ ಅಪರಾಧ ಅಲ್ವೇನಕ್ಕ. ಅಂತ.

ಹಾಸನದ ಹತ್ತಿರ ಪುಟ್ಟ ಹಳ್ಳಿಯಲ್ಲಿ ಅಂಬಕ್ಕ ವಿಠ್ಠಲನ ಸಂಸಾರ. ಅವರ ತಂದೆ ತಾಯಿಗೆ ಅವರಿಬ್ಬರೇ ಮಕ್ಕಳು. ಹತ್ತನೇ ಕ್ಲಾಸ್‌ವರೆಗೂ ಕಷ್ಟಪಟ್ಟು ಶಾಲೆಯಲ್ಲಿ ಓದಿದ ವಿಠ್ಠಲ, ನಂತರ ಓದಿಗೆ ನಮಸ್ಕಾರ ಹಾಕಿ ಭೂತಾಯಿ ಸೇವೆ ಅಂತ ಹೊಲಗದ್ದೆ ನೋಡ್ಕೋತ ತೋಟದ ಆರೈಕೆಯಲ್ಲಿ ತೊಡಗಿಸಿಕೊಂಡು ಖುಷಿಯಾಗಿದ್ದ. ಅಂಬಕ್ಕನಿಗೆ ವಯಸ್ಸು ಇಪ್ಪತ್ತು ದಾಟಲಿದ್ದಾಗ ಪಕ್ಕದೂರಿನ ರೈತರ ಕುಟುಂಬದ ಹುಡುಗನೊಡನೆ ಅವಳ ಮದುವೆ ಆದಾಗ ವಿಠಲ ಇನ್ನು ಹದಿನೈದು ವರ್ಷದ ಹುಡುಗ. ಮಕ್ಕಳಾಗದ ಚಿಂತೆಯೊಂದು ಬಿಟ್ಟರೆ ಐದಾರು ವರುಷ ಗಂಡನ ಮನೆಯಲ್ಲಿ ಅಂಬಕ್ಕನ ಸಂಸಾರ ಚೆನ್ನಾಗಿಯೇ ನಡೆದಿತ್ತು. ದೇಶದಾದ್ಯಂತ ಹರಡಿದ್ದ ಕೋವಿಡ್ ವೈರಾಣುವಿನ ಬಿರುಗಾಳಿ ಹಳ್ಳಿಯಲ್ಲೂ ಪ್ರತ್ಯಕ್ಷವಾಗಿ ವಿಠ್ಠಲನ ಅಪ್ಪ-ಅಮ್ಮನ ಜೊತೆ ಅಂಬಕ್ಕನ ಗಂಡನನ್ನೂ ಸೆಳೆದೊಯ್ದಿತ್ತು.

ಒಬ್ಬನೇ ಮಗ ಅಂತ ಸೊಸೆಯ ಗಡಸು ಸ್ವಭಾವ, ನಿಷ್ಟುರತೆ ಸಹಿಸಿಕೊಂಡಿದ್ದ ಅತ್ತೆ ಮಾವ, ಮಗನ ಸಾವಿನ ನೋವಿನಲ್ಲಿ ಅವಳನ್ನು ಮನೆಯಿಂದ ಹೊರಗೆ ಹಾಕಿದ್ದರು.

ಏಕಾಂಗಿಯಾದ ವಿಠ್ಠಲ ತನಗೂ ಅಸರೆ ಆಗುತ್ತೆ ಅನ್ನುವ ಭಾವದಿಂದ ಅಂಬಕ್ಕನನ್ನು ತನ್ನ ಮನೆಗೆ ಕರೆದುಕೊಂಡು ಬಂದಿದ್ದ. ತಂದೆ ತಾಯಿ ಇಲ್ಲದ ಆ ಮನೆಯಲ್ಲಿ ಅಂಬಕ್ಕಳಿಗೆ ಊಟ ತಿಂಡಿ ಮಾಡುವುದನ್ನು ಬಿಟ್ಟರೆ ಬೇರೆ ಇತರೆ ಕೆಲಸ ಎಲ್ಲಾ ಆಳುಗಳ ಜವಾಬ್ದಾರಿ. ಅಕ್ಕ ಹೇಳಿದ್ದಕ್ಕೆಲ್ಲ ತಲೆ ಆಡಿಸುತ್ತಾ ಅವಳಿಗೂ ಖುಷಿ ಕೊಟ್ಟು ತಾನು ಖುಷಿಯಾಗಿರುತ್ತಿದ್ದ ವಿಠ್ಠಲ.

ಪಕ್ಕದೂರಿನಿಂದ ತಾಯಿಯ ತಮ್ಮ ವಿಠಲನ ಸೋದರಮಾವ ತನ್ನ ಮಗಳು ಸುಬ್ಬಲಕ್ಷ್ಮಿಯ ಮದುವೆ ಪ್ರಸ್ತಾಪ ತಂದಾಗ, ಏಳನೆಯ ತರಗತಿಯ ನಂತರ ಓದು ಮುಂದುವರಿಸದೆ ಅಮ್ಮನ ಸಹಾಯಕ್ಕೆ ನಿಂತು ಮನೆಯಲ್ಲಿದ್ದಸೌಮ್ಯ ಸ್ವಭಾವದ ಸುಬ್ಬಲಕ್ಷ್ಮಿಯನ್ನು ಅಂಬಕ್ಕನೇ ಒಪ್ಪಿ ತಮ್ಮನನ್ನು ಮದುವೆಗೆ ಒಪ್ಪಿಸಿದ್ದಳು.

ಸುಬ್ಬಿ ಮನೆಗೆ ಬಂದ ನಂತರ ಮಾಡುತ್ತಿದ್ದ ಅಷ್ಟು ಇಷ್ಟು ಅಡಿಗೆ ಕೆಲಸವನ್ನು ಅವಳ ಸುಪರ್ದಿಗೆ ಒಪ್ಪಿಸಿ, ಅಂಬಕ್ಕ ಮೇಲುಸ್ತುವಾರಿ ಶುರುಮಾಡಿಕೊಂಡಿದ್ದಳು. ನಿಧಾನವಾಗಿ ಇಷ್ಟು ದಿನ ನಡೆಯುತ್ತಿದ್ದ ಏಕಚಕ್ರಾಧಿಪತ್ಯದ ಆಡಳಿತ ನಡೆಯುತ್ತಿಲ್ಲ ಅನ್ನುವ ಭ್ರಮೆ ಅವಳ ತಲೆಗೆ ಹತ್ತಿತು.

ಸುಬ್ಬಿ–ವಿಠಲರ ಸಾಂಗತ್ಯ, ಪರಸ್ಪರ ಆಕರ್ಷಣೆ, ತಾನು ಜೀವನದಲ್ಲಿ ಕಳೆದುಕೊಂಡದ್ದನ್ನು ನೆನಪಿಸಿ ಅತೃಪ್ತತೆ ಹೊಗೆಯಾಡ ತೊಡಗಿತು. ಸುಬ್ಬಿಯ ಪ್ರತಿ ಕೆಲಸದಲ್ಲೂ ತಪ್ಪು ಹುಡುಕೋದು, ಊಟ ತಿಂಡಿಗಳ ವ್ಯವಸ್ಥೆ ಸರಿ ಇಲ್ಲ ಎಂದು ಗಲಾಟೆ ಮಾಡುವುದು ಮಾಮೂಲಾಯಿತು.

ಸೌಮ್ಯ ಸ್ವಭಾವದ ಸುಬ್ಬಿಗೆ ಎಂದೂ ಅವರೊಡನೆ ಜಗಳವಾಡುವುದು, ಮಾತಿಗೆ ಮಾತು ಬೆಳೆಸುವುದು ಸರಿಯೆನಿಸುತ್ತಿರಲಿಲ್ಲ. ಅಂಬಕ್ಕನ ಕಳ್ಳಾಟಗಳನ್ನೆಲ್ಲ ಸಹಿಸಿ, ತಾಳ್ಮೆಯಿಂದ ಮನೆ ಕೆಲಸ ನಿಭಾಯಿಸಿಕೊಂಡು ಹೋಗುತ್ತಿದ್ದಳು.

ಅಕ್ಕನ ಸ್ವಭಾವ ಅರಿತಿದ್ದ ವಿಠಲ ಹೆಂಡತಿಯ ನಡೆ–ನುಡಿಯನ್ನು ಗಮನಿಸಿ ಅವಳ ಸಂಯಮ, ಸಹಿಷ್ಣುತೆಗೆ ಮಾರುಹೋಗಿದ್ದ. ಆದಷ್ಟೂ ಅವರಿಬ್ಬರ ಮಧ್ಯೆ ಘರ್ಷಣೆಯಿಲ್ಲದೆ ಮನೆ ನೆಮ್ಮದಿ ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಿದ್ದ. ಪ್ರತಿ ಬಾರಿ ಸಣ್ಣ ವಿಷಯಕ್ಕೆ ರಂಪ ಮಾಡಿ ಸಾಯುವ ಬೆದರಿಕೆ ಹಾಕುತ್ತಿದ್ದ ಅಕ್ಕನ ಸ್ವಭಾವ ಬೇಸರವೆನಿಸಿದರೂ ಅಭ್ಯಾಸವಾಗಿತ್ತು ವಿಠಲನಿಗೆ.

ಹೀಗೆ ಒಂದು ದಿನ ಅಂಬಕ್ಕ ಅಕ್ಕಪಕ್ಕದವರೊಡನೆಲ್ಲ ಸುಬ್ಬಿಯ ಬಗ್ಗೆ ಇಲ್ಲಸಲ್ಲದ ಮಾತುಗಳನ್ನು ಆಡುತ್ತಾ, ಕಣ್ಣೀರಿಡುತ್ತಿದ್ದುದನ್ನು ನೋಡಿ ಒಳಗೆ ಕರೆದು, "ಅಕ್ಕ, ನಿನ್ನ ಜೀವನದಲ್ಲಿ ನಿನ್ನ ನೋಡಿಕೊಳ್ಳುವುದು ನಾವೇ ಕಣೆ, ಸುಮ್ಮನೆ ಹಾದಿಬೀದಿ ಜಗಳ ಯಾಕ್ ಮಾಡ್ತೀಯಾ" ಅಂತ ಹೇಳಿದ್ದಕ್ಕೆ ಜೋರಾಗಿ ಕೂಗಾಡುತ್ತಾ, "ಸಾಯ್ತೀನಿ ಕಣೋ, ನಾ ಸಾಯ್ತಿನಿ... ಇಂದೇ ಖಂಡಿತ ಸಾಯ್ತಿನಿ" ಅಂತ ಕೂಗುತ್ತಾ ಹೊರಗೆ ಓಡ್ಹೋಗಿ ಅಕ್ಕಪಕ್ಕದಲ್ಲಿ ಕೇಳುವ ಹಾಗೆ ಗಲಾಟೆ ಮಾಡ್ತಾ ಬಾವಿಕಟ್ಟೆ ಹತ್ತಿ ನಿಂತವಳನ್ನು ಕಾಲು ಹಿಡಿದು ಕ್ಷಮೆ ಕೇಳಿ ಒಳಗೆ ಎಳೆದುಕೊಂಡು ಬಂದಿದ್ದ ವಿಠ್ಠಲ. ಬಾವಿಕಟ್ಟೆ ಹತ್ತಿ ನಿಂತಿದ್ರೂ ಜಿಗಿಯೋ ಯಾವ ಪ್ರಯತ್ನ ಮಾಡದೆ ತಮ್ಮನಿಗಾಗಿ ಕಾಯುತ್ತಿದ್ದ ಆ ನೋಟ ಮನಸ್ಸಿಗೆ ಬಂದು ನಗುವಂತಾಗಿತ್ತು ಅವನಿಗೆ.

ಮುಂದೆ ಅಂಬಕ್ಕನ ಆತ್ಮಹತ್ಯೆ ಪ್ರಕರಣ ಊರೆಲ್ಲಾ ನಗೆಪಾಟಲಾಗುವಂತಹ ಘಟನೆ ನಡೆಯಿತು. ಬೆಳಗಿನ ತಿಂಡಿಯ ಪಾಳಿ ಮುಗಿಸಿ ಗಂಡ ಹೊಲದ ಕಡೆ ಹೊರಟ ನಂತರ, ಸುಬ್ಬಿ ಅಡುಗೆ ಮನೆಯಲ್ಲಿ ಅಂದಿನ ಅಡುಗೆಗಾಗಿ ತರಕಾರಿ ಹೆಚ್ಚುತ್ತಾ ಕುಳಿತಿದ್ದಳು. ಶುಭ್ರಸ್ನಾತಳಾಗಿ, ಹಣೆಯಲ್ಲಿ ಕುಂಕುಮ, ತಲೆಯಲ್ಲಿ ಹೂವು ಮುಡಿದು ನಗುತ್ತಾ, ಹಾಡುತ್ತಾ ಕುಳಿತಿದ್ದ ಸುಬ್ಬಿಯನ್ನು ಕಂಡು ಅಂಬಕ್ಕನಿಗೆ ಸುಮ್ಮನೆಯೇ ಸಿಟ್ಟು ಹತ್ತಿತ್ತು.

"ಏನ್ ಅಡಿಗೆ?, ಅಡಿಗೆಯಲ್ಲಿ ಉಪ್ಪು ಖಾರ ನೋಡ್ಕೊಂಡು ಹಾಕು ತಾಯಿ, ನಿನ್ನೆ ಬರೀ ಖಾರ, ಬಾಯೆಲ್ಲ ಉರಿ" ಅಂತ ವರಸೆ ತೆಗೆದಳು ಅಂಬಕ್ಕ.

"ಅಯ್ಯೋ, ಇವರು ಅದೇ ಊಟ ಮಾಡಿದ್ರಲ್ಲ ಅಕ್ಕ, ಏನೂ ಹೇಳಿಲ್ಲ". ಗ್ರಹಚಾರ ಕಡಿಮೆಯಾಗಿ ಎಂದೂ ಪ್ರತಿಕ್ರಿಯಿಸದ ಸುಬ್ಬಿ ಅಂದು ಮಾತನಾಡಿದ್ಲು.

"ಅಯ್ಯೋ... ಅಯ್ಯೋ, ಏನೇ ಸೊಗ್ಲಾಡಿ, ನನ್ನ ಮಾತಿಗೆ ಎದುರಾಡ್ತೀಯ. ಇನ್ನು ನಾನು ಇಲ್ಲಿ ಇರಲ್ಲ ಕಣೆ, ಒಂದು ಹನಿ ನೀರು ನಿನ್ನ ಕೈಯಲ್ಲಿ ನಾನು ಕುಡಿಯೋದಿಲ್ಲ, ರೈಲ್ ಕಂಬಿಗೆ ತಲೆ ಕೊಟ್ಟು ಖಂಡಿತ ಸಾಯಿತೀನೀ ನೋಡ್ತಾ ಇರು" ಅಂತ ಅಂಬಕ್ಕ ಮುಂಬಾಗಿಲು ತೆಗೆದುಕೊಂಡು ರಸ್ತೆ ಮೇಲೆ ದುಡುದುಡನೆ ಓಡಲು ಶುರು ಮಾಡಿದಾಗ ಏನು ಮಾಡೋಕೂ ತೋಚದೆ ಸುಬ್ಬಿ ಗಂಡನ ಕರ್ಕೊಂಡು ಬರೋಣ ಅಂತ ಹೊಲದ ಕಡೆ ಓಡಿದಳು. ಈ ಸಲ ಸಾಯಲೇಬೇಕು ಅಂತ ನಿರ್ಧಾರ ಮಾಡಿದಂತೆ ಅಂಬಕ್ಕ ಹತ್ತು ಗಂಟೆಗೆ ರೈಲು ಬರುವುದನ್ನು ನೆನಪಿಸಿಕೊಂಡು, ಹೊಲದ ಆಚೆ ಬದಿಯಲ್ಲಿದ್ದ ನಾಲ್ಕು ರೈಲ್ವೆ ಹಳಿಗಳ ಮದ್ಯೆ ನಿಂತು, ತುದಿಯಲ್ಲಿದ್ದ ಹಳಿಗಳ ಮೇಲೆ ಅಡ್ಡಡ್ಡಲಾಗಿ ಮಲಗಿದಳು. ದೂರದಿಂದ ರೈಲು ಬರುತ್ತಿದ್ದುದ್ದನ್ನು ನೋಡಿ ರಾಮನಾಮ ಜಪ ಶುರು ಮಾಡಿದಳು ಕಣ್ಣು ಮುಚ್ಚಿ. ರೈಲು ಹತ್ತಿರಾದಂತೆ ಹೃದಯದ ಬಡಿತ ಜೋರಾಯಿತು. ಸೆರಗಿನಿಂದ ಮುಖ. ಕಿವಿ, ಕಣ್ಣು ಎಲ್ಲ ಮುಚ್ಚಿಕೊಂಡು 'ರಾಮ ರಾಮ' ಅಂತ ಕೂಗುತ್ತಿದ್ದವಳಿಗೆ ಸ್ವಲ್ಪ ಸಮಯದ ನಂತರ ಇದ್ದಕ್ಕಿದ್ದಂತೆ ಶಬ್ದ ಕಡಿಮೆಯಾದುದರ ಅರಿವಾಗಿ ಮುಸುಕು ತೆಗೆದು ನೋಡಿದಾಗ ಕಂಡದ್ದು, ಪಕ್ಕದ ಹಳಿಗಳಿಂದ ಸರಿದು ದೂರ ಹಾದು ಹೋಗುತ್ತಿದ್ದ ರೈಲು.

ಅಷ್ಟರಲ್ಲಿ ಸುಬ್ಬಿ ಜೊತೆ ಬಂದ ವಿಠಲ ದೂರದಿಂದ ಕೂಗು ಹಾಕಿದ್ದಕ್ಕೆ ದಡಬಡ ಅಂತ ಏಳಲು ಹೋಗಿ ಕಾಲು ಜಾರಿ ಹಳಿಗಳ ಪಕ್ಕ ಇದ್ದ ಬದುವಿನಲ್ಲಿ ಅಂಬಕ್ಕ ಬಿದ್ದಳು.

ಮೈಯೆಲ್ಲಾ ಕೆಸರು ಮೆತ್ತಿದ ಅಂಬಕ್ಕನನ್ನು ಮಗುವಿನಂತೆ ಎತ್ತಿಕೊಂಡು ವಿಠಲ ಮನೆಗೆ ಕರೆತಂದು ಹತ್ತಿರದ ಆರೋಗ್ಯ ಕೇಂದ್ರದ ಡಾಕ್ಟರನ್ನು ಕರೆತಂದ. ಅಂಬಕ್ಕನನ್ನು ಪರೀಕ್ಷಿಸಿ, 'ಸೊಂಟದ ಮೂಳೆ ಮುರಿದಂತಿದೆ, ಪಟ್ಟಿ ಹಾಕ್ತೀನಿ, ಬೆಲ್ಟ್ ಕೊಡ್ತೀನಿ, ಮೊದಲು ಚೇತರಿಸಿಕೊಳ್ಳಲಿ. ಈಗ ಓಡಾಡೋದು ಬೇಡ, ನಂತರ ಮುಂದಿನ ವ್ಯವಸ್ಥೆ ಮಾಡೋಣ. ಈ ಮಾತ್ರೆಗಳನ್ನು ಕೊಡಿ' ಅಂತ ಹೇಳಿ ಡಾಕ್ಟರ್ ಹೊರಟರು.

ಮುಂದೆ ಆರೇಳು ತಿಂಗಳು ಮಲಗಿದ ಜಾಗದಲ್ಲಿ ತೆಪ್ಪಗೆ ಸುಬ್ಬಿ ಕೈಯಲ್ಲಿ ಸೇವೆ ಮಾಡಿಸಿಕೊಂಡು, ಅಂಬಕ್ಕ ಎಂಬತ್ತಾರನೆ ವಯಸ್ಸಿನಲ್ಲಿ ಶಿವನಪಾದ ಸೇರಿದ್ದರು. ಕೊನೇತನಕ ಸುಬ್ಬಿ ತನ್ನ ಎರಡು ಮಕ್ಕಳೊಡನೆ ಅವರನ್ನು ಮಗುವಂತೆ ಪೋಷಿಸಿ ಗಂಡನಿಗೆ ಇನ್ನಷ್ಟು ಹತ್ತಿರವಾದಳು.

ಬೇಕೆನಿಸಿದಾಗ, ದುಃಖದಲ್ಲಿ ಬೇಸರಿಸಿದಾಗೆಲ್ಲ ಸಾವು ಬರುವಂತಿದ್ದರೆ ಭೂಮಿಯಲ್ಲಿ ಮನುಜನನ್ನು ಹಿಡಿಯುವರಾರು. ಅದು ಸಾಧ್ಯವಿದ್ದಿದ್ದರೆ ಸ್ವಲ್ಪ ಭೂ ಭಾರ ಸಹ ಕಡಿಮೆಯಾಗುತ್ತಿತ್ತೋ ಏನೋ. ಅಂಬಕ್ಕನ ಆತ್ಮಹತ್ಯೆಯ ಪ್ರಕರಣ ಆ ಹಳ್ಳಿಯ ಮನೆಗಳಲ್ಲಿ ಹಾಸ್ಯ ಪ್ರಕರಣವಾಗಿ ಹಲವಾರು ವರ್ಷ ಜನರ ನೆನಪಿನಲ್ಲಿತ್ತು.

***

'ವ್ಯೂಹದಲ್ಲಿ ಬಂಧಿ' ಲೇಖನ ಮಾಲೆ-1

# ವಿಲಕ್ಷಣ ವ್ಯಕ್ತಿ

**- ಮಾಧುರಿ ಕೃಷ್ಣ**

1974ರಲ್ಲಿ ಅಕಸ್ಮಾತ್ ವರಪ್ರಸಾದದಂತೆ ಬೆಂಗಳೂರು ಪ್ರಾಧಿಕಾರದಿಂದ ಹೊಸ ಬಡಾವಣೆಯಲ್ಲಿ ವಸತಿ ನಿರ್ಮಿಸಿಕೊಳ್ಳಲು ಚೊಕ್ಕ ಜಾಗವೊಂದು ದೊರಕಿ, 1982ರಲ್ಲಿ ಮನೆ ಕಟ್ಟಿಕೊಂಡು ಬಂದು ಸೇರಿಕೊಂಡದ್ದಾಯ್ತು. ಆ ವಿಶಾಲ ಬಡಾವಣೆಯಲ್ಲಿ ಅಲ್ಲೊಂದು ಇಲ್ಲೊಂದು ಮನೆಗಳಿದ್ದು ಅತಿ ವಿರಳ ಜನಸಂಖ್ಯೆಯಿದ್ದರೂ ಪ್ರಕೃತಿ ಪ್ರೇಮಿಯಾದ ನಾನು ಬೆಳಗಿನ ಜಾವದಲ್ಲೇ ವಾಕಿಂಗ್ ಹೋಗುವ ಮನಸ್ಥಿತಿಯವಳಾದ್ದರಿಂದ ಯಾವ ಭಯಭೀತಿಗಳ ಸೋಂಕಿಲ್ಲದೆ ನಡಿಗೆಯನ್ನು ಆರಂಭಿಸಿಯೇ ಬಿಟ್ಟೆ. ಮುಖ್ಯ ರಸ್ತೆಯ ಆಸುಪಾಸಿನಲ್ಲಿರುವ ಎಲ್ಲ ಅಡ್ಡ ರಸ್ತೆಗಳಲ್ಲಿ ನಿರಾತಂಕವಾಗಿ ನಡೆಯುತ್ತ, ವಿನ್ಯಾಸಿತ ಉದ್ಯಾನ, ಗಿಡಮರಗಳ ಹಸಿರಿನಲ್ಲಿ ಮನಸೋ ಅಡ್ಡಾಡಿಕೊಂಡು ಉದಿಸುವ ಸೂರ್ಯನ ಬಂಗಾರದ ಬಿಂಬವನ್ನು ಆಹ್ಲಾದಿಸುತ್ತ ಪುಳಕಿತಳಾಗಿ ಸುಮಾರು ಒಂದು ಗಂಟೆಗೂ ಜಾಸ್ತಿ ಅಡ್ಡಾಡಿಕೊಂಡು ಬರುವ ನನ್ನಲ್ಲಿ ಮುಂದಿನ 24 ಗಂಟೆಗಳಿಗೆ ಅಗತ್ಯವಾದ ನವೀಕರಿಸಿದ ಚೈತನ್ಯ ಸದಾ ಲಕಲಕಿಸುತಿತ್ತು.

ತಿಂಗಳೆರಡೋ ಮೂರೋ ಕಳೆದಿತ್ತು. ಅಂದೂ ಎಂದಿನಂತೆ ಸುಪ್ರಭಾತದ ಸಂಭ್ರಮದ ಗುಂಗಿನಲ್ಲೇ ತೇಲಿಕೊಂಡು ಹೆಜ್ಜೆಯಿಡುತಿದ್ದೆ. ಫಕ್ಕನೆ ಏನೋ ಅನುಭವಕ್ಕೆ ಬಂದಂತಾಯ್ತು. ನಾನು ಒಂಟಿಯಲ್ಲ, ನನ್ನೊಂದಿಗೆ ಇನ್ಯಾರೋ ಹೆಜ್ಜೆ ಹಾಕುತಿದ್ದಾರೆ. ಕಾಲೇಜು ದಿನಗಳಲ್ಲಿ 'ಎಕ್ಸ್‌ಪ್ರೆಸ್ ಗಾಡಿ' ಎಂದು ಹೆಸರು ಗಳಿಸಿದ್ದ ನನಗೆ ಇದ್ಯಾರಪ್ಪ ನನ್ನ ಸಮಸಮನಾಗಿ ನಡೆದು ಬರುವವರು ಎಂದನಿಸಿ, ಮುಖ ತಿರುಗಿಸಿ ಪಕ್ಕಕ್ಕೆ ನೋಡಿದೆ.

ಅವನೋ ಸ್ವಲ್ಪ ಕ್ವಿಯರ್ ಲುಕಿಂಗ್ ವಿಲಕ್ಷಣ ವ್ಯಕ್ತಿಯಾಗಿ ಕುಳ್ಳು ಕುಳ್ಳಕ್ಕಿದ್ದ. ಹೂವು ಪತ್ರೆಗಳಿಂದ ಹೆಣೆದ ಶಾಲಿನಿಂದ ಹಣೆ ಕಣ್ಣು ಬಿಟ್ಟು ಮತ್ತೆಲ್ಲ ಮುಖ ಮುಚ್ಚಿಕೊಂಡು ನನ್ನದೇ ವೇಗದಲ್ಲಿ ಹೆಜ್ಜೆ ಹಾಕುತ್ತಲಿದ್ದ.

"ಯಾಕಯ್ಯಾ... ನನ್ನೊಂದಿಗೆ ಬರ್ತಾ ಇದ್ದೀ?" ಗದರಿದೆ ನಾನು.

"ಅಲ್ಲಾ, ಇಷ್ಟು ದಿನಗಳಿಂದಲೂ ನಾನು ನಿನ್ನೊಂದಿಗೇ ಬರ್ತಾನೇ ಇದ್ದೇನೆ ನಿಂಗೆ ಸ್ವಲ್ಪಾನೂ ಗೊತ್ತಾಗ್ಲೇ ಇಲ್ವೇ?" ಎಂದು ಯಾವ ಸಂಕೋಚವೂ ಇಲ್ಲದೇ ನನಗೇ ಮರು ಪ್ರಶ್ನೆ ಮಾಡಿದ.

'ಏನು? ಇವನು ಪ್ರತಿ ದಿನಾನೂ ನನ್ನೊಂದಿಗೇ ಹೀಗೇ ನಡೆದು ಬರ್ತಾ ಇದ್ನೇ, ಕೃಷ್ಣ ಕೃಷ್ಣಾ... ನಂಗೆ ಗೊತ್ತಾಗ್ಲೇ ಇಲ್ವಲ್ಲಾ' ಒಳಗಿಂದಲೇ ಚಡಪಡಿಸಿದೆ ನಾನು. 'ಅಲ್ಲಾ.. ಈ ಪರಪುರುಷ ದಿನಾ ನನ್ನೊಂದಿಗೆ ಬರೋದನ್ನು ಯಾರಾದ್ರೂ ನೋಡಿದವರು ಏನೆಂದುಕೊಂಡಿರಬಹುದು? ಅದು ನಮ್ಮೆಜಮಾನರ ಕಣ್ಣಿಗೂ ಬಿದ್ದಿರಬಹುದೇ? ಮುಂಜಾನೆಯಲ್ಲಿ ಗಡದ್ದಾಗಿ ನಿದ್ದೆ ಹೊಡೆಯುವ ಯಜಮಾನರ ಸ್ವಭಾವ ನಂಗೆ ಚೆನ್ನಾಗಿ ಗೊತ್ತಿದ್ದರೂ ಕೂಡಾ ಒಂದು ಕ್ಷಣ ಗಡಗಡ ನಡುಗಿದೆ.

ಅವನೋ, ಅದನ್ನೂ ಗ್ರಹಿಸಿದವನಂತೆ ಶಬ್ದ ಮಾಡಿ ನಕ್ಕ. "ಅದ್ಯಾಕೇ.. ಅಷ್ಟು ಭಯ ಬೀಳ್ತಾ ಇದ್ದೀ. ನಾನೇನಾದ್ರೂ ನಿಂಗೆ ತೊಂದರೆ ಕೊಟ್ಟೆನೇನು, ಸುಮ್ಮನೆ ಪಕ್ಕದಲ್ಲಿ ಬರುತಿದ್ದೆನಪ್ಪ, ಅಷ್ಟೆ!" ಎಂದ ಚೋದ್ಯದಿಂದ.

ಈಗಂತೂ ತೀವ್ರವಾಗಿ ಕಂಪಿಸಿಬಿಟ್ಟೆ ನಾನು! 'ಓ ದೇವ್ರೇ, ಇದೆಂಥಾ ಪೀಕಲಾಟವಪ್ಪಾ ನಂಗೆ!'

"ಎಲ್ಲಿ ವಾಸವಾಗಿದ್ದೀಯಾ ನೀನು? ಯಾವ ಮನೆಯಿಂದ ಹೊರಬಂದು ನನ್ನನ್ನು ಅನುಸರಿಸುತ್ತೀಯಾ ನೀನು? ನಮ್ಮ ಬೀದಿಯಿಂದಲೇ ಏನು?" ಅಳುಕು, ಆತಂಕ, ಭೀತಿ, ಭಯ, ಮುಜುಗುರ ಸಂಕೋಚಗಳೆಲ್ಲ ಒಟ್ಟಿಗೆ ಸೇರಿಕೊಂಡು ನನ್ನನ್ನು ಘಾಸಿಗೊಳಿಸತೊಡಗಿದುವು. ಹೆಜ್ಜೆ ಮುಂದಿಡಲಾಗದೆ ಸ್ಥಂಭಿಸಿಬಿಟ್ಟೆ.

"ಯಾಕೆ ನಿಂತೇಬಿಟ್ಟೆ? ನಡಿ, ನಡೀ, ವಾಕಿಂಗ್ ಮುಗಿಸಿಯೇಬಿಡೋಣ. ಮತ್ತೆ ಅವರವರ ವಾಸಕ್ಕೆ ತೆರಳೋದು ಇದ್ದೇ ಇದೆಯಲ್ಲ!''

'ವಾಕಿಂಗ್! ಇವನೊಂದಿಗೆ!' ಆಚೆ ಈಚೆ ನೋಡಿದೆ. ಪಾರ್ಕಿನೊಳಗೆ ಗಂಡಸರೂ, ಹೆಂಗಸರೂ ಒಬ್ಬೊಬ್ಬರಾಗಿ ಬರತೊಡಗಿದ್ದರು. ಇವನೆಂದಂತೆ ವಾಕಿಂಗ್ ಮುಗಿಸಿಬಿಡೋದೇ ವಾಸಿ ಎಂದುಕೊಂಡು ಅಡಿ ಮುಂದಿಟ್ಟೆ, ಅವನೂ ಅಷ್ಟೇ ಚುರುಕಾಗಿ ನಡೆ ತಿರುಗಿಸಿದ ಮತ್ತು ಕೇಳಿದ, "ಏನು ಬೇಗ ಮುಗಿಸುವ ಇರಾದೆಯಾ?"

ಕೇಳಿಸಿಕೊಳ್ಳದವಳಂತೆ ನಡೆಯತೊಡಗಿದೆ. ಅವನೂ ಜತೆಯಲ್ಲೇ ಸಾಗಿ ಬಂದ. "ಯಾಕೆ? ಯಾಕೆ ಹೀಗೆ ನನ್ನನ್ನ ಫಾಲೋ ಮಾಡ್ತೀಯಾ?" ಗುಡುಗಿದೆ.

ಅವನು ಕಿಸಕ್ಕನೆ ಬಾಯ್ತೆರೆದು ನಕ್ಕುಬಿಟ್ಟ. ಆ ನಗೆಯೋ.. ಅದೆಷ್ಟು ಸುಂದರ...! ಜಗದ ಕಣಕಣದಲ್ಲಿನ ನಿತ್ಯ ನೂತನತೆ, ಮುಗ್ಧತೆ, ಮೋಹಕತೆ ಎಲ್ಲಾ ದೈವೀಕರಿಸಿಕೊಂಡು ಅವಿರತ ನಿರಂತರತೆಯಾಗಿ ಮೂಡಿ ಬಂದಿತ್ತು, ಮಾತ್ರವಲ್ಲ ಎಲ್ಲ ವಿಘ್ನಗಳನ್ನೂ ದೂರ ಮಾಡುವ ಅರಿಷ್ಟನೇಮಿಯಂತೆ ಗದರಿಸುವ ಚೇಷ್ಟೆಯಿಂದಲೂ ಕೂಡಿತ್ತು.

"ಮತ್ತೇ ಕಳೆದೆರಡು ತಿಂಗಳಿಂದ ಈ ದಾರಿಯಲ್ಲೇ ನಡೆದು ಹೋಗುತ್ತಿದ್ದೀಯಾ, ಹಾಗೇ ವಾಪಾಸು ಹಿಂದಿರುಗುತ್ತೀಯಾ, ಯಾರೂ ಯಾವಾಗಲೂ ಒಂಟಿಯಲ್ಲ. ನಾವು, 'ನಾವು' ಆಗಿರುತ್ತೇವೆ, ನೆಲ್ಲೀಕಾಯಿಯಂತೆ ನೈಸರ್ಗಿಕವಾಗಿ ಕೂಡಿಕೊಂಡಿರುವವರು, ದೈವಿಕತೆಯಿಂದ ಬಂಧಿಸಲ್ಪಟ್ಟವರು. ಭಾವನೆಗಳನ್ನು, ಆಲೋಚನೆಗಳನ್ನು, ನಡೆವಳಿಕೆಗಳನ್ನು ಗಮನಿಸಿಕೊಳ್ಳಬೇಕು! ಸತ್ಯವೇ ದೈವೀ ಸಂಪತ್ತು. ಅಹಂಕಾರ, ಪ್ರತಿಷ್ಠೆಗಳಲ್ಲ!"

ಭಾರೀ ಬುದ್ಧಿವಂತನಂತೆ ಮಾತನಾಡುತ್ತ ಬಂದ. ಆ ದೊಡ್ಡ ಸುಗಂಧಭರಿತ ಸಂಪಿಗೆ ಮರದ ವೃತ್ತಕ್ಕೆ ಬಂದೆವು. ಮಾತು ನಿಂತಿತು. ಅವನನ್ನು ಆಚೆಯೊಮ್ಮೆ ಈಚೆಯೊಮ್ಮೆ ಹುಡುಕಿದೆ. ಕಾಣಿಸಲಿಲ್ಲ. ಬರೇ ಒಂದು ಪುಟ್ಟ ಗುಡಿ ಅಲ್ಲಿತ್ತು. ಒಳಗೊಂದು ದೀಪ ಬೆಳಗುತಿತ್ತು. ಬಾಗಿಲ ಮೇಲೆ ಘಂಟೆಯೊಂದು ತೂಗುತಿತ್ತು.

ಕೈಯೆತ್ತಿ ಆ ಘಂಟೆಯನ್ನು ಠಣ್ ಎಂದು ಬಾರಿಸಿ ನಾನು ನಡಿಗೆ ಮುಂದುವರೆಸಿ ಮನೆಗೆ ಬಂದು ಸೇರಿಕೊಂಡೆ.

***

## ಭೂಮಿಗಿಳಿಯಲೇಬೇಕು ನೆನಪಿಡು

– ಎಲ್. ಗಿರಿಜಾ ರಾಜ್ ಎಲ್

ಹಾರುವಷ್ಟು ಹಾರಿಬಿಡು
ಏರುವಷ್ಟು ಏರಿಬಿಡು
ಭೂಮಿಗಿಳಿಯಲೇಬೇಕು ನೆನಪಿಡು!

ಹಾರುವಾಗ, ಏರುವಾಗ, ಇಳಿದು
ಬರುವಾಗ ಹಾದು ಬರಬೇಕು
ಎಡರು ತೊಡರುಗಳನು! ಎಚ್ಚರ!
ಎಲ್ಲೋ ಸಿಕ್ಕಿಕೊಂಡು, ಹರಿದೀತು
ಸೂತ್ರ, ಮುಗಿಯುವುದು ಪಾತ್ರ!

ಗೋತ ಹೊಡೆಯದೆ ಗುರಿ
ಸಾಗುವುದಕೆ, ಹಿರಿಯರ ನುಡಿ
ರತ್ನಗಳೇ, ಬಾಲಂಗೋಚಿಯ ಅಂಕೆ!

ಪಲ್ಟಿ ಹೊಡೆದರೆ, ಸೋತ
ಭಾವವಿದೇಕೆ? ಸೋಲಲ್ಲಿಯೇ
ಗೆಲುವು; ಪರಾಭವ, ಪಾಠವು
ಕಲಿಸುವುದು ಬಾಳಿಗದೇ ಒಲವು!
ನಿಜದ ನಲಿವು, ಸೋತ ನಂತರದ ಜಯವು!

ಬಿದ್ದು ಬಿದ್ದು ಮೇಲೆದ್ದುದು ಸೋಲಲ್ಲ
ಸಿಹಿಕಹಿಗಳ ಸಂಗಮವೇಬಾಳ ಲೀಲೆ!
ಹಾದಿ ನಿರ್ಮಿಸದೇ? ಅನುಭವಗಳ ಮಾಲೆ

ಮೇಲೆ ಹಾರುವ ಪಟಕೆ ಗಾಳಿಯೇ ಇಂಧನ,
ಉಸಿರಾಡಲು ಅದುವೆ  ಜೀವ ಸ್ಪಂದನ,
ಜೀವ ವೀಣೆ ಮಿಡಿದಿದೆ,
ಆತ್ಮ- ಪರಮಾತ್ಮ ಸಮ್ಮಿಲನ!

ನಮ್ಮ ಕೈಯೊಳಗಿದೆ ನಿಮ್ಮ ಸೂತ್ರ
ಅವನ ಕೈಯಲ್ಲಿದೆ ನಮ್ಮ ಸೂತ್ರ!
ಮೇಲಿಹನ ಸಂಕಲ್ಪ ನಮ್ಮ ಪಾತ್ರ!

ಮುಗಿವುದು ಪಾತ್ರ, ಹರಿದರೆ ಸೂತ್ರ!

***

## ಬದುಕು – ಪಗಡೆ

– ಸುಜಾತಾ ರವೀಶ್

ಮಧ್ಯ ಹಾಸಿರಲು ರಂಗಿನ ಪಗಡೆಯ ಹಾಸು
ಕಪ್ಪು ಕೆಂಪು ಹಳದಿ ಹಸಿರು ಕಾಯಿಗಳು
ಹಿತ್ತಾಳೆಯೋ ದಂತವೋ ಪಿಂಗಾಣಿಯೋ
ಶಕ್ತ್ಯಾನುಸಾರದಲಿ ಸಿದ್ಧವಾದ ದಾಳಗಳು

ಮೂರು ಮನೆಗಳಿಗೊಂದು ನಿಲುಗಡೆ ಘಟ್ಟ
ವಿಶ್ರಮಿಸಲಲ್ಲ! ಸಾಗುವ ಹೆಜ್ಜೆ ಎಣಿಸಲು
ಆರಂಭದಿಂದ ಅಂತ್ಯದವರೆಗೆ ನಿಲ್ಲದ ಓಟ
ಬಾಳಿನ ಅಲೆದಾಟದಂತೆಯೇ ಸೂಕ್ತ ರೂಪಕ

ದುಗ ಇತ್ತಗ ಎಂಟು ಹನ್ನೆರಡರ ಜೋಡಿಗಳು
ಅಟ್ಟಿಸಿ ಗೂಳಿಯಂತೆ ಗುದ್ದುವ ಎದುರಾಳಿಗಳು
ಒಂದು ಸುತ್ತು ಹಾಸು ಸುತ್ತಿ ಮನೆಗೆ ಮರಳಿ
ಮಲಗಿ ಹಣ್ಣಾದರೆ ಆಗ ಮಾತ್ರ ನಿಶ್ಚಿಂತೆ

ವಿಶೇಷವಾದ ಹತ್ತರ ಆಟ ಒಂಬತ್ತರ ಆಟ
ಹಾಸಿನ ಮನೆಗಳ ಮೇಲೆ ಕಾಯಿ ನಡೆಸುವಾಟ
ಜೀವನವ ಇದಕೆ ಹೋಲಿಸುವ ಮಾಟ
ವಿಧಿಯೆಂಬ ಆಟಗಾರನದೆ ಮೇಲ್ಗೈಯ ಹೂಟ

ಬದುಕಿನಲ್ಲಿ ನಮ್ಮಿಷ್ಟದಂತೆ ಏನು ನಡೆಯದು
ಎಂಬಂತೆ ಬೇಕಾದಾಗ ಬೀಳದ ಗರಗಳು
ಹೆಚ್ಚಿನ ಆಸೆಯಲಿ ಕಟ್ಟುತಿರೆ ಜೋಡಿಗಳ
ಬರಸಿಡಿಲು ಬಡಿದಂತೆ ಮನೆಗೆ ಮರಳುವವು

ಹಿಂದೆ ಶಕುನಿ ಹೇಳಿದಂತೆ ಕೇಳುವ ದಾಳ
ಹೊಂದಿದ್ದವಂತೆ ಪಿತ ಸೋದರರ ಆಸ್ತಿಗಳ
ಆಟವನು ದ್ಯೂತವಾಗಿಸಿ ಬೆಳೆಯುವ ದಾಹ
ಸೋದರರ ಸತಿಯ ನ್ಯಾಸವಾಗಿಸುವ ವ್ಯಾಮೋಹ

ರಾಜ್ಯಗಳ ದೇಶಗಳ ಬಂಧುಗಳ ವಿರಸ
ಇದರಿಂದಾಗಿಯೇ ಅದೆಷ್ಟೋ ಪ್ರಾಣ ನಾಶ
ಮೋಜಿಗಾಗಿಯೇ ಇರಲಿ ಜೂಜಾಗಿ ಬೇಡ
ಪರಂಪರೆ ಇತಿಹಾಸಗಳ ಮರೆಯುವುದು ಬೇಡ

***

ಪ್ರವಾಸ ಕಥನ

# ಮಹಾಬಲಿಪುರಂ

– ರವಿ ಕುಸಬಿ

ಮಹಾಬಲಿಪುರಂನಲ್ಲಿ ನಾವು ನೋಡಿದ ವಿಶೇಷ ಸ್ಥಳ ಕೃಷ್ಣ ಮಂಟಪ. ಈ ಮಂಟಪವನ್ನು ದೊಡ್ಡದಾಗಿ ನಿಂತಿರುವ ಬಂಡೆಯಲ್ಲಿ ಕೆತ್ತಿದ್ದಾರೆ. ನಮ್ಮ ಬಾದಾಮಿಯಲ್ಲಿ ದೊಡ್ಡ ಬಂಡೆಗಳಲ್ಲಿ ಕೊರೆದು ದೇವಸ್ಥಾನ ಮಾಡಿದಂತೆ, ಅದೇ ರೀತಿಯ ಶಿಲ್ಪ ಕಲೆ ಇಲ್ಲಿದೆ. ಆದರೆ ಬಂಡೆಯ ಮೇಲೆ ಅನೇಕ ರೀತಿಯ ಉಬ್ಬು ಶಿಲ್ಪಗಳನ್ನು ಅತ್ಯಂತ ನಯವಾಗಿ ಕೆತ್ತಿದ್ದಾರೆ. ಅದರಲ್ಲಿ ಅರ್ಜುನ ಪೆನೆಸ್, ಅಂದರೆ "ಅರ್ಜುನನ ತಪಸ್ಸು" ಹಾಗೂ "ಗಂಗಾವತರಣ" ಬಂಡೆಗಳ ಚಿತ್ರಗಳು ಜಗತ್‌ಪ್ರಸಿದ್ಧಿ ಪಡೆದಿವೆ. ಅವುಗಳನ್ನು ನೋಡಲು ದೇಶವಿದೇಶಗಳಿಂದ ಜನ ಬರುತ್ತಾರೆ. ಅವು ಕೂಡ ಅಷ್ಟೇ ಸುಂದರವಾಗಿದೆ. ಕಣ್ಮನಗಳನ್ನು ತಣಿಸುತ್ತವೆ. 100 ಮೀಟರ್ ದೂರದವರೆಗೆ ಅನೇಕ ಮಂಟಪ ಹಾಗೂ ಮಂಟಪಗಳಿಲ್ಲದೆ ಇವರ ಕೆತ್ತನೆ ಸಾಗಿದೆ. ಕೆಲವೊಂದು ಕಡೆ ಜೀವನ ಚಕ್ರದ (ಬಯಾಲಾಜಿಕಲ್ ಚೈನ್) ಚಿತ್ರಗಳಿವೆ.

ಅರ್ಜುನ್ ತಪಸ್ಸು– ಈ ಬಂಡೆಯಲ್ಲಿ ಅರ್ಜುನ ತಪಸ್ಸಿಗಾಗಿ ನಿಂತಿರುವುದು, ನಿಂತ ಅರ್ಜುನನು ಉಪವಾಸದಿಂದ ಕೃಶನಾಗಿ ಅವನ ದೇಹದ ಪಕ್ಕೆಲುಬುಕ್ಕೆಗಳು ಕಾಣುತ್ತವೆ. ಅದೂ ಕೂಡ ಉಬ್ಬುಗಲ್ಲಿನ ಚಿತ್ರದಲ್ಲಿ. ಒಂದು ಚೂರು ಹೆಚ್ಚು ಕಡಿಮೆಯಾಗದಂತೆ ಗಾತ್ರ, ಉದ್ದ, ಅಗಲ, ಎಲ್ಲವುಗಳೂ ಸಮಾನವಾಗಿ ಮೂಡಿಬಂದಿವೆ. ಅಂದರೆ ಅದೆಂತಹ ಉತ್ಕೃಷ್ಟವಾದ ಶಿಲ್ಪಿಗಳು ಆ ಕಾಲದಲ್ಲಿ ಇದ್ದರು ಎಂಬುದು ಅರಿವಾಗುತ್ತದೆ. ಇದೇ ಬಂಡೆಗಲ್ಲಿನ ಮೇಲೆ ಹತ್ತು ರೂಪಾಯಿಯ ಮೇಲೆ ಮುದ್ರಿತವಾಗಿರುವ ಜೋಡಿ ಜಿಂಕೆಗಳ ಚಿತ್ರ ಇದೆ. ಜೊತೆಗೆ ಹತ್ತು ಹಲವಾರು ಚಿತ್ರಗಳು ಬೇರೆಬೇರೆ ಕಥೆಗಳನ್ನು, ಬೇರೆಬೇರೆ ಘಟನೆಗಳನ್ನು ಹೇಳುತ್ತಾ ನಮ್ಮ ಮನಸ್ಸೂರೆಗೊಳ್ಳುತ್ತವೆ. ಈ ಅರ್ಜುನನ ತಪಸ್ಸಿನ ಪಕ್ಕದಲ್ಲಿಯೇ ಮೇಲಿನಿಂದ ನೀರು ಬೀಳುವಂತಹ ಒಂದು ಜಾಗವನ್ನು ನಿರ್ಮಿಸಿದ್ದಾರೆ. ಅದು ಗಂಗಾವತರಣದ ಕಥೆ. ಮೊದಲು ಅಲ್ಲಿ ನೀರು ಹರಿಯಲು ಒಂದು ಕಲ್ಲಿನ ಹರನಾಳಿಗೆಯನ್ನು ಜೋಡಿಸಿದ್ದರೆಂದು ತೋರುತ್ತದೆ.



ಮುಂದೆ ನಡೆಯುತ್ತ ಬಂದಾಗ ಕಂಡದ್ದು, ಕೃಷ್ಣನ ಬೆಣ್ಣೆ ಉಂಡೆ. ಸುಮಾರು 20–25 ಅಡಿ ಎತ್ತರದ ದೊಡ್ಡ ಗ್ರಾನೈಟ್ ಬಂಡೆ. ಅದು ಅರ್ಧ ಬೆಟ್ಟ ಜಾರಿ ಬಂದು, ಒಂದು ಇಳಿಜಾರು ಬಂಡೆಯ ತುದಿಯ ಮೇಲೆ ನಿಂತಿದೆ. ನೋಡಿದರೆ, ಸ್ವಲ್ಪ ಅಲಗಾಡಿಸಿದರೆ ಸಾಕು, ಕೆಳಗೆ ಉರುಳಿ ಬರುತ್ತದೆ ಎನ್ನುವಂತಿದೆ ಆ ಬಂಡೆ. ಆದರೆ ಅಷ್ಟು ಸುಲಭಕ್ಕೆ ಅದು ಬೀಳುವಂತಿಲ್ಲ. ಅದು ನಿಂತಿರುವ ಇಳಿಜಾರಿನ ಜಾಗ, ಅದರ ಆಕೃತಿ, ಅದು ನಿಂತಿರುವ ಜಾಗದ ಇಳಿಜಾರು (Slope) ಇವನ್ನೆಲ್ಲ ನೋಡಿದಾಗ ಸ್ವಲ್ಪ ಅಲುಗಾಡಿಸಿದರೆ ಸಾಕು ಈ ಬಂಡೆ ಕೆಳಗೆ ಉರುಳಿ ಬರುತ್ತದೆಯೇನೋ ಎಂದನಿಸುತ್ತದೆ. ಇದನ್ನು ಎಲ್ಲರೂ ಕೃಷ್ಣ ಬಟರ್ ಬಾಲ್ ಅಂದರೆ ಕೃಷ್ಣನ ಬೆಣ್ಣೆ ಉಂಡೆ ಎಂದು ಕರೆಯುತ್ತಾರೆ. ಆದರೆ ಇದಕ್ಕೂ ಮಥುರೆಯ ಕೃಷ್ಣನಿಗೂ ಏನು ಸಂಬಂಧ ಇಲ್ಲ. ಇಲ್ಲಿನ ಕಲಾಕೃತಿಗಳನ್ನು ಕೆತ್ತುವಾಗ ಆಗಿನ ರಾಜ ಇದನ್ನು ಉರುಳಿಸಲು ಆರು ಆನೆಗಳನ್ನು ಬಳಸಿದರೂ ಅದು ಅಲ್ಲಾಡಿಲ್ಲ. ಹೀಗಾಗಿ ಅದನ್ನು ಕದಲಿಸುವ ಪ್ರಯತ್ನವನ್ನು ರಾಜರು ಬಿಟ್ಟುಬಿಟ್ಟರು. ನಂತರ ಯಾರೂ ಪ್ರಯತ್ನಕ್ಕೆ ಕೈ ಹೆಚ್ಚಿಲ್ಲ. ಹಾಗೆಂದು ಸುಮ್ಮನಿರಲಾದೀತೆ? ನಾನು ಕೂಡ ಒಂದು ಕೈ ನೋಡಿದೆ. ನನ್ನ ಕೈ ನೋವಾಯಿತೇ ಹೊರತು ಬಂಡೆ ಕ್ಯಾರೆ ಎನ್ನಲಿಲ್ಲ. ಎಲ್ಲರೂ ಇದೇ ರೀತಿ ಒತ್ತುವ ಪೋಸ್ ಕೊಟ್ಟು ಫೋಟೋಗಳನ್ನು

ತೆಗೆದುಕೊಂಡರು. ಬಂದವರೆಲ್ಲ ಈ ಬಂಡೆಗಳಿಗೆ ನಿಂತು ಬಂಡೆ ಎತ್ತುವಂತೆ ಬಂಡೆಯನ್ನು ನೂಕುವಂತೆ ನಿಂತು ತಮ್ಮ ಛಾಯಾಚಿತ್ರಗಳು ತೆಗೆಸಿಕೊಳ್ಳುತ್ತಾರೆ. ಬಂಡೆಯಿಂದ ಕೆಳಗಡೆಗೆ ಕಲ್ಲಿನ ಮೇಲೆ ಜನ  ಇಳಿದು ಇಳಿದು ಅದು ಜಾರುಬಂಡೆಯ ರೂಪ ಪಡೆದಿದೆ. ಕೆಲವೊಬ್ಬರು ಆ ಜಾಗದಲ್ಲಿ ಕುಳಿತು ಜಾರುಬಂಡೆ ಆಡಿ ಕೆಳಗೆ ಬರುತ್ತಾರೆ. ಆದರೆ ಆ ಬಂಡೆಗಲ್ಲಿನ ಏರು ಮೈ (ಸ್ಲೋಪ್) ಅಷ್ಟು ಸುಲಭವಿಲ್ಲ. ನಾನಾದರೂ ಚಪ್ಪಲಿ ಧರಿಸಿ ಹತ್ತಲು ವಿಫಲನಾದಾಗ ಚಪ್ಪಲಿಯನ್ನು ಕೈಯಲ್ಲಿ ಹಿಡಿದು ನೇರವಾಗಿ ಮೇಲೆ ಹತ್ತಿದೆ. ಆದರೆ ನನ್ನ ಜೊತೆಗಿದ್ದ ನನಗಿಂತ ಸ್ವಲ್ಪ ಹೆಚ್ಚು ವಯಸ್ಸಾದ ನನ್ನ ಸಹಪ್ರಯಾಣಿಕರು ಸ್ವಲ್ಪ ದೂರದಲ್ಲಿ ನಡೆದು ಅಲ್ಲಿಂದ ಮೇಲೆ ಹತ್ತಿ ಇಳಿದು ಬಂಡೆ ಹತ್ತಿರ ಬಂದು ತಮ್ಮ ಫೋಟೋ ತೆಗೆಸಿಕೊಂಡರು.

ಅಕ್ಕಪಕ್ಕದಲ್ಲಿ ಕೆಲವು ಪುಟ್ಟ ದೇವಸ್ಥಾನಗಳು, ಬೇರೆಬೇರೆ ಆಕೃತಿಯಲ್ಲಿ ನಿಂತಿರುವ ಬಂಡೆಗಳು ಇದ್ದವು.  ಬಿಸಿಲಿನ ಝಳಕ್ಕೆ ಓಡಾಡಿ ಸುಸ್ತಾದ ನಾವು ಒಂದು ಕಡೆ ನಿಂತು ವಿಶ್ರಮಿಸಿಕೊಂಡೆವು. ಈ ಬಂಡೆಗಳ ಸುತ್ತಮುತ್ತಲೂ ಸರಕಾರದವರು ಪಾರ್ಕ್ ಮಾಡಿದ್ದಾರೆ.  2021ರಲ್ಲಿ ಚೀನಾದ ಪ್ರಧಾನ ಮಂತ್ರಿ ಭಾರತಕ್ಕೆ ಬಂದಾಗ ಅವರನ್ನು ಮೋದಿಜಿ ಅವರು ಇದೇ ಜಾಗದಲ್ಲಿ ನಿಂತು ಸ್ವಾಗತಿಸಿ ಇಲ್ಲಿಯೇ ಸತ್ಕಾರವನ್ನು ಮಾಡಿದರು. ಅದಕ್ಕಾಗಿ ಒಂದೆರಡು ಹೊಸ ಪಾರ್ಕುಗಳನ್ನು ನಿರ್ಮಿಸಲಾಗಿದೆ. ಈ ಬಂಡೆ ಇರುವ ಪಾರ್ಕಿಗೆ ಪ್ರವೇಶ ದರ ಇದೆ.

**ಸೀ ಶೋರ್ ಟೆಂಪಲ್ಸ್ (ಕಡಲ ತಡಿ ದೇವಸ್ಥಾನಗಳು):**

ಸಮುದ್ರ ತಡಿಯ ಮಧ್ಯಾಹ್ನದ ಬಿರು ಬಿಸಿಲಿನಲ್ಲಿ ಬಾಯಿಬಾಯಿ ಬಿಡುತ್ತ ಮುಂದೆ ನಾವು ನಡೆಯುತ್ತಾ ಹೋದದ್ದು ಸಿ ಶೋರ್ ಟೆಂಪಲ್ ನೋಡಲು. ಇದು ಸಮುದ್ರ ದಂಡೇಲಿ ಇರುವುದರಿಂದ ಇದನ್ನು ಸಿ ಶೋರ್ ಟೆಂಪಲ್ ಅಂದರೆ ಸಮುದ್ರ ತಟದ ದೇವಸ್ಥಾನ ಎನ್ನುತ್ತಾರೆ. ಸುನಾಮಿಯ ಹೊಡೆತ ಬರುವುದಕ್ಕಿಂತ ಮುಂಚೆ ಇಲ್ಲಿ ಏಳು ದೇವಾಲಯಗಳು ಇದ್ದವೆಂದು ಇತಿಹಾಸ ಹೇಳುತ್ತದೆ. ಇದನ್ನು ಕೆಲವೊಂದು ಕಡೆ ಸಾತ್ ಪಗೋಡ ಟೆಂಪಲ್ (ಅಂದರೆ ಏಳು ಗೋಪುರ ದೇವಸ್ಥಾನ) ಎಂದು ಕೂಡ ಕರೆದಿದ್ದಾರೆ. ಈಗ ಅಲ್ಲಿರುವುದು ಒಂದೇ ಒಂದು ದೇವಸ್ಥಾನ ಮಾತ್ರ. ಸುನಾಮಿಯ ಹೊಡೆತದಲ್ಲಿ ಎಲ್ಲ ದೇವಸ್ಥಾನಗಳು ಮತ್ತು ಅವುಗಳ ಜೊತೆಗೆ ಎಲ್ಲ ಕಲಾಕೃತಿಗಳು ಕಿತ್ತು ಚೆಲ್ಲಾಪಿಲ್ಲಿ ಆಗಿ ಬಿದ್ದಿವೆ. ಉತ್ಖನನದಲ್ಲಿ ಅವುಗಳನ್ನು ತೆಗೆದ ಬ್ರಿಟಿಷರು, ದೇವಾಲಯದ ಸುತ್ತಮುತ್ತ ಈ ಅವಶೇಷಗಳನ್ನು ಜೋಡಿಸಿಟ್ಟಿದ್ದಾರೆ. ಅವುಗಳಲ್ಲಿ ಕೆಲವು ನಂದಿ ವಿಗ್ರಹಗಳು ಸಾಲಾಗಿ ನಿಂತಿವೆ. ದೇವಾಲಯಗಳ ಸುತ್ತ ವಿವಿಧ ಕಟ್ಟಡಗಳ ಪಳೆಯುಳಿಕೆಗಳು ಕಾಣುತ್ತವೆ. ಸುತ್ತಮುತ್ತ ಮುರಿದ, ಕಡಿದ, ಅರ್ಧವಾಗಿ ನಿಂತಿರುವ ಉಳಿದ ದೇವಾಲಯಗಳ ಅವಶೇಷಗಳು ಇಡೀ ಜಾಗದಲ್ಲಿ ಹರಡಿವೆ. ಸುಮಾರು ಮೂರು ಎಕರೆ



ಪ್ರದೇಶದಲ್ಲಿ ಸರ್ಕಾರದವ್ರು ಪಾರ್ಕ್ ಮಾಡಿದ್ದಾರೆ. ಅಲ್ಲಿಂದ 100 ಮೀಟರ್ ದೂರ ಗೇಟಿನಲ್ಲಿ ನೀವು ಟಿಕೆಟ್ ಪಡೆದು ಒಳಗೆ ಹೋಗಬೇಕು. ಈ ನೂರು ಮೀಟರ್ ಜಾಗವನ್ನು ಕ್ರಮಿಸಲು ಬ್ಯಾಟರಿಚಾಲಿತ ಕಾರುಗಳಿವೆ. ಇದು ಹಿರಿಯರಿಗೆ ಮತ್ತು ಅಂಗವಿಕಲರಿಗೆ ಮಾತ್ರ. ನಮ್ಮ ಬಸ್ಸಿನಲ್ಲಿ ಬಂದವರೆಲ್ಲ 60ಕ್ಕಿಂತ ಮಿಗಿಲಾದವರೇ ಇದದುದರಿಂದ ಎಲ್ಲರೂ ಆ ಕಾರುಗಳಲ್ಲಿ ಸಾಗಿ ದೇವಸ್ಥಾನವನ್ನು ನೋಡಿ ಬಂದೆವು. ಆ ಕಾರಲ್ಲಿ ಬಂದರೂ ಕೂಡ ಮುಂದೆ 50 ಮೀಟರ್ ನಡೆಯುತ್ತಲೇ ಹೋಗಬೇಕು ಅದಕ್ಕೆ ಯಾವುದೇ ಕಾರುಗಳಿಲ್ಲ. ಆದರೆ ಸುತ್ತಮುತ್ತಲು ಹಸಿರು ಹುಲ್ಲಿನ ಹಾಸಿಗೆ, ಅದಕ್ಕೆ ಚೆಲ್ಲುವ ನೀರಿನ ಚಿಲುಮೆಗಳು ಸ್ವಲ್ಪ ವಾತಾವರಣವನ್ನು ತಂಪಾಗಿಸಿ ಆರಾಮವನ್ನು ನೀಡುತ್ತವೆ. ಪಕ್ಕದಲ್ಲಿ ಚಿಮ್ಮುವ ನೀರು ಖುಷಿಕೊಡುತ್ತದೆ.

ಈಗ ಇಲ್ಲಿರುವುದು ಒಂದೇ ಒಂದು ಪುಟ್ಟ ಗುಡಿ. ಅದರ ಮೂಲ ದೇವರೂ ಊನವಾಗಿರುವುದರಿಂದ ಅಲ್ಲಿ ಪೂಜೆ ನಡೆಯುವುದಿಲ್ಲ. ಅದರ ಸುತ್ತಮುತ್ತಲೂ ಮೊದಲು ಇಲ್ಲಿದ್ದಂತಹ ಗುಡಿಗಳ ಅವಶೇಷಗಳನ್ನು ಸಾಲಾಗಿ ಜೋಡಿಸಿ ಇಟ್ಟಿದ್ದಾರೆ. ಬಹಳ ಹಿಂದೆ ಜಾಗದಲ್ಲಿ ಇದ್ದಿರಬಹುದಾದ ವೈಭವವನ್ನು ನೆನೆದು ಅವೆಲ್ಲ ರೋದಿಸುತ್ತಿರುವಂತೆ ಭಾಸವಾಗುತ್ತದೆ. ಉಳಿದಿರುವ ಗುಡಿಯ ಮುಂದೆ ಎತ್ತರವಾಗಿರುವ ರಂಗಮಂಚದಂಥ ಒಂದು ಪೀಠ ಉಳಿದಿದೆ. ಬಂದಿರುವ ಜನರೆಲ್ಲ ಅದರ ಮೇಲೆ ನಿಂತು ಫೋಟೋ ತೆಗೆಸಿಕೊಳ್ಳುವುದರಲ್ಲಿ ತಲ್ಲೀನರಾಗಿರುತ್ತಾರೆ. ರೋದಿಸುವ ಈ ಶಿಲೆಗಳ ಕೂಗು ಕೇಳುವುದು ಕೆಲವೊಬ್ಬರಿಗೆ ಮಾತ್ರ. ಅಲ್ಲೇ ಬರೆದಿರುವ ತಮಿಳು ಶಿಲಾಶಾಸನದಲ್ಲಿ 1001 CE ನಲ್ಲಿ ತಮಿಳು ರಾಜ ಪಲ್ಲವ ರಾಜರು ಕಟ್ಟಿಸಿದ ಈ ದೇವಸ್ಥಾನಕ್ಕೆ  ಮಧ್ಯಮ ವಯಸ್ಸಿನ ಭಕ್ತನೊಬ್ಬ ಬಂಗಾರದ ಮುಕುಟವನ್ನು ಕಾಣಿಕೆ ನೀಡಿದ ಎಂದು (ಶಿಥಿಲವಾದ) ಬರಹವೊಂದಿದೆ. ಪಕ್ಕದಲ್ಲೇ ಸಮುದ್ರ ಇದೆ. ಆದರೆ ದೇವಸ್ಥಾನದ ಸುತ್ತಲೂ ಸರಕಾರದವರು ಬೇಲಿ ಹಾಕಿ ಈ ಚಾರಿತ್ರಿಕ ಅವಶೇಷಕ್ಕೆ ರಕ್ಷಣೆ ಒದಗಿಸಿದ್ದಾರೆ.

ಹೊತ್ತು ಆಗಲೇ ಬೆಳಿಗ್ಗೆ 10:30 ಆಗಿತ್ತು. ನಾವು ಎಲ್ಲರೂ ನಮ್ಮ ಬಸ್ಸು ನಿಂತ ನಿಲ್ದಾಣದ ಕಡೆಗೆ ನಡೆದೆವು. ಉರಿಬಿಸಿಲಿನ ತಾಪ ತಾಳಲಾರದೆ ಕೆಲವೊಬ್ಬರು ಎಳೆನೀರಿನ ತಂಪು ಪಾನೀಯವನ್ನು ಕುಡಿದು ಹೊಟ್ಟೆ ತಂಪು ಮಾಡಿಕೊಂಡು ಬಸ್ಸನ್ನು ತಲುಪುತ್ತಿದ್ದಂತೆ ಅಲ್ಲಿ ನಮ್ಮ ಜಗ್ಗಣ್ಣ ಟೀ ಕಾಫಿಯೊಂದಿಗೆ ಕಾಯುತ್ತಿದ್ದ. ಆ ಬಿಸಿಲಲ್ಲಿ ಕೂಡ  ನನ್ನಂಥವರು ಟೀ ಕಾಫಿ ಕುಡಿದು ಮುಂದಿನ ಪಂಚ ರಥಗಳ ಕಡೆಗೆ ನಡೆದವು.

**ಮಹಾಬಲಿಪುರಂ ಪಂಚ ರಥಗಳು**

**ಐದು ರಥಗಳ ದೇವಸ್ಥಾನ:** ನಮ್ಮ ಚಹಾ ಆದ ನಂತರ ಐದು ನಿಮಿಷಗಳ ನಡಿಗೆಯಲ್ಲಿ ನಾವು ಈ ಐದು ರಥಗಳ ದೇವಸ್ಥಾನವನ್ನು ತಲುಪಿದೆವು. ಈ ಕಲಾಕೃತಿಗಳನ್ನು ಐದು ರಥಗಳ ದೇವಸ್ಥಾನ ಎಂದು ಕರೆದರೂ ಇವು ರಥಗಳಲ್ಲ,



ದೇವಸ್ಥಾನಗಳೂ ಅಲ್ಲ. ಪಾಂಡವರ ಹೆಸರಲ್ಲಿ ಮಾಡಿದ ಐದು ಕಲಾಕೃತಿಗಳು. ಜೊತೆಗೆ ಒಂದು ಆನೆ ಹಾಗೂ ಕುದುರೆ. ಕೆಲವೊಮ್ಮೆ ಏಳು ರಥಗಳ ದೇವಾಲಯ ಎಂದು ಹೇಳುತ್ತಾರೆ. ಎಲ್ಲೋರಾವನ್ನು ಕೆತ್ತಿದ ರೀತಿಯಲ್ಲಿ ಇರಬಹುದಾದ ಬಂಡೆಗಳ ಹೊರ ಮೇಲ್ಮೈಯಿಂದ ಕಲ್ಲನ್ನು ತೆಗೆದು ತೆಗೆದು ಕಲಾಕೃತಿಯನ್ನು ಅರಳಿಸಿದ್ದಾರೆ. ಅದರಲ್ಲಿ ಐದು ಕಲಾಕೃತಿಗಳನ್ನು ಒಂದು ರೀತಿ ಮನೆಯ ಆಕೃತಿಯಲ್ಲಿ ಮಾಡಿದ್ದಾರೆ. ಅವುಗಳ ಅಗಲ, ಉದ್ದ ಹಾಗೂ ಅವುಗಳ ಮೇಲಿರುವ ಕುಸುರಿ ಕೆಲಸಗಳನ್ನು ಆಧರಿಸಿ ಅವಕ್ಕೆ ಒಂದೊಂದು ಹೆಸರು ಕೊಟ್ಟಿದ್ದಾರೆ. ಮೊದಲನೆಯ ಚಿಕ್ಕ ಚೆಂದದ ಗುಡಿಯನ್ನು ದ್ರೌಪದಿಗುಡಿ ಎಂದೂ, ನಂತರದ ವಿವಿಧ ಕೆತ್ತನೆ ಇರುವ ಗುಡಿಯನ್ನು ಅರ್ಜುನಗುಡಿ ಎಂದೂ, ಪಕ್ಕದಲ್ಲಿ ದೊಡ್ಡದಾದ ಅಗಲವಾದ ಗುಡಿಯನ್ನು ಭೀಮನಗುಡಿ ಎಂದೂ, ಕೊನೆಗೆ ಬರುವ ಇನ್ನೊಂದು ಗುಡಿಯನ್ನು ಧರ್ಮರಾಜನ ಗುಡಿ ಎಂದೂ, ಪಕ್ಕದಲ್ಲಿ ನಿಂತಿರುವ ಇನ್ನೊಂದು ಗುಡಿಗೆ ನಕುಲ ಸಹದೇವರ ಗುಡಿ ಎಂದೂ ಹೇಳುತ್ತಾರೆ. ಇವುಗಳ ಸುತ್ತಮುತ್ತ ಮರಳು ಹರಡಿಕೊಂಡಿದೆ.

ಏಳು ಹಾಗೂ ಎಂಟನೇ ಶತಮಾನದ ಮಧ್ಯದಲ್ಲಿ ಪಲ್ಲವರಾಜ ನರಸಿಂಹವರ್ಮನು ಇವುಗಳನ್ನು ಕೆತ್ತಿಸಿದ್ದಾನೆ ಎಂದು ಇತಿಹಾಸದಲ್ಲಿ ದಾಖಲೆ ಇದೆ. ಇಲ್ಲಿ ಪಾಂಡವರು ಬಂದಿರಲಿಲ್ಲ. ಆದರೂ ಅವರ ಧರ್ಮನಿಷ್ಠೆಗೆ, ಸತ್ಯಸಂಧತೆಗೆ ಮೆಚ್ಚಿದ ರಾಜನು ಅವರ ಹೆಸರಲ್ಲಿ ಈ ಐದು ಕಲಾಕೃತಿಗಳನ್ನು ಮಾಡಿಸಿದ್ದಾನೆ. ಈ ಐದು ದೇವಸ್ಥಾನಗಳಲ್ಲದೆ ಒಂದು ಸುಂದರವಾದ ಕೆತ್ತನೆಯ ಆನೆ ಹಾಗೂ ಒಂದು ಸಿಂಹ ಅಲ್ಲಿದೆ. ಅಲ್ಲಿ ಆನೆಯ ಪಕ್ಕದಲ್ಲಿ ನಿಂತು ಫೋಟೋ ತೆಗೆದುಕೊಳ್ಳುವಾಗ, ಬಿದ್ದಿದ್ದ ಬಂಡೆಯ ಉಳಿದ ಭಾಗಗಳನ್ನ ತೆಗೆದು ಬಂಡೆಗೆ ಈ ಸುಂದರ ಆನೆಯ ರೂಪವನ್ನ ನೀಡಿದ ಶಿಲ್ಪಿಯನ್ನು ನೆನೆಯದೇ ಇರುವುದಿಲ್ಲ. ಮನುಷ್ಯನೂ ಹಾಗೆಯೇ ತಾನೆ? ತನ್ನಲ್ಲಿರುವ ರಾಗ ದ್ವೇಷಗಳನ್ನು ತೆಗೆದುಹಾಕಿದರೆ ಅವನೂ ದೈವತ್ವ ಹೊಂದಿದ ಶಿಲ್ಪವಾಗುತ್ತಾನೆ. ಕೆಲವರಿಗೆ ಅದೃಷ್ಟವಶಾತ್ ಒಳ್ಳೆಯ ಗುರು ಅಥವಾ ತಂದೆ ತಾಯಿಯರು ದೊರೆತು ಸುಂದರ ಶಿಲ್ಪವಾಗುತ್ತಾರೆ. ಆದರೆ ಇನ್ನು ಕೆಲವರು ಜೀವನಪೂರ್ತಿ ಬಂಡೆಯಾಗೇ ಉಳಿದುಬಿಡುತ್ತಾರೆ ಅದರ ಅರಿವಿಲ್ಲದಂತೆ.

ನಾವೆಲ್ಲರೂ ಈ ಐದು ಗುಡಿಗಳನ್ನು ನೋಡಿ ವಾಪಾಸು ಬಂದಾಗ ಸಮಯ 11.45. ನಮ್ಮ ಬಸ್ಸು ಚೆನ್ನೈ ಕಡೆಗೆ ಓಡತೊಡಗಿತು.





ಬಸ್ಸಿನಲ್ಲಿ ಕೂತು ಮಹಾಬಲಿಪುರಂ ಬಗ್ಗೆ ಅಂತರ್ಜಾಲದಲ್ಲಿ ಕೆದಕಿದಾಗ ನಮ್ಮ ಗೈಡ್ ಆಗಲೀ, ನಮ್ಮ ಟೂರ್ ಮ್ಯಾನೇಜರಾಗಲಿ ಹೇಳದ ಒಂದು ವಿಶೇಷ ಮಾಹಿತಿ ನನಗೆ ದೊರೆಯಿತು. ಅದೇಂದರೆ 2004ರ ಸುನಾಮಿ ಮಾಡಿದ ಉಪಕಾರ. ಸುನಾಮಿ ಹಾಗೂ ಉಪಕಾರವೇ? ಎಂದು ನೀವು ಆಶ್ಚರ್ಯ ಪಡಬಹುದು. ಹೌದು, ನಾನು ಹೇಳುತ್ತಿರುವ ಒಂದು ವಿಷಯವನ್ನು ಕೇಳಿದರೆ ನೀವು ಸಂತಸಪಡುತ್ತೀರಿ. ಅದೇಂದರೆ 2004ರಲ್ಲಿ ಸುನಾಮಿ ಮಹಾಬಲಿಪುರಂಗೆ ಅಪ್ಪಳಿಸಿದಾಗ ಅಂತಹ ಭಾರಿ ನಷ್ಟವನ್ನು ಮಾಡಲಿಲ್ಲ. ಅದಾಗಿಯೂ ಮೂರು ಜನ ಇಲ್ಲಿ ಜೀವ ಕಳೆದುಕೊಂಡಿದ್ದರು. ಬೇರೆಕಡೆಗೆ ಹೋಲಿಸಿದಲ್ಲಿ ಇದು ಅತ್ಯಂತ ಕಡಿಮೆ ಪ್ರಮಾಣದ ನಷ್ಟ. ಆದರೆ ಅದೊಂದು ಉಪಕಾರವನ್ನು ಮಾಡಿದೆ. ಅದೇಂದರೆ ಅಂದು ಬಂದ ಸುನಾಮಿಯಲ್ಲಿ ಅನೇಕ ಕಲಾಕೃತಿಗಳು ಸಮುದ್ರದ ಅಡಿಯಿಂದ ತೇಲಿ ಬಂದಿದ್ದವಂತೆ. ಆದರೆ ಅವು ವಾಪಸ್ ಉಳಿಯದೆ ಮತ್ತೆ ಸಮುದ್ರದ ಅಲೆಗಳ ಜೊತೆಗೆ ಹೋಗಿಬಿಟ್ಟಿವೆ. ಆದರೆ ಏರಿಬಂದ ಸಮುದ್ರದ ಅಲೆಗಳ ಮಧ್ಯೆ ಅನೇಕ ಗ್ರಾಫೈಟ್ ಕಲ್ಲಿನ ಕೃತಿಗಳನ್ನು ಇಲ್ಲಿನ ಜನಗಳು ಹಾಗೂ ಬಂದ ನನ್ನಂಥ ಪ್ರವಾಸಿಗರು ನೋಡಿ ಸರಕಾರಕ್ಕೆ ವರದಿ ಒಪ್ಪಿಸಿದ್ದಾರೆ. ಆದರೆ ಯಾವಾಗ ಇದರ ಬಗ್ಗೆ ಸ್ವಲ್ಪ ವಿಚಾರಿಸಬೇಕೆಂಬ ಒತ್ತಾಯ ಜಾಸ್ತಿ ಆಯ್ತೋ ಆಗ ಸರ್ಕಾರದ  ಪುರಾತತ್ವ ಇಲಾಖೆ ಒಂದು ಗುಂಪನ್ನು ಸಮುದ್ರಕ್ಕೆ ಇಳಿಸಿತು.. ಅದು ಯಾವಾಗ ಗೊತ್ತೇ?  ಸುನಾಮಿ ಬಂದು 10 ವರ್ಷಗಳ ನಂತರ 2014ರಲ್ಲಿ. ಸಮುದ್ರವನ್ನು ಹುಡುಕಿದ ಈ ಗುಂಪಿಗೆ ನಿರಾಶೆ ಏನೂ ಆಗಲಿಲ್ಲ. ಮಹಾಬಲಿಪುರಂನಿಂದ ಸುಮಾರು 825 ಮೀಟರ್ ಅಡಿಗಳ ದೂರದಲ್ಲಿ ಸಮುದ್ರದ ಆಳದಲ್ಲಿ ಕಲಾಕೃತಿಗಳ ಒಂದು ನಗರವೇ ಇದೆ. ದ್ವಾರಕೆಯಿಂದ ದೂರದಲ್ಲಿ ಇನ್ನೊಂದು ದ್ವಾರಕೆ ಇರುವಂತೆ ಸಮುದ್ರದಲ್ಲಿ ಇನ್ನೂ ಒಂದು ನಗರ ಇದೆ. ಹಳೆಯ ಸುನಾಮಿ ಬರುವುದಕ್ಕಿಂತ ಮುಂಚೆ ಅಲ್ಲೂ ಅನೇಕ ದೇವಸ್ಥಾನಗಳು ಇದ್ದಿರಬಹುದು. ಆದರೆ ಸುನಾಮಿಯ ಹೊಡೆತಕ್ಕೆ ಅವೆಲ್ಲವೂ ಮುಚ್ಚಿಹೋಗಿ ಅಂದಿನಿಂದ ಮಹಾಬಲಿಪುರಂ ಹೊಸ ಸಮುದ್ರ ದಂಡೆಯಾಗಿ ನಿಂತಿದೆ. ಎಂಥ ಅದ್ಭುತ ಅಲ್ಲವೇ? ಕಾಲನ ಗರ್ಭದಲ್ಲಿ ಅಡಗಿರುವ ಇಂತಹ ಕಥೆಗಳನ್ನು ಹುಡುಕುವರಾರು? ಅರಿಯುವರಾರು? ವಿಜ್ಞಾನದ ರೆಕ್ಕೆಗಳು ಹಲವಾರು ಬಾರಿ ಅಂತಹ ವಿಸ್ಮಯಗಳನ್ನು ನಮ್ಮ ಮುಂದೆ ತಂದಿಟ್ಟಾಗ ಮನಕ್ಕೆ ಅದೊಂದು ರೀತಿಯ ಆನಂದ, ನೋವು ಎರಡೂ ಆಗುತ್ತವೆ.



ಎರಡು ಸುನಾಮಿಗಳನ್ನು ಎದುರಿಸಿದರೂ ಮಹಾಬಲಿಪುರಂ ಇಂದಿಗೂ ತಲೆತಗ್ಗಿಸದೆ ತನ್ನ ಕಲಾಕೃತಿಯ ಶ್ರೇಷ್ಠತೆಯನ್ನು ಮೆರೆಸುತ್ತಿದೆ. ಬಂದ ಜನಗಳ ಕಣ್ಮನಗಳನ್ನು ತಣಿಸುತ್ತದೆ. ಜಗತ್ತಿನ ಅನೇಕ ಶ್ರೇಷ್ಠ ಶಿಲ್ಪಕಲೆಗಳ ಜಾಗಗಳಲ್ಲಿ ಇದೂ ಒಂದು ಎಂದರೆ ಅತಿಶಯೋಕ್ತಿಯಲ್ಲ. ಹೀಗಾಗಿ ಅದು ಅಚ್ಚಳಿಯದೇ ನಿಂತಿದೆಯೋ ಏನೋ ಅಂತ ಅನಿಸುತ್ತದೆ. ಅಟ್ಲಾಂಟಾ ಸಿಟಿಯಂತೆ ಈ ಕಲಾಕೃತಿಗಳು ಸಮುದ್ರ ತಳದಲ್ಲಿ ಕಳೆದು ಹೋಗಿದ್ದರೆ ಎಂಥಾ ಭಯಂಕರ ನಷ್ಟವನ್ನು ಅನುಭವಿಸುತ್ತಿದ್ದೆವು ಅಲ್ಲವೇ?

***(ಚಿತ್ರಗಳು: ಲೇಖಕರವು ಹಾಗೂ ಅಂತರ್ಜಾಲ)***

***

**ಪ್ರವಾಸ ಕಥನ**

# ನಾನು ಮಾಡದ ಪ್ರವಾಸ

**– ಗುರುರಾಜ ಶಾಸ್ತ್ರಿ**

(ನಾಗಮಂಗಲದಲ್ಲಿ ಶಾಂತಾ ನಾಗಮಂಗಲ ಅವರ "ಪಟ ಗಾಳಿಯಲಿ ತೇಲಿ" ಪುಸ್ತಕ ಮತ್ತು ಶಾಂತಾ ನಾಗಮಂಗಲ, ರಾಧಿಕಾ ಗುಜ್ಜರ್ ಮತ್ತು ಸರಸ್ವತಿ ನಟರಾಜ ಈ ಮೂವರೂ ಬರೆದ ಸಣ್ಣ ಕಥೆಗಳ ಒಂದು ಕಥಾ ಸಂಕಲನ "ನಮ್ಮೊಳಗಿನ ಕಥೆಗಳು" ಬಿಡುಗಡೆಗೆ ಹೋಗಬೇಕಾದ ನಾನು ಜ್ವರವಿದ್ದದ್ದರಿಂದ ಪ್ರವಾಸ ಮಿಸ್ ಮಾಡಿಕೊಂಡೆ)

ಹೇಮಂತ ಋತು, ಮಾರ್ಗಶಿರ ಮಾಸ, ಮುಂಜಾನೆ ಐದು ಗಂಟೆಗೆ ಅಲಾರಂ ಟ್ರ್ಯಾಂ ಟ್ರ್ಯಾಂ ಎಂದು ಗರ್ಜಿಸುತ್ತಿತ್ತು. ರಾತ್ರಿಯ ಬೆಂಗಳೂರು ಛಳಿಗೆ ಬೆಚ್ಚಗೆ ಕೋಲಾರದ ಕುರಿ ಕಂಬಳಿಯನ್ನು ಹೊದ್ದು ಮಲಗಿದ್ದ ರವೀಂದ್ರರಿಗೆ ಥಟ್ ಅಂತ ಎಚ್ಚರ. ಇನ್ನೆರೆಡು ದಿನದಲ್ಲಿ ಹಿಂದೆಂದೂ ಇರದ 10 ಡಿಗ್ರಿಗೆ ಬೆಂಗಳೂರಿನ ತಾಪಮಾನ ತಲುಪುತ್ತದೆ ಎಂದು ದಿನಪತ್ರಿಕೆಯಲ್ಲಿ ಎರಡು ದಿನ ಮುಂಚೆ ಓದಿದ ನೆನಪು. ಆದರೆ ವಿಧಿಯಿಲ್ಲ, ಇಂದಿನ ನಾಗಮಂಗಲ ಪ್ರವಾಸಕ್ಕೆ ಬೇಗನೇ ತಯಾರಾಗಲೇಬೇಕು. ಟ್ಯಾಕ್ಸಿ ಇವರ ಮನೆಯಿಂದಲೇ ಹೊರಡುವುದರಿಂದ, ಇಲ್ಲಿ ಹೊರಡುವುದು ತಡವಾದರೆ ಪೂರ್ತಿ ದಿನದ ಪ್ರವಾಸದ ಎಲ್ಲಾ ತೊಂದರೆಗಳಿಗೆ ಇವರನ್ನೇ ದೂಷಿಸುವುದರಲ್ಲಿ ಅನುಮಾನವೇ ಇಲ್ಲ.

ರಾತ್ರಿಯೇ ಗೀಸರ್ ಹಾಕಿದ್ದರಿಂದ ನೇರ ಬಚ್ಚಲುಮನೆ ಕಡೆ ಹೆಜ್ಜೆ ಹಾಕುತ್ತಾ ಪ್ರಾತಃವಿಧಿಗಳನ್ನು ಮುಗಿಸಿಕೊಂಡು ಬಿಸಿಬಿಸಿ ನೀರಲ್ಲಿ ಸ್ನಾನ ಮಾಡಿ ಹೊರಗೆ ಬಂದರೆ ಮತ್ತದೇ ಮಾಗಿಯ ನಡುಗಿಸುವ ಛಳಿ. ಬೆಚ್ಚಗೆ ಬಟ್ಟೆ ಹಾಕಿಕೊಂಡು, ಪ್ರವಾಸವಿದ್ದುದರಿಂದ ದೇವರಿಗೆ ನಮಸ್ಕರಿಸಿ ಟ್ಯಾಕ್ಸಿಗಾಗಿ ಕಾದು ಕುಳಿತರು ರವೀಂದ್ರ.

ಆದರೂ ಹೆಂಡತಿ ಎದ್ದು ಒಂದು ಲೋಟ ಬಿಸಿಬಿಸಿ ಕಾಫಿ ಕೊಟ್ಟಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ಯೋಚಿಸಿದರು. ಆದರೆ ಛಳಿಯಲ್ಲಿ ಆರಾಮವಾಗಿ ಮಲಗಿದ್ದ ಮಡದಿಯನ್ನು ಎಬ್ಬಿಸುವ ಧೈರ್ಯವಾಗಲೀ ಅಥವಾ ನಿಷ್ಕರುಣೆಯಾಗಲೀ ಇವರಲ್ಲಿ ಇರಲಿಲ್ಲ. ತಾವೇ ಅಡುಗೆಮನೆಗೆ ಹೋಗಿ ಹಾಲು ಒಲೆಯ ಮೇಲಿಟ್ಟರು. ಹಾಲಿನ ಪಾತ್ರೆಯಿಂದ ಬರುತ್ತಿದ್ದ ಶಾಖವೂ ಒಂದು ರೀತಿ ಹಿತವೆನಿಸುತ್ತಿತ್ತು.

ಅಷ್ಟರಲ್ಲಿ ರಸ್ತೆಯ ಕಡೆಯಿಂದ ಒಂದು ದೊಡ್ಡ ಹಾರ್ನ್ ಕೇಳಿಸಿತು. ಎರ್ಟಿಗಾ ಗಾಡಿಯಲ್ಲಿ ಕ್ಯಾಡ್ಬರಿ ಭರತ್ ಬಂದಿರುವುದು ಖಚಿತವಾಯಿತು. ಅದೇನು, ಹಾರ್ನ್ ಸರಿ ಇದೆ ಎಂದು ಖಚಿತಪಡಿಸಿಕೊಳ್ಳಲು ಅವನು ಶಬ್ದ ಮಾಡಿದನೋ ಅಥವಾ ಇವರನ್ನು ಎಚ್ಚರಿಸಲು ಶಬ್ದ ಮಾಡಿದನೋ ಗೊತ್ತಿಲ್ಲ. ಆದರೆ ಹತ್ತು ನಿಮಿಷ ತಡವಾದರೂ ಕಾಫಿ ಬಿಟ್ಟು ಹೋಗುವ ವೈರಾಗಿ ಬುದ್ಧನಂತೂ ನಮ್ಮ ರವೀಂದ್ರರಲ್ಲ ಬಿಡಿ. ಕ್ಯಾಡ್ಬರಿ ಕಂಪನಿಯಲ್ಲಿ ಕೆಲಸಮಾಡುತ್ತಿದ್ದ ಭರತನಿಗೆ ಒಂದೆರೆಡು ಬಿಸ್ಕತ್ತು ಕೊಟ್ಟು ಜೊತೆಗೆ ಇಬ್ಬರೂ ಬಿಸಿಬಿಸಿ ಕಾಫಿ ಕುಡಿದು ಚಾರಣಿಗ ಗುರುಪ್ರಸಾದ್ ಮನೆಯತ್ತ ಟ್ಯಾಕ್ಸಿಯಲ್ಲಿ ಹೊರಟರು.

ಚಾರಣಿಗ ಗುರುಪ್ರಸಾದರ ಮನೆಗೆ ರವೀಂದ್ರ ಅವರ ಮನೆಯಿಂದ ಸುಮಾರು 20 ನಿಮಿಷದ ಪ್ರಯಾಣ. ಈ ಚಾರಣಿಗ ಗುರುಪ್ರಸಾದರೋ ಹೇಳಿದ ಸಮಯಕ್ಕೆ 30 ನಿಮಿಷ ಮುಂಚೆಯೇ ಸಿದ್ಧರಾಗಿ ದಾರಿಯಲ್ಲೇ ನಿಂತಿರುತ್ತಾರೆ. ಅಂದರೆ ಅವರ 30 ನಿಮಿಷ ಮತ್ತು ರವೀಂದ್ರರ 20 ನಿಮಿಷ ತಡ ಸೇರಿ ಒಟ್ಟಾರೆ 50 ನಿಮಿಷ ಕಾದಂತಾಯಿತು ಚಾರಣಿಗ ಗುರುಪ್ರಸಾದರಿಗೆ. ಇವರಿಗೆ ಹೇಗೆ ಸಮಾಧಾನ ಹೇಳಲಿ ಎಂಬ ಚಿಂತೆ ರವೀಂದ್ರರಿಗೆ. ಇವರು ತಲುಪುವ ಹೊತ್ತಿಗೆ ಪಕ್ಷಿವೀಕ್ಷಕ ಬುಲೆಟ್ ಗುರು ಮತ್ತು ಅಂದಿನ ಪ್ರವಾಸದ ಮುಖ್ಯ ನಿರ್ದೇಶಕ ರಾಜನ್ ಇಬ್ಬರೂ ಚಾರಣಿಗ ಗುರುವಿನ ಮನೆ ತಲುಪಿ ಕಾಯುತ್ತಿರುತ್ತಾರೆ. ತಡವಾಗಿದ್ದಕ್ಕೆ ಕಾಫಿಯ ವಿಷಯ ಬಿಟ್ಟು ಬೇರೇನಾದರು ಸಬೂಬು ಹೇಳಿದರಾಯಿತು ಅಂದುಕೊಂಡರು ರವೀಂದ್ರ.

ಆದರೆ ಚಾರಣಿಗ ಗುರುಪ್ರಸಾದ್ ಮನೆ ತಲುಪಿದಾಗ ಅಲ್ಲಿ ಪಕ್ಷಿವೀಕ್ಷಕ ಗುರು ಇಲ್ಲದಿರುವುದು ಮತ್ತು ಅವನಿಗೆ ವಿಪರೀತ ಜ್ವರ ಬಂದಿರುವ ವಿಷಯವನ್ನು ಮಾತನಾಡುತ್ತಾ ಪ್ರವಾಸದ ಆರಂಭ ತಡವಾಗಿದ್ದ ವಿಷಯ ಯಾರೂ ಪ್ರಸ್ತಾಪಿಸಲೇ ಇಲ್ಲ. ರಾಜನ್ ಸ್ವಲ್ಪ ಭಿನ್ನವಾಗಿ ಪಂಚೆ, ಶಲ್ಯ, ತಿರುನಾಮದೊಂದಿಗೆ ಸಾಲಂಕೃತರಾಗಿದ್ದು, ನೋಡಲು ಮಾತ್ರ, ಪ್ರಿಯ ಓದುಗ, ಇನ್ನೊಮ್ಮೆ ಒತ್ತಿ ಹೇಳುತ್ತಿದ್ದೇನೆ, "ನೋಡಲು ಮಾತ್ರ" ಶುದ್ಧ ಸಾತ್ವಿಕ ಶ್ರೀ ವೈಷ್ಣವರಂತೆ ಕಾಣಿಸುತ್ತಿದ್ದರು ರಾಜನ್.

ಮುಂದೆ ಈ ಪ್ರವಾಸಿಗರ ಗುಂಪಿಗೆ ಸೇರಬೇಕಾದವರು ನಮ್ಮ ಸಮನ್ವಯ ಸಮಿತಿ ವೇದಿಕೆಯ ಖಜಾಂಚಿಯಾದ ಜಯರಾಮ್. ನೀನು ಚಾರಣಿಗ ಗುರುಪ್ರಸಾದರ ಮನೆ ಬಿಟ್ಟಾಗ ಫೋನ್ ಮಾಡು, ನಾನು ತಯಾರಾಗುತ್ತೇನೆ ಎಂದು ಮುಂಚೆಯೇ ಇವರು ರವೀಂದ್ರರಿಗೆ ಸೂಚನೆ ಕೊಟ್ಟಿದ್ದರಿಂದ ಜಯರಾಮರಿಗೆ ಶೇಷಾದ್ರಿಪುರಂನ ಬೀದಿಯಲ್ಲಿ ನಿಂತು ಕಾಯುವ ಪ್ರಸಂಗವೇ ಬರಲಿಲ್ಲ. ಇವರನ್ನು ಟ್ಯಾಕ್ಸಿಯಲ್ಲಿ ಹತ್ತಿಸಿಕೊಂಡ ನಂತರ ಪ್ರಯಾಣ ಗೊರುಗುಂಟೆಪಾಳ್ಯದ ಹತ್ತಿರ ರವಿ ಕುಸಬಿಯವರನ್ನು ಹತ್ತಿಸಿಕೊಳ್ಳಲು. ಸದಾ ಟಿಪ್ ಟಾಪಾಗಿ ಇಸ್ತ್ರಿಯಾಗಿರುವ ಬಟ್ಟೆಗಳನ್ನು ಇನಶರ್ಟ್ ಮಾಡಿಕೊಂಡಿರುತ್ತಾರೆ ನಮ್ಮ ಹೀರೋ ರವಿ ಕುಸಬಿ. ಇವರುಗಳ ಮನಸ್ಸಿನಲ್ಲಿದ್ದ ಅದೇ ಆಕೃತಿಯನ್ನು ಗೊರಗುಂಟೆಪಾಳ್ಯದ ಹತ್ತಿರ ಮಂದ ಬೆಳಕಿನಲ್ಲಿ ಹುಡುಕುತ್ತಿದ್ದರು. ಹಳೆಯ ಕನ್ನಡ ಚಲನಚಿತ್ರಗಳಲ್ಲಿ ಕುತ್ತಿಗೆಗೆ ಮಫ್ಲರ್ ಸುತ್ತಿಕೊಂಡು ಅವರಿವರನ್ನು ಹೆದರಿಸಿಕೊಂಡು ಓಡಾಡುವ ವಿಲನ್‌ಗಳ ಹಾಗೆ ಯಾರೋ ಆಸಾಮಿ ಗಾಡಿಯ ಹತ್ತಿರ ಬಂದಾಗ ಇವರುಗಳಿಗೆ ಸ್ವಲ್ಪ ಭಯವಾದದ್ದಂತೂ ನಿಜ, ಆದರೆ ಆ ವಿಲನ್ ಹತ್ತಿರ ಬರುತ್ತಿದ್ದಂತೆ ನಮ್ಮ ಹೀರೋ ರವಿ ಕುಸಬಿಯಾಗಿ ಬದಲಾಗಿಬಿಟ್ಟಿದ್ದಾರೆ. ಎಲ್ಲರಿಗೂ ಆಶ್ಚರ್ಯವೋ ಆಶ್ಚರ್ಯ.

ಇಲ್ಲಿಗೆ ನನ್ನ ಊಹೆ ಮುಗಿಯಿತು.

ಆದರೆ ಪ್ರವಾಸ ಮುಗಿದು ಬೆಂಗಳೂರಿಗೆ ವಾಪಸ್ ಬಂದ ಮೇಲೆ ನಡೆದದ್ದು ಬರೆಯದಿದ್ದರೆ ನಾನು ಈ ಪ್ರವಾಸ ಕಥನಕ್ಕೆ ಕೊಟ್ಟಿರುವ ಶೀರ್ಷಿಕೆಗೆ (ನಾನು ಮಾಡದ ಪ್ರವಾಸ) ಅರ್ಥವೇ ಇರುವುದಿಲ್ಲ.

ಪಕ್ಷಿವೀಕ್ಷಕ ಗುರುವಾದ ನನಗೆ ಜ್ವರ ಕಮ್ಮಿಯಾಗಿತ್ತು. ನಾನು ಮಾಡದೇ ಇರುವ ಈ ಪ್ರವಾಸದ ವಿಷಯ ನನಗೇಕೆ ಎಂದು ಇದಕ್ಕಾಗಿಯೇ ಮಾಡಿದ್ದ ನಾಗಮಂಗಲ ಪ್ರವಾಸ ಎಂಬ ವಾಟ್ಸಾಪ್ ಗುಂಪಿನಿಂದ ಹೊರಬರಬೇಕೆಂದುಕೊಂಡೆ, ಆದರೆ ಮರೆತೆ. ಅದೇ ನಾನು ಮಾಡಿದ ದೊಡ್ಡ ತಪ್ಪು.

ಪ್ರವಾಸದ ಬಗ್ಗೆ ಸಣ್ಣ ಟಿಪ್ಪಣಿ ಎಂದು ರವೀಂದ್ರರು ಕೆಲವು ವಿಷಯಗಳನ್ನು ಆ ನಾಗಮಂಗಲ ಪ್ರವಾಸ ಗುಂಪಿನಲ್ಲಿ ಬರೆದಿದ್ದರು. ಅದರಲ್ಲಿ ನನ್ನನ್ನು ಗುರಿಯಾಗಿಸಿ ಕೊಟ್ಟ ಟಿಪ್ಪಣಿಗಳು ಈ ಕೆಳಗಿನವು.

- ನಗೆಚಾಟಿಗಳೊಂದಿಗೆ ಆನಂದಿಸುತ್ತಾ ಮಾಡಿದ ಟ್ಯಾಕ್ಸಿ ಪ್ರಯಾಣ
- ಬೆಳಿಗ್ಗೆ ಹೋಗುವಾಗ ಪಾಕಶಾಲಾ ಹೋಟಲ್‌ನಲ್ಲಿ ತಿಂದ ತಿಂಡಿಗಳ ವರ್ಣನೆ
- ರಾಜನ್ ಪ್ರಭಾವದಿಂದಾಗಿ ಬಲು ಹತ್ತಿರದಿಂದಾದ ಮೇಲುಕೋಟೆ ಚೆಲುವ ನಾರಾಯಣನ ದರ್ಶನ
- ದೇವಸ್ಥಾನದ ಯಾವುದೋ ಮಹಡಿ ಹತ್ತಿ ಮೇಲುಕೋಟೆಯ ಪೂರ್ಣ ವೀಕ್ಷಣೆ (Birds eye view)
- ರಾಜನ್ ಅವರ ಬಂಧುವಿನ ಮನೆಯಲ್ಲಿ ತಿಂದ ಪುಳಿಯೋಗರೆ, ಸೀಪೊಂಗಲ್ ಮತ್ತು ಬಾಯಲ್ಲಿ ನೀರೂರಿಸುವ ಇತರ ಪದಾರ್ಥಗಳ ರುಚಿಯ ವರ್ಣನೆ.
- ಜೊತೆಗೆ ಈ ವಿಷಯಗಳಿಗೆ ಇನ್ನೂ ಚೆನ್ನಾಗಿ ವಿವರಣೆ ನೀಡಿ ಪ್ರವಾಸ ಕಥನ ಬರೆಯಿರಿ ಎಂದು ರವಿ ಕುಸಬಿಗೆ ಸೂಚನೆ ಬೇರೆ.

ಈ ರೀತಿಯ ವಿಷಯಗಳಲ್ಲಿ ಯಾರಿಗೂ ಕಾಲೆಳೆಯದ ಚಾರಣಿಗ ಗುರುಪ್ರಸಾದ್ ಮೇಲುಕೋಟೆಯಿಂದ ತಂದ ಗೊಜ್ಜಿನಿಂದ ರವೀಂದ್ರ ಅವರ ಮನೆಯಲ್ಲಿ ಪುಳಿಯೋಗರೆ ಮಾಡಿದ್ದರಂತೆ ಮತ್ತು ಅದು ರುಚಿಯಾಗಿದ್ದದ್ದರಿಂದ ಪಕ್ಷಿವೀಕ್ಷಕ ಗುರು

ಮೇಲುಕೋಟೆಗೆ ಹೋಗಿ ತನಗಷ್ಟೇ ಅಲ್ಲದೆ ಅದರ ವಿಷಯ ಹೇಳಿದ ಈ ಐದು ಜನ ಪ್ರವಾಸಿಗರಿಗೂ ಗೊಜ್ಜು ಹಂಚುತ್ತಾನಂತೆ ಎಂದು ಪ್ರವಾಸದ ವಾಟ್ಸಾಪ್ ಗುಂಪಿನಲ್ಲಿ ಸಂದೇಶ ಹಾಕಿದಾಗ, ಷೇಕ್ಸ್‌ಪಿಯರ್‌ನ ಜ್ಯೂಲಿಯಸ್ ಸೀಜರ್ ಕಥೆಯಲ್ಲಿ ಬರುವ ವಾಕ್ಯ 'ಯೂ ಟೂ ಬ್ರೂಟಸ್' ಎಂಬುವಂತೆ 'ಯೂ ಟೂ ಗುರುಪ್ರಸಾದ್' ಎಂದು ಮನದಲ್ಲೇ ಹೇಳಿಕೊಂಡು ನೊಂದುಕೊಂಡೆ.

ಜ್ವರ ಕಡಿಮೆಯಾಗಿ ಅನಾರೋಗ್ಯಮ್‌ವಾ ಆರೋಗ್ಯಮ್ ಗಮಯ ಎಂಬ ಗಾದೆ ಮಾತಿನಂತೆ ಆಗತಾನೆ ಚೇತರಿಸಿಕೊಂಡಿದ್ದ ನನಗೆ ರವೀಂದ್ರರ ಟಿಪ್ಪಣಿ ಓದಿದ ಮೇಲೆ ಹೊಟ್ಟೆಯಲ್ಲಿ ಯಾರಿಗೂ ಹೇಳಿಕೊಳ್ಳಲಾಗದಂತಹ ಉರಿ. ರವಿ ಕುಸಬಿ ಪ್ರವಾಸ ಕಥನ ವಿಸ್ತಾರವಾಗಿ ಬರೆದು ಇನ್ನಷ್ಟು ಹೊಟ್ಟೆ ಉರಿಸುವುದರ ಮೊದಲು ನಾನೇ ಈ ಪ್ರವಾಸ ಕಥನ ಬರೆದು ಉರಿ ಶಮನ ಮಾಡಿಕೊಳ್ಳಲು ಪ್ರಯತ್ನಿಸಿದ್ದೇ ಈಗ ನೀವು ಓದಿದ ಲೇಖನ.

ಆಡದೇ ಮಾಡುವವನು ಉತ್ತಮನು ಎಂಬ ಗಾದೆ ಕೇಳಿಲ್ಲವೇ. ಹಾಗೇ ಪ್ರವಾಸ ಮಾಡದೆಯೇ ಪ್ರವಾಸ ಕಥನ ಬರೆದವನೂ ಉತ್ತಮನಾಗಬಲ್ಲ.

ನೀವೇನಂತೀರಿ?

***

## ಕೊನೆಗಾಲದ ಆಸರೆ

– ಗಿರಿಜಾ ರಾಜ್ ಎಲ್.

ನರಗಳ ಎಣಿಸಬಹುದಾದ ನಿಶ್ಶಕ್ತ ಕೈ
ಮುದ್ದಿಸಿವೆ ಬಿದ್ದಾಗ, ಎದ್ದಾಗ, ಸೋತಾಗ
ಅತ್ತಾಗ, ಕ್ಷೀಣವಾಗಿದೆ ನೂರಾರು ಬಾರಿ
ಮಮತೆಯ ಅಪ್ಪುಗೆಯಿತ್ತ ಮೈ!

ಬಿತ್ತರಿಸಿವೆ ನೂರು ಕತೆ ಮುಖದ ನಿರಿಗೆಗಳು
ದೇಹ-ಆತ್ಮ ನೀಡಿದ ತಾಯಿ ತಂದೆಯರು
ಇಂದು ವೃದ್ಧಾಶ್ರಮದ ಬಾಗಿಲಲಿ ನಿಂತಿಹರು
ನಿನ್ನ ಬರವನೇ ಹಾರೈಸುತ.. ನೀ ಬರುವ ದಾರಿಯಲಿ
ಮುಳ್ಳುಗಳೆಲ್ಲ ಹೂವಾಗಲೆಂದು
ಬಿಸಿಲು ತಂಪಾಗಲೆಂದು...

ನಾಳೆ ನಿನ್ನ ಸರದಿ, ಬಂದೆ ಬರುವುದು
ನೀನು ಕಾದರೂ ಮಗ ಬರದಿರಬಹುದು!
ಮಾನವೀಯತೆ ಮರೆಯಾಗುತಿದೆ
ಪೀಳಿಗೆಯಿಂದ ಪೀಳಿಗೆಗೆ...ಅಪ್ಪನಿಗೆ
ನೀನಿತ್ತ ಅಷ್ಟಿಷ್ಟು ಪ್ರೀತಿಯೂ ಮರೀಚಿಕೆ
ಆದೀತು... ಎಚ್ಚರ... ಎಚ್ಚರ!

***

# ಚಿ.ಶ್ರೀನಿವಾಸರಾಜು: ಕವಿ, ಸಾಹಿತಿ, ಬೋಧಕ, ಸಾಹಿತ್ಯ ಪರಿಚಾರಕ

– ಮಹಾಬಲ



ಕನ್ನಡಕ್ಕೆ ಅಪಾರವಾದ ಸೇವೆಯನ್ನು ಸಲ್ಲಿಸಿ, ಕನ್ನಡಕ್ಕಾಗಿ ಯುವ ಪ್ರತಿಭೆಗಳ ಪಡೆಯನ್ನೇ ಸೃಷ್ಟಿಸಿ ಕನ್ನಡದ ಕಂಪು ಹೊಸ ತಲೆಮಾರುಗಳಲ್ಲಿ ಜೀವಂತವಾಗಿ ಉಳಿಯುವಂತೆ ಹಗಲಿರುಳು ದುಡಿದ ಮೇಷ್ಟ್ರು ಎಂದು ಪ್ರಖ್ಯಾತರಾದವರು ಚಿ. ಶ್ರೀನಿವಾಸರಾಜು. ಅವರು ವೃತ್ತಿಯಿಂದ ಪ್ರಾಧ್ಯಾಪಕರಾಗಿದ್ದರೂ, ಪ್ರವೃತ್ತಿಯಿಂದ ಸಾಹಿತ್ಯದ ಪರಿಚಾರಕರಾಗಿ ಬದುಕಿದವರು.

ಚಿ.ಶ್ರೀನಿವಾಸರಾಜು ೧೯೪೨ರ ನವೆಂಬರ್ ೨೮ರಂದು ಚಿಕ್ಕಬಳ್ಳಾಪುರದಲ್ಲಿ ಜನಿಸಿದರು. ಇವರ ತಾಯಿ ಸಾವಿತ್ರಮ್ಮ, ತಂದೆ ವಿ.ಚಿಕ್ಕರಾಜು. ಕನ್ನಡದಲ್ಲಿ ಎಂ.ಎ. ಪದವಿ ಹಾಗು ಇಂಡಾಲಜಿಯಲ್ಲಿ ಡಿಪ್ಲೋಮಾ ಪಡೆದ ಶ್ರೀನಿವಾಸರಾಜು ಕ್ರೈಸ್ಟ್ ಕಾಲೇಜಿನಲ್ಲಿ ಪ್ರವಾಚಕರಾಗಿದ್ದರು. ೧೯೮೮ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿದ್ದರು.

ಚಿ.ಶ್ರೀನಿವಾಸರಾಜು ಅವರ ಶಾಲಾಭ್ಯಾಸ ಚಿಕ್ಕಬಳ್ಳಾಪುರದಲ್ಲೇ ನಡೆಯಿತು. ಹೈಸ್ಕೂಲು ಓದುತ್ತಿರುವ ದಿನಗಳಲ್ಲೇ ಕನ್ನಡದ ಗೀಳು ಹತ್ತಿಸಿಕೊಂಡ ಅವರು 'ಶಾಲು ಜೋಡಿಗಳು' ಎಂಬ ನಾಟಕ ರಚಿಸಿದ್ದರು.

ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಬಿ.ಎಸ್ಸಿ. ಓದಿದ ಶ್ರೀನಿವಾಸರಾಜು, ನಂತರದಲ್ಲಿ ಕೆಲಕಾಲ ಲೋಹ ವಿಕಾಸ ಮಂಡಲಿಯಲ್ಲಿ ಸಾರಿಗೆ ಅಧಿಕಾರಿಯಾಗಿ ಉದ್ಯೋಗ ಮಾಡಿದರು. ಈ ಸಂದರ್ಭದಲ್ಲಿ ಅವರು 'ಭಸನಾಲ ಬಂಧು' ಎಂಬ ಕವನ ಸಂಕಲನ ಪ್ರಕಟಿಸಿದ್ದರು. ಮತ್ತೆ ಕನ್ನಡ ಓದುವ ಹಂಬಲದಿಂದ ಬಿ.ಎ., ಎಂ.ಎ. ಪದವಿ ಪಡೆದುದಲ್ಲದೆ, ಇಂಡಾಲಜಿಯಲ್ಲಿ ಡಿಪ್ಲೊಮ ಪದವಿಯನ್ನೂ ಪಡೆದರು. ಅವರು ಎಂ.ಎ. ತರಗತಿಯಲ್ಲಿದ್ದಾಗ ಜಿ.ಎಸ್.ಶಿವರುದ್ರಪ್ಪ, ಜಿ.ಪಿ.ರಾಜರತ್ನಂ. ಎಂ.ಚಿದಾನಂದ ಮೂರ್ತಿ ಅವರುಗಳು ಇವರ ಗುರುಗಳಾಗಿದ್ದರು.

ಸೆಂಟ್ರಲ್ ಕಾಲೇಜಿನ ಕನ್ನಡ ಸಂಘದ ಚಟುವಟಿಕೆಗಳಲ್ಲಿ ಸಕ್ರಿಯರಾಗಿ ಭಾಗಿಯಾಗುತ್ತಿದ್ದ ಚಿ.ಶ್ರೀನಿವಾಸರಾಜು ಅವರಿಗೆ ತಮ್ಮ ಗುರು ಜಿ.ಪಿ.ರಾಜರತ್ನಂ ಅವರಂತೆ ತಾವೂ ಕನ್ನಡದ ಪರಿಚಾರಕರಾಗಿ ದುಡಿಯಲು ಪ್ರೇರಣೆ ದೊರಕಿತು. ಕಾಲೇಜು ಹೊರಗೆ ಪಿ.ಪಿ ('ಪ್ರೋಗ್ರೇಸಿವ್ ಪೀಪಲ್ಸ್') ಎಂಬ ಬಳಗ ಕಟ್ಟಿ ಆ ಮೂಲಕ 'ಅಂಕಣ', 'ಶೂದ್ರ' ಪತ್ರಿಕೆಗಳ ಹುಟ್ಟಿಗೆ ಕಾರಣರಾದರು.

ಎಂ.ಎ. ಪದವಿಯ ಫಲಿತಾಂಶದ ನಿರೀಕ್ಷೆಯಲ್ಲಿರುವಾಗಲೇ ಚಿ. ಶ್ರೀನಿವಾಸರಾಜು ಅವರಿಗೆ ಕ್ರೈಸ್ಟ್ ಕಾಲೇಜಿನಲ್ಲಿ ಅಧ್ಯಾಪಕರ ಹುದ್ದೆ ದೊರಕಿತು. ಕನ್ನಡದ ವಾತಾವರಣವೇ ಇಲ್ಲದ ಕಾಲೇಜಿನಲ್ಲಿ ಕನ್ನಡದ ಕಂಪನ್ನು ಹರಡಲು ಅವರು ಹತ್ತಾರು ಯೋಜನೆಗಳನ್ನು ಹಾಕಿಕೊಂಡರು. 'ವಿಮೋಚನ' ಪಾಕ್ಷಿಕ ಮತ್ತು 'ಅಂಕಣ' ಪತ್ರಿಕೆಗಳನ್ನು ಪ್ರಾರಂಭಿಸಿದ್ದಲ್ಲದೆ, 'ಕ್ರೈಸ್ಟ್ ಕಾಲೇಜು ಕನ್ನಡ ಸಂಘ'ದ ಹುಟ್ಟಿಗೆ ಕಾರಣರಾದರು.

ಚಿ.ಶ್ರೀನಿವಾಸರಾಜು ಅವರು ಕ್ರೈಸ್ಟ್ ಕಾಲೇಜು ಕನ್ನಡ ಸಂಘದ ಮೂಲಕ, ದ.ರಾ.ಬೇಂದ್ರೆ ಕಾವ್ಯ ಸ್ಪರ್ಧೆ, ಅ.ನ.ಕೃ. ಲೇಖನ ಸ್ಪರ್ಧೆ ಮುಂತಾದ ಕಾರ್ಯಚಟುವಟಿಕೆಗಳ ಮೂಲಕ ಹಾಗೂ ಇತರ ಹಲವಾರು ಸಂಘ ಸಂಸ್ಥೆಗಳ ಮೂಲಕ ಕನ್ನಡ ಸಾಹಿತ್ಯದ ಸೇವೆ ಮಾಡಿದರಲ್ಲದೆ, ಪುಸ್ತಕ ಪ್ರಕಟಣೆಯ ಸಂಸ್ಕೃತಿ ಅರಳಲು ಶ್ರಮಿಸಿದರು. ನೂರಾರು ಯುವ

ಬರಹಗಾರರನ್ನು ಬೆಳಕಿಗೆ ತಂದರು. ಕನ್ನಡವನ್ನು ಬೆಳೆಸುವ, ಉಳಿಸುವ ಕೈಂಕರ್ಯವನ್ನು ತಮ್ಮ ಉಸಿರೆಂಬಂತೆ ಶ್ರದ್ಧೆಯಿಂದ ಮಾಡಿದ ಅವರು ಸಾಹಿತ್ಯ ಪರಿಚಾರಿಕೆಗೆ ಹೊಸ ಅರ್ಥ ತಂದುಕೊಟ್ಟರು.

೧೯೭೩ರಲ್ಲಿ ಸಿ.ಕೆ.ಲಕ್ಷ್ಮಣಗೌಡ ಎಂಬ ವಿದ್ಯಾರ್ಥಿ ನಿಧನರಾದ ಸಂದರ್ಭದಲ್ಲಿ ಅವರ ಸಹೋದರಿ ನೀಡಿದ ೫೦೦ ರೂ. ಕೊಡುಗೆಯಿಂದ ಶ್ರೀನಿವಾಸರಾಜು ಅವರು ಪುಸ್ತಕ ಪ್ರಕಟಣಾ ಕಾರ್ಯವನ್ನು ಪ್ರಾರಂಭ ಮಾಡಿದರು. ಹೀಗೆ ಪ್ರಕಟಗೊಂಡ ಮೊದಲ ಕವನ ಸಂಕಲನ ಕ. ವೆಂ. ರಾಜಗೋಪಾಲರ 'ನದಿಯ ಮೇಲಿನ ಗಾಳಿ'. ಚಿ.ಶ್ರೀನಿವಾಸರಾಜು ಅವರು ೨೦೦೦ದ ವರ್ಷದಲ್ಲಿ ನಿವೃತ್ತರಾದಾಗ ಬೆಳಕು ಕಂಡದ್ದು 'ಬೇಂದ್ರೆ ಸಾಹಿತ್ಯ'. ಹೀಗೆ ಸುಮಾರು ೨೭ ವರ್ಷಗಳಲ್ಲಿ ಕ್ರೈಸ್ಟ್ ಕಾಲೇಜು ಕನ್ನಡ ಸಂಘದ ಮೂಲಕ ಹೊರತಂದ ೧೬೫ ಕೃತಿಗಳಲ್ಲಿ ಬಿ.ಸಿ.ರಾಮಚಂದ್ರ ಶರ್ಮ ಅವರ 'ಸಪ್ತಪದಿ' ಮತ್ತು ಸು.ರಂ.ಎಕ್ಕುಂಡಿ ಅವರ 'ಬಕುಳದ ಹೂಗಳು' ಕೃತಿಗಳಿಗೆ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಸಂದಿತು, ಇದಲ್ಲದೆ ಸುಮಾರು ೫೦ ಕೃತಿಗಳಿಗೆ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ ಮತ್ತು ಒಳ್ಳೆಯ ಪುಸ್ತಕ ಪ್ರಕಾಶನಕ್ಕಾಗಿ ಪುಸ್ತಕ ಪ್ರಾಧಿಕಾರದ ಪ್ರಥಮ ವರ್ಷದ ಬಹುಮಾನ ದೊರೆಕಿತು. ಒಂದು ಉತ್ತಮ ಪ್ರಯತ್ನ ಹೇಗೆ ಫಲಕೊಡಬಲ್ಲದು ಎಂಬುದಕ್ಕೆ ಚಿ.ಶ್ರೀನಿವಾಸರಾಜು ಅವರ ಕಾರ್ಯ ಶ್ರೇಷ್ಠ ನಿದರ್ಶನವಾಗಿ ಕಣ್ಮುಂದೆ ನಿಲ್ಲುವಂತದ್ದಾಗಿದೆ. ಅಂದು ಶ್ರೀನಿವಾಸರಾಜು ಅವರು ಗುರುತಿಸಿ ಪ್ರೋತ್ರಾಹಿಸಿದ ಯುವ ಬರಹಗಾರರು ಇಂದು ಬಹಳ ಎತ್ತರಕ್ಕೆ ಬೆಳೆದಿದ್ದಾರೆ. ಕವಿ ಎಚ್.ಎಸ್.ಶಿವಪ್ರಕಾಶ್ ಕೂಡ ಕನ್ನಡ ಸಂಘದ ಮೂಲಕವೇ ಹೊರಬಂದವರು.

ತಮ್ಮ ಅಪಾರ ಚಟುವಟಿಕೆಗಳ ನಡುವೆಯೂ ಸ್ವಂತ ಆಲೋಚನೆ–ಚಿಂತನೆಗಳಿಗೂ ಅಕ್ಷರ ರೂಪ ನೀಡುವುದಕ್ಕೆ ಚಿ. ಶ್ರೀನಿವಾಸ ರಾಜು ಅವರ ಬಳಿ ಸಮಯವಿತ್ತು. ಹೀಗೆ ಅವರು ಬಿಡುವಾದಾಗ, ಮನಸ್ಸಾದಾಗ, ಆಗಾಗ ಬರೆದಿರುವ ಪ್ರಬುದ್ಧ, ವಿಚಾರಪೂರ್ಣ ಬರಹಗಳು, ಕವಿತೆ, ನಾಟಕ, ಪ್ರಬಂಧ, ವ್ಯಕ್ತಿ ಚಿತ್ರ ಇತ್ಯಾದಿಗಳ ಸಂಕಲನವನ್ನು ಅಭಿನವ ಪ್ರಕಾಶನ 'ಆಗಾಗ' ಸಂಪುಟದ ರೂಪದಲ್ಲಿ ಹೊರತಂದಿದೆ. ಶ್ರೀನಿವಾಸರಾಜು ತಾವು ನಿಧನರಾಗುವುದಕ್ಕೆ ಕೆಲವು ವರ್ಷಗಳ ಮೊದಲೇ ಬರೆದಿಟ್ಟಿದ್ದ ಉಯಿಲಿನ ಆಯ್ದ ಭಾಗವನ್ನೂ ಶ್ರೀಮತಿ ಸರಸ್ವತಿ ರಾಜು ಅವರು ಪ್ರಕಟಿಸಿರುವುದು ವಿಶೇಷ. ಮಾಸ್ತಿ, ಜೆ.ಬಿ.ಜೋಷಿ, ಜಿ.ಪಿ.ರಾಜರತ್ನಂ, ನಿರಂಜನ, ಪರ್ವತವಾಣಿ, ಸು.ರಂ.ಎಕ್ಕುಂಡಿ, ಜಿಎಸ್ಎಸ್, ರಂ.ಶ್ರೀ.ಮುಗಳಿ ಮೊದಲಾದ ಸಾಹಿತ್ಯ ದಿಗ್ಗಜರ ಜೊತೆ ಶ್ರೀನಿವಾಸ ರಾಜು ಅವರು ಆಪ್ತ ಒಡನಾಟ ಹೊಂದಿದ್ದವರು. ವ್ಯಕ್ತಿ ಸಂಗತಿ ಬರಹಗಳಲ್ಲಿ ಈ ಎಲ್ಲರೊಂದಿಗಿನ ಸಾಹಿತ್ಯ – ಸ್ನೇಹ – ಒಡನಾಟಗಳನ್ನು ಕಣ್ಣಿಗೆ ಕಟ್ಟುವಂತೆ ಶ್ರೀನಿವಾಸರಾಜು ಬರೆದಿದ್ದಾರೆ.

ಜಿ.ಪಿ.ರಾಜರತ್ನಂ ನಿಧನರಾದಾಗ ಶ್ರೀನಿವಾಸರಾಜು: "ಕಾದ ಮರಳಲ್ಲಿ ಕಾಗುಣಿತ ತಿದ್ದುವುದಾಗಿತ್ತು ನಿನ್ನ ಕೆಲಸ, ಇರುಳು ಕನ್ನಡಿಯಲ್ಲಿ ಪ್ರತಿಮೆ ಹುಡುಕುವುದೊಂದೇ ನನ್ನ ಕೆಲಸ" ಎಂದು ಕವನ ನಮನ ಸಲ್ಲಿಸಿದ್ದಾರೆ. ಸಾಮಾಜಿಕ ಸಂವೇದನೆಗಳತ್ತ ಸದಾ ಅವರ ಮನಸ್ಸು ತುಡಿಯುತ್ತಿತ್ತು. ಅವರ 'ಐದು ಮೂಕ ನಾಟಕಗಳು' ಓದುಗನ ಮತ್ತು ಪ್ರೇಕ್ಷಕನ ಮನದಲ್ಲಿ ಬದುಕಿನ ಚಿತ್ರಗಳನ್ನು ಮೂಡಿಸುವ ಬಗೆ ಅದ್ಭುತ. ಭೂಪಾಲ್ ದುರಂತದ ಸಂದರ್ಭದಲ್ಲಿ ಅವರು, "ದಿಕ್ಕೆಟ್ಟು ತತ್ತರಿಸಿ, ದಿಕ್ಕಟ ಒತ್ತರಿಸಿ ವಿಷವಾಗಿ ಹೋಯಿತು ಜೀವಜಲ ಭೂಪಾಲ ಹೊರಳಾಡಿ, ಭೂಪಾಲ ಕುರುಡಾಗಿ ಭೂಪಾಲವಾಯಿತು ಪ್ರೇತಕುಲ" ಎಂದು ಕವಿತೆ ಬರೆದರು.

ಸಾಹಿತ್ಯ ವಿಮರ್ಶೆ ವಿಭಾಗದಲ್ಲಿರುವ ಚಾಮರಸನ ಪ್ರಭುಲಿಂಗ ಲೀಲೆ ಮತ್ತು ಹರಿಹರನ ಪ್ರಭುದೇವ ರಗಳೆಯ ತೌಲನಿಕ ಅಧ್ಯಯನವನ್ನು ಸಾಹಿತ್ಯದ ವಿದ್ಯಾರ್ಥಿಗಳು ಓದಲೇಬೇಕು. ರಾಜರತ್ನಂ ತಮ್ಮ ಕೊನೆಯ ದಿನಗಳಲ್ಲಿ ಅನುಭವಿಸಿದ ಒಂಟಿತನ, ಅಷ್ಟಾದರೂ ತಮಗೆ ಪೂರ್ಣ ವಿಶ್ವಾಸ ಮೂಡುವವರೆಗೆ ಯಾರನ್ನೂ ಹತ್ತಿರ ಬಿಟ್ಟುಕೊಳ್ಳದ ಅವರ ನಿಷ್ಠುರತೆ, ಎಷ್ಟೋ ದಿನ ಅವರ ಮನೆಯವರೆಗೂ ಹೋದರೂ, ಒಂದು ದಿನವೂ ಒಳಗೆ ಬಾ ಎಂದು ಕರೆಯಲಿಲ್ಲವಲ್ಲ ಎಂದು ತಾವು ಚಡಪಡಿಕೆ ಅನುಭವಿಸಿದ್ದನ್ನೂ ಹಾಗೂ ಕೊನೆಗೂ ಒಂದು ದಿನ ಕರೆದಾಗ ದಿಗ್ವಿಜಯ ಮಾಡಿದಷ್ಟು ಸಂತೋಷ ಅನುಭವಿಸಿದ್ದನ್ನು ಶ್ರೀನಿವಾಸ ರಾಜು ಮನೋಜ್ಞವಾಗಿ ಬರೆದುಕೊಂಡಿದ್ದಾರೆ.

ಚಿ.ಶ್ರೀನಿವಾಸರಾಜು ಅವರ ಸ್ವಾನುಭವದ ಬರಹಗಳಲ್ಲಿ ಕನ್ನಡ ಶಾಲೆಯಲ್ಲಿನ 'ಭಾಷಣ ಮೋಕ್ಷ' ಹಾಗೂ 'ಅರವತ್ತು ದಾಟಿದ ಮೇಲೆ' ಓದಲೇಬೇಕು. ಅರವತ್ತು ದಾಟಿದ ನಂತರದ ತಲ್ಲಣ, ತಳಮಳಗಳನ್ನು, ಮಕ್ಕಳು–ಮಡದಿಯ ಆಧುನಿಕ ಯೋಚನೆಗಳಿಗೆ ಸ್ಪಂದಿಸಲಾಗದ ಚಡಪಡಿಕೆ, ಮೈಗೆ–ಮನಸ್ಸಿಗೆ ಒಗ್ಗದ ಆಧುನಿಕ ಶೌಚಾಲಯಕ್ಕೆ ಹೊಂದಿಕೊಳ್ಳಲಾಗದ ಪರದಾಟ ಇತ್ಯಾದಿ ಪ್ರಸಂಗಗಳ ಸ್ವಾರಸ್ಯವನ್ನು ಓದಿಯೇ ಅರಿಯಬೇಕು.

'ಆತ್ಮಕಥೆ' ಎಂಬ ಕವಿತೆಯನ್ನು ರಾಜು ಹೀಗೆ ಪ್ರಾರಂಭಿಸುತ್ತಾರೆ: "ಏನು ಬರೆಯಲಿ ಏಕೆ ಬರೆಯಲಿ ನನ್ನ ಆತ್ಮಕಥೆ ನೀನು ಬಿಟ್ಟ ಗಾಳಿಯನ್ನೇ ನಾನು ಎಳೆಯುತ್ತಿರುವಾಗ, ನೀನು ಬಿತ್ತಿದ ಕಾಳನ್ನೇ ನಾನು ತಿನ್ನುತ್ತಿರುವಾಗ, ನೀನು ನೆಯ್ದ ಬಟ್ಟೆಯನ್ನೇ ನಾನು ಧರಿಸುತ್ತಿರುವಾಗ, ನೀನು ಮೆಟ್ಟಿದ ಮಣ್ಣನ್ನೇ ನಾನು ತುಳಿಯುತ್ತಿರುವಾಗ". ಒಟ್ಟಿನಲ್ಲಿ 'ಆಗಾಗ' ಆಗಾಗ ಓದಿಗೆ ಮಾತ್ರವಲ್ಲದೆ, ಯಾವಾಗಲೂ ಓದಲು ಯೋಗ್ಯವಾದ ಸಂಗ್ರಾಹ್ಯ ಸಂಪುಟ.

ಅವರ ಕೆಲವೊಂದು ಕೃತಿಗಳನ್ನು ಬಿಡಿ ಬಿಡಿಯಾಗಿ ಹೆಸರಿಸುವುದಾದರೆ, 'ಭಸನಾಲ ಬಂಧು' ಎಂಬ ಕವನ ಸಂಕಲನ, 'ಐದು ಮೂಕ ನಾಟಕಗಳು', 'ಹಳಿಯ ಮೇಲಿನ ಸದ್ದು' ನಾಟಕ, 'ನಾಳೆ ಯಾರಿಗೂ ಇಲ್ಲ ಮತ್ತು ಇತರ ನಾಟಕಗಳು'; 'ಬಾವಿ ಕಟ್ಟೆಯ ಬಳಿ' ಎಂಬ ಅನುವಾದ, 'ನಮ್ಮ ಕೈಲಾಸಂ' ಎಂಬ ಸಂಪಾದನೆಗಳು ಪ್ರಮುಖವಾದುವು.

ಜಿಎಸ್‌ಎಸ್ ಸಂಪಾದಕರಾಗಿದ್ದ ನಮ್ಮ ತಂದೆ ಕೆಎಸ್‌ನ ಅವರ "ಚಂದನ" ಅಭಿನಂದನ ಗ್ರಂಥಕ್ಕೆ ಶ್ರೀನಿವಾಸರಾಜು ಅವರು ಸಹ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದರು. ಒಮ್ಮೆ ಅಂದಿನ ಯುವಗಾಯಕ ಜಿ.ವಿ.ಅತ್ರಿಯವರನ್ನು ನಮ್ಮ ಮನೆಗೆ ಕರೆದುಕೊಂಡು ಬಂದು ನಮ್ಮ ತಂದೆಯವರಿಗೆ ಪರಿಚಯಿಸಿದ್ದರು. ಹೀಗೆ ಯಾವುದೇ ವಯೋಮಾನದವರ ಸಾಹಿತಿ, ಕಲಾವಿದರನ್ನು ಅಸೂಯೆ ಇಲ್ಲದೆ ಪ್ರೋತ್ಸಾಹಿಸುತ್ತಿದ್ದ ಉದಾತ್ತರು ಶ್ರೀನಿವಾಸರಾಜು.

ಚಿ.ಶ್ರೀನಿವಾಸರಾಜು ಅವರಿಗೆ ಎಸ್.ವಿ.ಪರಮೇಶ್ವರ ಭಟ್ಟ ಪ್ರಶಸ್ತಿ, ಕನ್ನಡ ಪುಸ್ತಕ ಪ್ರಾಧಿಕಾರದಿಂದ ಶ್ರೇಷ್ಠ ಪ್ರಕಟಣಾ ಪ್ರಶಸ್ತಿ, ೧೯೮೪ರ ವರ್ಷದ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಮುಂತಾದ ಹಲವಾರು ಪ್ರಶಸ್ತಿಗಳು ಅರ್ಹವಾಗಿಯೇ ಸಂದಿದ್ದವು. ಮಲ್ಲೇಶ್ವರದ ಕೋದಂಡರಾಮಪುರ ರಸ್ತೆಗೆ ಅವರ ಹೆಸರನ್ನೇ ಇಟ್ಟು ಬಿಬಿಎಂಪಿ ಧನ್ಯತೆ ತೋರಿದೆ.

ಕನ್ನಡದ ಪ್ರೀತಿಯ ಯುವ ಕಣ್ಮಣಿಗಳ ಅಧ್ಯಾಪಕರಾಗಿದ್ದ ಶ್ರೀನಿವಾಸರಾಜು ಮೇಷ್ಟ್ರು 'ಕುವೆಂಪು ನಮನ' ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಕುಪ್ಪಳ್ಳಿ ಮಾರ್ಗದಲ್ಲಿ ತೀರ್ಥಹಳ್ಳಿಯಲ್ಲಿ ತಂಗಿದ್ದ ಸಂದರ್ಭದಲ್ಲಿ ೨೦೦೭ರ ಡಿಸೆಂಬರ್ ೨೮ರಂದು ನಿಧನರಾದರು. ಕನ್ನಡದ ಪ್ರೀತಿ ತುಂಬಿರುವ ಎಡೆಗಳಲ್ಲೆಲ್ಲಾ ಮೇಷ್ಟ್ರ ಹೆಸರು ಚಿರಸ್ಥಾಯಿಯಾಗಿರುತ್ತದೆ.

***

ವಿಡಂಬನೆ

# ಎಲ್ಲಾ ಉಚಿತ ಆದರೆ ನಷ್ಟ ಖಚಿತ

– ಎಂಎಸ್ಎನ್

ವಿಶ್ವ ಮೈಸೂರಿಗೆ ಕೆಂಪು ಬಸ್ಸಲ್ಲಿ ಹೊರಟಿದ್ದ, ಕಂಡಕ್ಟರ್ ವಿಶ್ವನಿಗೆ ಎರಡು ಟಿಕೆಟ್ ಕೊಟ್ಟ.

"ಕಂಡಕ್ಟ್ರೇ, ನಾನೊಬ್ನೇ ಇರೋದು ಸಿಂಗಲ್ಲು"

"ಗೊತ್ತು ಸಾರ್ ನೀವ್ ಒಬ್ರೇ ಇರೋದು, ನೀವು ನಮಗೆ ಬಹಳ ಬೇಕಾದವ್ರಲ್ವೇ, ಡಬಲ್ ಟಿಕೇಟ್ ಕೊಳ್ಳಿ ಪ್ಲೀಸ್" ಎಂದಾಗ ವಿಶ್ವನಿಗೆ ಆಶ್ಚರ್ಯವಾಯ್ತು.

"ನಾನೇನು ಅಷ್ಟು ದಪ್ಪ ಇದ್ದೀನಾ?" ಎಂದು ಕೇಳಿದ.

"ಸಣ್ಣ, ದಪ್ಪ ಪ್ರಶ್ನೆ ಅಲ್ಲ ಸಾರ್, ತಲೆಗೊಂದು ಟಿಕೇಟ್" ಎಂದ ಕಂಡಕ್ಟರ್.

"ತಲೆ ಇಲ್ಲದವರಿಗೆ?"

"ಅವರು ನಮ್ಮ ಬಸ್ಸಲ್ಲಿ ಬರೋದೇ ಇಲ್ಲ, ನಾಯಕರಾಗಿ ದೊಡ್ಡ ಕಾರಲ್ಲೇ ಓಡಾಡ್ತಾರೆ"

"ಎರಡು ಟಿಕೇಟ್ ಯಾಕೆ ತಗೋಬೇಕು ಕಾರಣ ಕೊಡಿ!" ಎಂದ ವಿಶ್ವ.

"ಸಾರ್, ನಮ್ಗೆ ನೆಟ್ಟಗೆ ಸಂಬಳ ಬರ್ತಾ ಇಲ್ಲ, ಸಂಸ್ಥೆಗೆ ನಷ್ಟ ಆಗ್ತಾ ಇದೆ, ಅರ್ಧ ಮಂದಿ ಪ್ರಯಾಣಿಕರಿಗೆ ಬಿಟ್ಟಿ ಸೌಲಭ್ಯ ಕೊಟ್ರೆ ಖರ್ಚು ತೂಗ್ಸೋಕೆ ಹೇಗೆ ಆಗುತ್ತೆ, ಒಬ್ರನ್ನ ಫ್ರೀಯಾಗಿ ಬಿಟ್ಟಿದ್ದಕ್ಕೆ ಇನ್ನೊಬ್ಬರಿಂದ ಡಬಲ್ ಚಾರ್ಜ್ ಪೀಕಿಸ್ತೀವಿ".

"ಎತ್ತಿಗೆ ಜ್ವರ ಆದ್ರೆ ಎಮ್ಮೆಗೆ ಬರೆ ಹಾಕೋದಾ?"

"ಬರೆ ಹಾಕಲೇಬೇಕು ಸಾರ್, ಪ್ರತೀ ವಾರ ನಿಮ್ಮ ವೈಫು ನಮ್ಮ ಬಸ್ನಲ್ಲೇ ಮೈಸೂರಿಗೆ ಹೋಗಿ ಚಾಮುಂಡಿಯ ದರ್ಶನ ಮಾಡ್ಕೊಂಡ್ ಅಲ್ಲೇ ಊಟ ಮುಗಿಸಿ ಖರ್ಚಿಲ್ಲದೆ ವಾಪಸ್ ಬರ್ತಾರೆ" ಎಂದ ಕಂಡಕ್ಟರ್.

"ಗೊತ್ತು, ಬಸ್ಸು ಬಿಟ್ಟಿ ಇರೋವಾಗ ಎಲ್ಲೆಲ್ಲೋ ಊಟ, ಇಂಥವರಿಂದ ಬಸ್ಸಲ್ಲಿ ವಿಪರೀತ ರಶ್ಶು" ಎಂದ ವಿಶ್ವ.

"ನಿಮ್ಮ ಶ್ರೀಮತಿಯವರಿಂದ ಆದ ನಷ್ಟಾನ ನೀವು ಕಾಂಪನ್ಸೇಟ್ ಮಾಡಬೇಕಲ್ಲ, ದಯವಿಟ್ಟು ಎರಡು ಟಿಕೇಟ್ ಕೊಳ್ಳಿ, ನಮ್ಮ ಸಂಸ್ಥೆಗೆ ಸಹಾಯ ಮಾಡಿ, ಎಲ್ಲ ಗಂಡಂದಿರಲ್ಲೂ ಇದೇ ನನ್ನ ಮನವಿ" ಎಂದು ಒತ್ತಾಯ ಮಾಡಿದ. ವಿಶ್ವನಿಗೆ ಆತನ ಮೇಲೆ ಕನಿಕರ ಬಂದು ಎರಡು ಟಿಕೆಟ್ ಪಡೆದ.

ಮರುದಿನ ವಿಶ್ವನ ಮನೆಯಲ್ಲಿ ನಾನು ಕುಳಿತಿದ್ದಾಗ ಈ ವಿಷಯ ಚರ್ಚೆಗೆ ಬಂತು. "ಸಂಸ್ಥೆಗೆ ಕಷ್ಟ ಇರೋವಾಗ ಬಿಟ್ಟಿ ಬಸ್ ಯಾಕ್ ಬಿಡಬೇಕಾಗಿತ್ತು?" ಎಂದು ವಿಶ್ವ ಕೇಳಿದ.

"ಚುನಾವಣೆ ಟೈಮಲ್ಲಿ ಆಶ್ವಾಸನೆ ಕೊಟ್ಟಿರ್ತಾರೆ, ನಮಗೆ ಓಟು ಕೊಟ್ರೆ, ಬಿಟ್ಟಿ ಕರೆಂಟು, ಬಿಟ್ಟಿ ಬಸ್ಸು, ಬಿಟ್ಟಿ ಅಕ್ಕಿ ಭಾಗ್ಯ, ಪ್ರತಿ ತಿಂಗಳು ಒಂದಷ್ಟು ಬಿಟ್ಟಿ ಹಣ ಕೊಡ್ತೀವಿ ಎಂದೆಲ್ಲ ಹೇಳಿರ್ತಾರಲ್ಲ?" ಎಂದೆ.

"ಗಾಳಕ್ಕೆ ಎರೆಹುಳು ಸಿಕ್ಕಿಸಿದರೆ ಮೀನು ಸಿಗುತ್ತೆ, ಮೊದಲು ನಾಯಕರು ತಾವೇ ಎಲ್ಲಾ ತಿಂತಾ ಇದ್ರು, ಈಗ ಅವರು ತಿನ್ನೋದ್ರಲ್ಲೇ  ಒಂದು ಮುಷ್ಠಿ ಅನ್ನ ಜನಕ್ಕೂ ಹಾಕ್ತಾರೆ! ಎರೇಹುಳ ನಮಗೆ, ಮೀನು ಅವರಿಗೆ" ಎಂದ ವಿಶ್ವ.

"ಊಟ ಮಾಡೋ ಮೊದಲು ಕಾಗೆಗೆ ಒಂದು ಮುಷ್ಠಿ ಅನ್ನ ಹಾಕ್ತಾರಲ್ಲ ಹಾಗೆ!" ಎಂದೆ. ವಿಶಾಲು ಕಾಫಿ ತಂದಿಟ್ಟಳು.

"ನೀವು ಏನೇ ಹೇಳಿ, ಇಷ್ಟು ಭಾಗ್ಯಗಳು ಬೇರೆ ಯಾರೂ ಕೊಟ್ಟಿರಲಿಲ್ಲ, ಮುಟ್ಟಿದ್ದೆಲ್ಲ ಭಾಗ್ಯ ಆಗ್ತಿದೆ, ಹಂಚಿ ತಿನ್ನೋದ್ರಲ್ಲಿ ಸುಖ ಇದೆ. ತಮಗೆ ಬರೋ ಭಾಗ್ಯದಲ್ಲಿ ಜನಗಳಿಗೂ ಸ್ವಲ್ಪ ಕೊಡ್ತಾರಪ್ಪ, ಏನ್ ತಪ್ಪು?" ಎಂದಳು ವಿಶಾಲು. ಅವಳಿಗೆ ಪ್ರತಿ ತಿಂಗಳು ಹಣ ಬರ್ತಿತ್ತು.

"ವಿಶಾಲು, ನಿಮಗೆ ಕೊಡೋ ಹಣ ಬಡ ಜನಗಳ ತೆರಿಗೆಯಿಂದ ಬಂದಿರುತ್ತೆ" ಎಂದೆ.

"ಬರಲಿ, ಏನೀಗ? ಇದರಿಂದ ಅನೇಕ ಅನುಕೂಲಗಳೂ ಇರುತ್ತೆ. ಜಯಲಲಿತ ಸಿ.ಎಂ. ಆಗಿದ್ದಾಗ ಮೊದಲ ಬಾರಿಗೆ ಎಲ್ಲಾ ಪಿ.ಯು.ಸಿ. ಹುಡುಗರಿಗೆ ಒಂದೊಂದು ಲ್ಯಾಪ್ ಟಾಪ್ ಉಚಿತವಾಗಿ ಕೊಟ್ಟರು. ಇದರಿಂದ ತಮಿಳು ನಾಡಿನ ವಿದ್ಯಾರ್ಥಿಗಳಿಗೆ ಅನುಕೂಲ ಆಯ್ತಲ್ವಾ ?" ವಿಶಾಲು ಸವಾಲೆಸೆದಳು.

ಅದಕ್ಕೆ ವಿಶ್ವ ಒಪ್ಪಲಿಲ್ಲ. "ಅವರ ಕೈಯಿಂದ ಕೊಟ್ಟಿದ್ರೆ ಓಕೆ, ಸರ್ಕಾರದ ಹಣ ಅಂದರೆ ಬಡವರ ತೆರಿಗೆ ದುಡ್ಡು" ಎಂದು ವಿಶ್ವ ಹೇಳಿದಾಗ ವಿಶಾಲು ವಿವರಿಸಿದಳು.

"ನೋಡಿ, ಸರ್ಕಾರದಿಂದ ಆರೋಗ್ಯದ ಸ್ಕೀಂಗಳಿವೆ, ಬೀದಿ ದೀಪಗಳು, ಪಬ್ಲಿಕ್ ಟ್ಯಾಪ್‌ಗಳು ಎಲ್ಲಾದಕ್ಕೂ ತೆರಿಗೆ ಹಣ ಖರ್ಚು ಮಾಡ್ತಾರಲ್ಲ ಅದೇ ರೀತಿ ಕ್ಯಾಷು ಕೊಡ್ತಾರಪ್ಪ"

"ಕ್ಯಾಷ್ ಕೊಡೋ ಬಗ್ಗೆ ನನಗೆ ತಕರಾರು ಇದ್ಯಪ್ಪ, ನೋಡು ವಿಶ್ವ, ಜನಕ್ಕೆ ಎಲ್ಲಾ ವಸ್ತುಗಳನ್ನ ಕೊಡ್ತೀವಿ ನಿಜ. ಆದರೆ ಕೈಗೆ ಕ್ಯಾಷ್ ಬಂದಾಗ ಆಗೋ ಸಂತೋಷ ಬೇರೆ ಏನು ಕೊಟ್ಟಾಗಲೂ ಆಗೊಲ್ಲ" ಎಂದೆ.

ನನಗೆ ಹಳೇ ಜೋಕೊಂದು ನೆನಪಾಯ್ತು . ಅದನ್ನ ವಿಶ್ವನಿಗೆ ಹೇಳಿದೆ.

"ಇದು ನೀನು ಕೇಳಿರೋ ಜೋಕೇ, ಒಂದು ಹೋಟೆಲ್ ಮುಂದೆ ಬೋರ್ಡ್ ಹಾಕಿದ್ರಂತೆ, 'ಬನ್ನಿ, ತಿನ್ನಿ, ಬಿಲ್ ಕೊಡುವಷ್ಟು ಇಲ್ಲ, ನಿಮ್ಮ ಮೊಮ್ಮಗ ಕೊಡುತ್ತಾನೆ' ಅಂತಿತ್ತು.  ಒಬ್ಬ ವ್ಯಕ್ತಿಗೆ ಬೋರ್ಡ್ ನೋಡಿ ಖುಷಿ ಆಗೋಯ್ತು, ಹೋಟೆಲ್ನಲ್ಲಿ ಇರೋ ಐಟಂಸ್ ಎಲ್ಲಾ ತರಿಸಿ ಚೆನ್ನಾಗಿ ತಿಂದ, ಬಿಲ್ ಸಾವಿರ ರೂಪಾಯಿ ಆಯ್ತು, ಎದ್ದು ಬರುವಾಗ, ವೇಟರ್ 'ಸ್ವಾಮಿ 1250/– ಬಿಲ್ ಇದೆ, ಇದನ್ನು ಕ್ಲಿಯರ್ ಮಾಡಿ' ಎಂದ.

"ರೀ 1250/– ಬಿಲ್ ನಂದಲ್ಲ" ಎಂದ ಗ್ರಾಹಕ.

'ನಿಜ. ಇದು ನಿಮ್ಮ ಬಿಲ್ ಅಲ್ಲ ಸ್ವಾಮಿ, ನೀವು ತಿಂದಿರೋದನ್ನ ನಿಮ್ಮ ಮೊಮ್ಮಗ ಕೊಡ್ತಾನೆ, ಆದರೆ ನಿಮ್ಮ ತಾತ ತಿಂದಿರೋ ಬಿಲ್ಲು ಇದು ರೂ.1,250/– ಮೊಮ್ಮಗನಾಗಿ ಇದನ್ನ ನೀವು ಕೊಡ್ಲೇಬೇಕಾಗುತ್ತಲ್ಲ" ಎಂದು ಒತ್ತಾಯಿಸಿ ಹಣ ವಸೂಲಿಮಾಡಿದ.

"ಹೀಗೆ ತಾತ ಮಾಡಿದ ಸಾಲ ಮೊಮ್ಮಗ ತೀರಿಸಿದಂತೆ ಹಳೇ ಸರ್ಕಾರ ಮಾಡಿದ ಸಾಲನ ಹೊಸ ಸರ್ಕಾರ ತೀರಿಸಬೇಕು" ಎಂದಳು ವಿಶಾಲು.

"ಇಂಧನದ ಬೆಲೆ ಜಾಸ್ತಿ ಮಾಡಿದ್ರು, ಅವರಿಗೆ ಆಗ್ಲೇ ಗೊತ್ತಿತ್ತು, ನೀರು, ಹಾಲು, ಸಾರಿಗೆ, ತರಕಾರಿ, ಆಟೋ ಚಾರ್ಜು, ಎಲ್ಲಾ ಇದರಿಂದ ದುಬಾರಿ ಆಗುತ್ತೆ ಅಂತ. ತಮ್ಮ ಸ್ವಾರ್ಥಕ್ಕೆ ನಮ್ಮನ್ನ ಬಳಸಿಕೊಳ್ಳಬಾರದಿತ್ತು".

"ಎಲ್ಲಿ ಉಚಿತವಾಗಿ ಐಟಂಗಳ್ನ ಕೊಡ್ತಾರೋ ಅಲ್ಲಿ ಅಪಾಯದ ಗಂಟೆಗಳು ತಮಗೆ ತಾವೇ ಹೊಡೆದುಕೊಳ್ಳುತ್ತೆ. ರೇಷನ್ ಅಕ್ಕಿ ಇಪ್ಪತ್ತು ಮೂವತ್ತು ಕೆ.ಜಿ. ಕೊಟ್ಟಾಗ ಅನೇಕರು ಪಕ್ಕದ ಅಂಗಡಿಗೇ ಮಾರಿಕೊಳ್ತಾರೆ, ನೋಡಿರೋ ಸತ್ಯ ಇದು, ಲಾರಿಗಳಲ್ಲಿ ರೇಷನ್ ಅಕ್ಕೀನ ಬೇರೆ ಕಡೆ ಸಾಗಿಸಿದ ವಿಷ್ಯಾನ ಪೇಪರ್ ಗಳಲ್ಲಿ ಹಾಕ್ತಾನೇ ಇರ್ತಾರೆ, ಆದ್ದರಿಂದ ಜನಕ್ಕೆ ಅಗತ್ಯ ಇರೋದನ್ನ ಮಾತ್ರ ಕೊಡಬೇಕು"

"ಏನಪ್ಪ ಆ ರೀತಿ ಅಗತ್ಯ ಇರೋದು?" ಎಂದು ವಿಶ್ವ ನನ್ನ ಕೇಳಿದ.

"ಟೋಲ್‌ನಲ್ಲಿ ಚಾರ್ಜಸ್ ಕಡಿಮೆ ಮಾಡಿ, ಹಾಲಿನ ಬೆಲೆ ಕಡಿಮೆ ಮಾಡಿ, ಎಲ್ಲಾ ರೇಟ್‌ಗಳೂ ಕಮ್ಮಿ ಆಗಲಿ, ನೇರವಾಗಿ ಕ್ಯಾಷ್ ಕೊಡೋ ಬದಲು ಈ ರೀತಿ ಮಾಡಿದ್ರೆ ಎಲ್ಲಾ ಜನಕ್ಕೆ ಖಂಡಿತ ಸಹಾಯ ಆಗುತ್ತಲ್ಲ" ಎಂದೆ.

"ನೀ ಹೇಳಿದ ರೀತಿ ಸಹಾಯ ಮಾಡಿದರೆ ಓಟು ಸಿಗಲ್ಲವಲ್ಲ?" ಎಂದು ವಿಶ್ವ ನಕ್ಕ.

***

## ಗಣರಾಜ್ಯೋತ್ಸವ 2025, ದೆಹಲಿ – ಕರ್ನಾಟಕದ ಟ್ಯಾಬ್ಲೋ – ಲಕ್ಕುಂಡಿ ದೇವಾಲಯ



# ಕಾಣದ ಕೈಗಳು

**– ಡಾ.ಸತ್ಯವತಿ ಮೂರ್ತಿ**

ನಮ್ಮ ಜೀವನದಲ್ಲಿ ನಡೆಯುವ ಕೆಲವೊಂದು ಘಟನೆಗಳು ಎಷ್ಟು ವರ್ಷಗಳಾದರೂ ಹೊಸದಾಗಿಯೇ ಇರುತ್ತವೆ. ಅವು ಮತ್ತೆ ಮತ್ತೆ ಎದುರಾಗಿ ಕಾಡುತ್ತಲೇ ಇರುತ್ತವೆ. ನನ್ನ ಜೀವನದಲ್ಲಿ ಸುಮಾರು ನಲ್ವತ್ತು ವರ್ಷಗಳ ಹಿಂದೆ ನಡೆದ ಇಂತಹುದೇ ಒಂದು ಘಟನೆ ಇಂದು ನಡೆದಂತಿದೆ. ಅದನ್ನೇ ನಿಮ್ಮೆಲ್ಲರೊಡನೆ ಹಂಚಿಕೊಳ್ಳುವ ಪ್ರಯತ್ನ ಈ ನನ್ನ ಲೇಖನ.

ನಾನು ಪ್ರೌಢಶಾಲಾ ಅಧ್ಯಾಪಕಿಯಾಗಿ ಕೆಲಸಮಾಡುತ್ತಿದ್ದ ಸಮಯ. ನಮ್ಮ ಶಾಲೆಯೇ ಪರೀಕ್ಷಾ ಕೇಂದ್ರವಾಗಿದ್ದರಿಂದ ಎಸ್.ಎಸ್. ಎಲ್.ಸಿ ಪರೀಕ್ಷೆಯ ನೀರೀಕ್ಷಕರಾಗಿ ನಮ್ಮ ಶಾಲೆಯ ಅಧ್ಯಾಪಕರೆಲ್ಲ ಸೇವೆ ಸಲ್ಲಿಸುತ್ತಿದ್ದರು, ಅಂತೆಯೇ ನಾನೂ!

ಅಂದಿನ ನಿರೀಕ್ಷಕ ಕಾರ್ಯಕ್ಕೆ ನನಗೆ ಎರಡನೇ ಮಹಡಿಯಲ್ಲಿದ್ದ, ನಾನು ಯಾವಾಗಲೂ ಇಷ್ಟಪಡುತ್ತಿದ್ದ ಕೊಠಡಿಯೇ ದೊರಕಿ ಕಾರ್ಯದಲ್ಲಿ ನನ್ನ ಸಂತೋಷವನ್ನು ಹೆಚ್ಚಿಸಿತ್ತು. ಧಾರಾಳವಾಗಿ ಗಾಳಿ ಬೆಳಕು ಬರುತ್ತಿದ್ದ ಆ ಸಾಲಿನ ಕೊಠಡಿಗಳನ್ನು ನಾನು ಎಷ್ಟು ಇಷ್ಟಪಡುತ್ತಿದ್ದೆನೆಂದರೆ ಈಗಲೂ ಇನ್ನೂ ಒಮ್ಮೊಮ್ಮೆ ಕನಸಿನಲ್ಲಿ ಪುಸ್ತಕಗಳನ್ನು ಹೊತ್ತು ಬೋಧಿಸಲು ಆ ಕೊಠಡಿಗಳಿಗೆ ಹೋಗುತ್ತೇನೆ.

ಅದು ಹಾಗಿರಲಿ, ಅಂದೇಕೋ ಮೋಡ ಕವಿದು ಮಳೆ ಬರುವ ಸೂಚನೆ ಇತ್ತು. "ಅಯ್ಯೋ ಪರೀಕ್ಷೆ ಮುಗಿದು ಮನೆಗೆ ಹೋಗುವ ವೇಳೆಗೆ ಮಳೆ ಇಲ್ಲದಿರುವಂತಾದರೆ ಸಾಕು" ಎಂದು ಮನದಲ್ಲೇ ಪ್ರಾರ್ಥಿಸುತ್ತಿದ್ದೆ. (ಅಪರಿಮಿತ ಶಿಷ್ಯವೃಂದವನ್ನು ಹೊಂದಿದ್ದ ನನಗೆ ಮನೆಗೆ ಹೋಗುವ ವೇಳೆಗೆ ಕಾಯುತ್ತಿದ್ದರು) ದಟ್ಟವಾದ ಮೋಡದಿಂದ ಕತ್ತಲು ಆವರಿಸುತ್ತಿದ್ದರೂ ಕೊಠಡಿಯಲ್ಲಿ ವಿದ್ಯುದ್ದೀಪಗಳಿದ್ದುದರಿಂದ ಬೆಳಕಿಗೇನೂ ಕೊರತೆಯಿರಲಿಲ್ಲ. ನಾನು ಯಾವುದೇ ಕೆಲಸ ಮಾಡಿದರೂ ಶ್ರದ್ಧೆಯಿಂದ ಮಾಡುತ್ತಿದ್ದೆನಾದ್ದರಿಂದ ಬಹಳ ಎಚ್ಚರದಿಂದ ಮಕ್ಕಳನ್ನು ಗಮನಿಸುತ್ತಿದ್ದೆ. ಯಾರೂ ಒಬ್ಬರನ್ನೊಬ್ಬರು ನೋಡಿ ನಕಲು ಮಾಡಬಾರದಲ್ಲ!. ಅದೇ ಕೆಲಸಕ್ಕಾಗಿಯೇ ಅಲ್ಲವೇ ನಾನು ಅಲ್ಲಿದ್ದದ್ದು. ಯೌವನದ ಹುಮ್ಮಸ್ಸು ಬೇರೆ! ನನಗೆ ಕೊಟ್ಟಿದ್ದ ಕೊಠಡಿ ಎರಡನೆಯ ಮಹಡಿಯ ಮೇಲಿತ್ತು ಎಂದು ಈಗಾಗಲೇ ತಿಳಿಸಿದ್ದೇನೆ. ಸುಮಾರು ನಲ್ವತ್ತು ಮಕ್ಕಳು ಕುಳಿತು ಪರೀಕ್ಷೆ ಬರೆಯುತ್ತಿದ್ದರು. ಇನ್ನೇನು ಅರ್ಧಘಂಟೆ ಇದ್ದಿರಬೇಕು. ಸುಮಾರು ಮಕ್ಕಳು ಬರೆದು ಮುಗಿಸಿ ಉತ್ತರ ಪತ್ರಿಕೆಯನ್ನು ಕೊಟ್ಟು ಹೊರಟು ಹೋಗಿದ್ದರು. ಕಡಿಮೆ ಜನವಿದ್ದದ್ದರಿಂದ ಈಗ ನನ್ನ ಕೆಲಸ ಸುಲಭವಾಗಿತ್ತು. ಸಮಯ ಕಳೆಯಲು ಆಗೊಮ್ಮೆ ಈಗೊಮ್ಮೆ ನಾನು ಕಿಟಕಿಯಿಂದ ಹೊರಗಿಣುಕಿ ನೋಡುತ್ತಿದ್ದೆ. ಹಾಗೆ ನೋಡುವಾಗ ನಾನು ಒಮ್ಮೆ ಕಿಟಕಿಯಿಂದ ಕೆಳಗೆ ನೋಡಿದೆ. ನಾನೇಕೆ ಹಾಗೆ ನೋಡಿದೆ? ಎನ್ನುವುದಕ್ಕೆ ನನ್ನಲ್ಲಿ ಉತ್ತರವಿಲ್ಲ. ಕಿಟಕಿಯಿಂದ ಹೊರಗಿಣುಕುವುದರಲ್ಲಿ ವಿಚಿತ್ರವಾದ್ದೇನೂ ಇರಲಿಲ್ಲ. ಆದರೆ ಕೆಳಗೆ ಬಗ್ಗಿ ನೋಡಬೇಕೆನ್ನಿಸಿದುದು! ನೋಡಬೇಕೆನ್ನಿಸಿತು, ನೋಡಿದೆ ಅಷ್ಟೆ.

ಅಲ್ಲೊಂದು ಪೇಪರ್ ಮರದ ರೆಂಬೆಯೊಂದಕ್ಕೆ ಸಿಕ್ಕು ಹಾರಾಡುತ್ತಿದೆ. ಯಾರೋ ಮೇಲಿನಿಂದ ಕೆಳಕ್ಕೆ ಎಸೆದಿರಬಹುದು. ಅದು ಕೆಳಗೆ ಬೀಳದೆ ಮರದಮೇಲೆ ಬಿದ್ದಿರಬೇಕು ಎಂದುಕೊಂಡು ತರಗತಿಯಲ್ಲಿ ಕುಳಿತ ಮಕ್ಕಳೆಡೆಗೆ ತಿರುಗಿದೆನಾದರೂ ಆ ಪೇಪರ್ ನನ್ನ ಕುತೂಹಲಕ್ಕೆ ನಾಂದಿಯಾಯಿತು. ಮತ್ತೆ ನೋಡಿದೆ. ಹೌದು ಅದು ಸುಮಾರು ದೊಡ್ಡದಾಗಿಯೇ ಇತ್ತು. ಅಷ್ಟು ದೊಡ್ಡದಾಗಿದ್ದ ಅ ಪೇಪರ್ ಅಲ್ಲಿಗೆ ಹೋಗಿ ಹೇಗೆ ಸೇರಿತು? ನಾವು ಸಾಮಾನ್ಯವಾಗಿ ಪೇಪರನ್ನು ಎಸೆಯಬೇಕಾದರೆ ಕೈಯಲ್ಲಿ ಮುದುಡಿ ಉಂಡೆಮಾಡಿ ಹಾಕುತ್ತೇವಲ್ಲವೇ? ಎಂದೆಲ್ಲ ಮನದಲ್ಲೇ ಚರ್ಚಿಸುತ್ತಿದ್ದ ನನಗೆ ಆಕಾಶದಲ್ಲಿ ಮೋಡ ತುಂಬಿ ಇನ್ನೇನು ಇನ್ನೊಂದು ಕ್ಷಣದಲ್ಲಿ ಮಳೆ ಬರುವಂತಿದ್ದ ವಾತಾವರಣ ಅದರ ಬಗ್ಗೆ ಮತ್ತೂ ಯೋಚಿಸುವಂತೆ ಮಾಡಿತು. ಯಾವ ಪೇಪರ್ ಇರಬಹುದು? ಆ ಪೇಪರ್ ಅಲ್ಲೇನು ಮಾಡುತ್ತಿದೆ? ಅಲ್ಲಿಗೆ ಹಾಕಿದವರಾರು? ಹೀಗೆ ಮರದ ಕೊಂಬೆಯಲ್ಲಿ ನೇತಾಡುವಂತೆ ಯಾರು ಎಸೆದಿರಬಹುದು? ಕುತೂಹಲ ಹೆಚ್ಚಾಗಿ ಯಾವುದಾದರೂ ಆಗಲಿ ತರಿಸಿ ನೋಡಿಬಿಡಬೇಕು, ಎಂದುಕೊಂಡು ಅಲ್ಲಿಯೇ ಓಡಾಡುತ್ತಿದ್ದ ಶಾಲೆಯ ಪ್ಯೂನ್ ಜವರನನ್ನು ಕರೆದು ಕಿಟಕಿಯಿಂದ ಆ ಪೇಪರನ್ನು ತೋರಿಸಿ

ತರುವಂತೆ ನಿವೇದಿಸಿಕೊಂಡೆ. ಅದಾವ ಪುಣ್ಯವೋ! ಅವನು ಯಾವ ನೆವವನ್ನೂ ಹೇಳದೇ ಬೇಗ ಹೋಗಿ ಮರ ಹತ್ತಿ ರೆಂಬೆಗೆ ಸಿಲುಕಿಕೊಂಡಿದ್ದ ಆ ಪೇಪರನ್ನು ಬಿಡಿಸಿ ತಂದುಕೊಟ್ಟ. ಬೆಂಗಳೂರಿನಲ್ಲಿದ್ದುಕೊಂಡು ಅವನಿಗೆ ಮರ ಹತ್ತಲು ಬರುತ್ತಿತ್ತು ಎಂಬುದು ವಿಶೇಷ ಸಂಗತಿ. ಅಂತೂ ಮಳೆರಾಯನ ಆಗಮನಕ್ಕೆ ಮೊದಲೇ ಪೇಪರ್ ನನ್ನ ಕೈಗೆ ಬಂದು ಆತಂಕವನ್ನು ಕಡಿಮೆಮಾಡಿ ಕುತೂಹಲವನ್ನು ಹೆಚ್ಚಿಸಿತ್ತು. ಪೇಪರ್ ಕೈಗೆ ಬರುತ್ತಿದ್ದಂತೆ ಅದು ಎಸ್.ಎಸ್.ಎಲ್.ಸಿ ಪರೀಕ್ಷೆಯ ಉತ್ತರಪತ್ರಿಕೆ ಎನ್ನುವುದು ಖಚಿತವಾಗಿ ಕುತೂಹಲದಿಂದ ಸರಸರನೆ ಅದರ ಮೇಲಿನ ವಿವರಗಳನ್ನು ನೋಡಿದೆ. ನನ್ನ ಎದೆ ಧಸಕ್ಕೆಂದಿತು.

ಅದು ನನ್ನದೇ ರೂಂಗೆ ಸೇರಿದ ಉತ್ತರಪತ್ರಿಕೆ!. ಅದು ಹೇಗೆ ಅಲ್ಲಿಗೆ ಹಾರಿಹೋಯಿತು? ನನ್ನ ಮೇಜು ಕಿಟಕಿಯ ಬಳಿ ಇದ್ದದೇನೋ ನಿಜ. ಆದರೆ ಪೇಪರ್ ಹಾರಿ ಹೋಗುವಷ್ಟು ಹತ್ತಿರ ಇದ್ದಿತೆಂಬುದನ್ನು ನಾನು ಒಪ್ಪಲಾರೆ. ಅಥವಾ ಅದು ಹಾರಿ ಹೋಗುವಂತಹ ಗಾಳಿಯೂ ಬೀಸುತ್ತಿರಲಿಲ್ಲ! ನನ್ನ ಅದೃಷ್ಟಕ್ಕೆ ಅದು ಪೂರ್ತಿ ಕೆಳಗೆ ಬೀಳದೆ ಮರದ ಕೊಂಬೆಗೆ ಸಿಕ್ಕುಹಾಕಿಕೊಂಡು ಜೋತಾಡುತ್ತಿತ್ತು.

ಅದನ್ನು ನೋಡಿದ ನನ್ನ ಮನಸ್ಸಿನಲ್ಲಿ ಪ್ರಶ್ನೆಗಳ ಸರಮಾಲೆಯೇ ಹುಟ್ಟಿಕೊಂಡಿತು.

ಅಂದು ನಾನು ಕಿಟಕಿಯಾಚೆಗೆ, ಕೆಳಗೆ ಬಗ್ಗಿ ನೋಡದೇ ಇದ್ದಿದ್ದರೆ, ನನ್ನ ಕಣ್ಣಿಗೆ ಅದು ಬೀಳದೇ ಇದ್ದಿದ್ದರೆ ನಾನು ಅದನ್ನು ತರಿಸುವ ಯತ್ನವನ್ನು ಮಾಡುತ್ತಿರಲಿಲ್ಲ. ಮಕ್ಕಳಿಂದ ಪೇಪರ್‌ಗಳನ್ನು ಹಿಂದಕ್ಕೆ ಪಡೆಯುವಾಗಲೇ ಕೊಟ್ಟವರ ರಿಜಿಸ್ಟರ್ ನಂಬರನ್ನು  ಗುರುತು ಹಾಕಿಕೊಳ್ಳುತ್ತಿದ್ದೆ. ಆದ್ದರಿಂದ ಮೇಲುಸ್ತುವಾರಿಯ ಕೆಲಸ ಮುಗಿದಮೇಲೆ ನಾನು ಮತ್ತೆ ಎಣಿಸುವ ಗೋಜಿಗೆ ಹೋಗುತ್ತಿದ್ದೆನೋ ಇಲ್ಲವೋ ತಿಳಿಯದು ಅಲ್ಲವೇ?

ಮುಖ್ಯಸ್ಥರ ಬಳಿ ಕೊಡುವುದಕ್ಕೆ ಹೋದಾಗ ಅವರು ಖಂಡಿತವಾಗಿ ಎಣಿಸಿ ನೋಡುತ್ತಿದ್ದರು. ಆ ಸಂಖ್ಯೆಯ ವಿದ್ಯಾರ್ಥಿ ಹಾಜರಿದ್ದದ್ದು ಅವನ ಸಹಿಯಿಂದ ಗೊತ್ತಾಗುತ್ತಿತ್ತು. ಆದರೆ ಅವನ ಪತ್ರಿಕೆ ಇಲ್ಲವೆಂದರೆ ಅದೊಂದು ನಿಗೂಢ ಕುತೂಹಲ ಕಾರಕವಾದ ವಿಷಯವಾಗುತ್ತಿತ್ತು. ಅದರ ಮೂಲವನ್ನು ಹುಡುಕಿಕೊಂಡು ಹೋಗುವುದಂತೂ ಆ ಕ್ಷಣಕ್ಕೆ ಸಾಧ್ಯವಿರಲಿಲ್ಲ. ಮುಂದಿನ ಪರಿಣಾಮ ಅಸ್ಪಷ್ಟ.

ನಾನೇ ಕೊಡುವ ಮುನ್ನ ಎಣಿಸಿ ಆ ಪತ್ರಿಕೆ ಸಿಗದೆ ಹೋಗಿದ್ದರೆ ನಾನೇನು ಮಾಡುತ್ತಿದ್ದೆ? ವಿಷಯವನ್ನು ಮೇಲಿನ ಅಧಿಕಾರಿಗಳಿಗೆ ತಿಳಿಸಿ ಅದರಿಂದ ಬರುತ್ತಿದ್ದ ಶಿಕ್ಷೆಗೆ ಸಿದ್ಧಳಾಗಬೇಕಿತ್ತಲ್ಲವೇ?

ಆ ನಂಬರಿನ ಪತ್ರಿಕೆ ಕಳೆದುಹೋಗಿದ್ದು ಯಾರ ಗಮನಕ್ಕೂ ಬರದೆ ಆ ವಿದ್ಯಾರ್ಥಿ ಪರೀಕ್ಷೆಗೆ ಗೈರುಹಾಜರಿಯಾಗಿದ್ದ ಎಂದು ಫಲಿತಾಂಶ ಕೊಟ್ಟಿದ್ದರೆ!

ಆ ವಿದ್ಯಾರ್ಥಿ ಉತ್ತರ ಪತ್ರಿಕೆ ಕೊಟ್ಟು ಸಹಿ ಹಾಕಿ ಹೋಗಿದ್ದರಿಂದ ಅದಕ್ಕಾಗಿ ಹುಡುಕಾಡಿ ಸಿಗದೆ ಆ ಮಗುವನ್ನು ನಪಾಸು ಮಾಡುವುದು ಸರಿಯಲ್ಲವೆಂದು ಜೀವನಾಂಶದ ಅಂಕಗಳನ್ನು ಕೊಟ್ಟಿದ್ದಿದ್ದರೆ!

ತಾನು ಎಲ್ಲವನ್ನೂ ಬರೆದಿದ್ದರೂ ತನಗೆ ಅನುಕೂಲವಾದ ಅಂಕಗಳು ದೊರಕಲಿಲ್ಲ ಎಂದೂ, ತನ್ನ ಉತ್ತರಪತ್ರಿಕೆಯನ್ನು ಪುನಃ ಪರಿಶೀಲಿಸಬೇಕು ಎಂದೂ ವಿದ್ಯಾರ್ಥಿ ಕೇಳಿಕೊಂಡಿದ್ದರೆ!

ಆ ಮಗುವೋ , ಇಲ್ಲ ಕೇಂದ್ರದ ಮೇಲಧಿಕಾರಿಯೋ ನನ್ನ ಮೇಲೆ ದೂರು ಕೊಟ್ಟಿದ್ದಿದ್ದರೆ?

ಎಲ್ಲಕ್ಕಿಂತ ಹೆಚ್ಚಾಗಿ ಪರೀಕ್ಷೆ ಬರೆದ ಆ ಮಗುವಿಗೆ ದೊರಕಬೇಕಾದ ಅಂಕಗಳು ದೊರಕದೆ ಅನ್ಯಾಯವಾಗಿದ್ದರೆ?

ನಾನು ಆ ಪೇಪರನ್ನು ನೋಡುವ ಬದಲು ಬೇರೆ ಯಾವುದೇ ಅಧ್ಯಾಪಕ(ಕಿ) ನೋಡಿದ್ದರೆ ನನಗಾಗುತ್ತಿದ್ದ ಅವಮಾನ?

ಆ ಪತ್ರಿಕೆ ಕಳೆದುಹೋಗಲು ನಾನು ಜವಾಬ್ದಾರಳಾದ್ದರಿಂದ ನನಗೆ ಯಾವ ರೀತಿ ಶಿಕ್ಷೆಯಾಗುತ್ತಿದ್ದಿರಬಹುದು?

ಇದನ್ನೆಲ್ಲ ನೆನೆಸಿಕೊಂಡಾಗ ಮಾತ್ರ ಎದೆ ಒಂದು ಕ್ಷಣ ನಡುಗಿದ್ದಂತೂ ಉಂಟು.

'ಯಾವುದೋ ಪೇಪರ್ ಅಲ್ಲಿ ಬಿದ್ದಿದೆ ಯಾರದೋ ಬೇಜವಾಬ್ದಾರಿಯಿಂದ ಆಗಿರುವ ಕೆಲಸ ಇದು' ಎಂದು ಅದನ್ನು ತರಿಸಿಕೊಂಡು ಏನನ್ನೋ ಸಾಧಿಸಿ ಹೆಮ್ಮೆಯಿಂದ ಬೀಗುತ್ತೇನೆ ಎಂದುಕೊಂಡಿದ್ದೆ. ಎಷ್ಟು ಬೇಗ ಅವನು ಪೇಪರ್ ತರುತ್ತಾನೋ, ತಾನು ಎಷ್ಟು ಬೇಗ ಪೇಪರನ್ನು ಅಲ್ಲಿ ಹಾಕಿದವರ ಬಗ್ಗೆ ಉಳಿದವರಿಗೆ ಹೇಳುತ್ತೇನೋ ಎಂದು ಕಾತುರದಿಂದ ಕಾಯುತ್ತಿದ್ದೆ.

ಜವರ ಪೇಪರನ್ನು ತಂದದ್ದೇ ತಡ ಅವನ ಕೈಯಿಂದ ಕಸಿದುಕೊಂಡು ಅದರ ಮೇಲೆ ಕಣ್ಣು ಹಾಯಿಸಿದ ನಂತರ ನಾನೇ ಅಪರಾಧಿ ಎಂದು ಅರಿವಾದಾಗಿನ ನನ್ನ ಮನಃಸ್ಥಿತಿಯನ್ನು ಊಹಿಸಿಕೊಳ್ಳಿ! ಪೇಪರ್ ಹಾರಿಹೋಗಿ ಕೆಳಗೆ ಬಿದ್ದ ವಿಚಾರವನ್ನು, ಬೇರೆ ಯಾವ ಅಧ್ಯಾಪಕರೊಂದಿಗಾಗಲಿ, ಬೇರೆ ಯಾರಲ್ಲಿಯೇ ಆಗಲಿ ಚರ್ಚಿಸದೇ ಇದ್ದದ್ದು ನನ್ನ ಅದೃಷ್ಟ! ಕಳ್ಳ ಸಿಕ್ಕುಬಿದ್ದ ಮೇಲಂತೂ ಬೇರೆ ಯಾರಲ್ಲೂ ಪ್ರಸ್ತಾಪಿಸುವ ಪ್ರಶ್ನೆಯೇ ಇರಲಿಲ್ಲ.

ಅಂದೆಲ್ಲ ರಾತ್ರಿ ನನಗೆ ನನ್ನ ದತ್ತಾತ್ರೇಯನ ನೆನಪೇ ನೆನಪು. ನೂರಕ್ಕೆ ಒಂದಂಶದಷ್ಟಾದರೂ ನಾನು ಕಿಟಕಿಯ ಹೊರಗೆ ನೋಡುವ ಸಂದರ್ಭವೇ ಇರಲಿಲ್ಲ! ಮಳೆ ಬಂದು ಪತ್ರಿಕೆ ಒದ್ದೆಯಾದ ಮೇಲೆ ನೋಡದೆ, ಯಾವುದೇ ರೀತಿಯ ಗೊಂದಲಕ್ಕೆ ಸಿಕ್ಕಿಹಾಕಿಕೊಳ್ಳದೆ, ಸಮಯಕ್ಕೆ ಸರಿಯಾಗಿ ಕಿಟಕಿಯ ಹೊರಗೆ ನೋಡಿ, ಅದರಲ್ಲೂ ನಾನಿದ್ದ ಸ್ಥಳದಿಂದ ಬಹಳಷ್ಟು ಕೆಳಗಿದ್ದ ಮರವನ್ನು ನೋಡಿ ಅಲ್ಲಿದ್ದ ಉತ್ತರಪತ್ರಿಕೆಯನ್ನು ಗುರುತಿಸುವಂತಾಗಿದ್ದದ್ದು, ಮಳೆಬರುವ ಮುನ್ನವೇ ಅದನ್ನು ಅಲ್ಲಿಂದ ತರಿಸಿಕೊಂಡದ್ದೂ, ದೈವ ಬೆಂಬಲವಿಲ್ಲದೇ ಸಾಧ್ಯವೇ ಇದ್ದಿರಲಿಲ್ಲ. ಇಷ್ಟಾದರೂ ಆ ಪೇಪರ್ ಅಲ್ಲಿಗೆ ಹೋದುದರ ರಹಸ್ಯ ಇಂದಿಗೂ ತಿಳಿದಿಲ್ಲ. ಕಾಡುವ ಕೈ ಸಾವಿರವಾದರೆ ಕಾಪಾಡುವ ಕೈ ಒಂದು ಇದ್ದೇ ಇರುತ್ತದೆ ಎಂಬ ಸತ್ಯದ ಅರಿವಾಗಿ ಯಾವುದೋ ಕಾಣದ ಕೈ ಎಲ್ಲಿಂದಲೋ ಬಂದು ನನ್ನನ್ನು ಹರಸಿ ಕಾಪಾಡಿದ ಅನುಭವವಾಗಿತ್ತು. ಈ ರೇ ಗಳ ಸರಣಿಯನ್ನು ಕೇಳಿದ ನಿಮಗೆ ಯಾವುದೋ ಸಿನೆಮಾದ ಉಮೇಶ್ ರವರ ನೆನಪು ಬಂದರೆ ಆಶ್ಚರ್ಯವಿಲ್ಲ!

ಇಂತಹ ಅನುಭವದಲ್ಲಿ ನೀವೂ ಒಬ್ಬರೇ?

***

**ಪುಸ್ತಕ ಪರಿಚಯ**


# "ತುಂತುರು"- ಪುಟ್ಟ ಕತೆಗಳ ಸಂಕಲನ

**(ಪ್ರಕಾಶಕರು: ಸ್ನೇಹ ಬುಕ್ ಹೌಸ್ – ಪುಟ 212 – ಬೆಲೆ 225)**

**– ಡಾ. ಜೆ.ಎನ್. ಜಗನ್ನಾಥ್**

"ತುಂತುರು, ಶ್ರಾವಣದ ಪುಟ್ಟ ಕಥೆಗಳು" – ಇದು ಅರ್ಥಪೂರ್ಣವಾದ ಕಥೆಗಳ ಒಂದು ಗುಚ್ಛ

ಸಮನ್ವಯ ಸಮಿತಿ ಕನ್ನಡವೇ ಸತ್ಯ ವಾಟ್ಸಪ್ ವೇದಿಕೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ಲೇಖಕರು ಇದ್ದಾರೆ. ಸೃಜನಶೀಲವಾಗಿ ಹೊಸ ಆಯಾಮಗಳಲ್ಲಿ ತೊಡಗಿಸಿಕೊಳ್ಳುವುದು ಇವರ ರೂಢಿ. ಈ ವರುಷ ಶ್ರಾವಣ ಮಾಸದಲ್ಲಿ ಪ್ರತಿಯೊಬ್ಬರೂ ದಿನಕ್ಕೊಂದು ಕಥೆ ಬರೆಯುವಂತೆ ಆಹ್ವಾನಿಸಲಾಯಿತು. 72 ಸದಸ್ಯರು ಭಾಗವಹಿಸಿ 1070 ಕಥೆಗಳನ್ನು 29 ದಿನಗಳಲ್ಲಿ ವಾಟ್ಸಾಪ್ ವೇದಿಕೆಯಲ್ಲಿ ಪ್ರಕಟಿಸಿದರು. ಅದರಲ್ಲಿ ಶ್ರೀ ಶ್ರೀರಂಗರಾಜನ್ ಮತ್ತು ಶ್ರೀ ಗುರುರಾಜ ಶಾಸ್ತ್ರಿ, ಕಥೆಗಳನ್ನು ಆಯ್ಕೆ ಮಾಡಿ 99 ಕಥೆಗಳನ್ನು 'ತುಂತುರು' ಎಂಬ ಕೃತಿಯಾಗಿ ಪ್ರಕಟಿಸಿದ್ದಾರೆ. ಈ ಅಭಿಯಾನದಲ್ಲಿ. ಎಲ್ಲ ಕಥೆಗಳೂ 150ರಿಂದ 200 ಪದಗಳನ್ನು ಹೊಂದಿವೆ. ಈ ಅಭಿಯಾನದ ಸಾರ್ಥಕರೂಪ 'ತುಂತುರು'. 70 ಕಥೆಗಾರರ ಎರಡೆರಡು ಪುಟದ ಕಥೆಗಳು. ಪತ್ತೆದಾರಿ, ಮಕ್ಕಳ ಕಥೆ, ಬ್ಯಾಂಕಿಂಗ್, ಸಾಮಾಜಿಕ, ವೈದ್ಯಕೀಯ, ಮಾನಸಿಕ, ವಿಜ್ಞಾನ ಹೀಗೆ ಹಲವಾರು ವಿಷಯಗಳ ಮೇಲೆ ಬರೆದವುಗಳು. ಈ ಪುಸ್ತಕ ತುಂತುರು, ಪ್ರತಿದಿನ ಒಂದು ಕಥೆ ಓದಲು ಎಲ್ಲರನ್ನೂ ಪ್ರೇರೇಪಿಸುತ್ತದೆ. ಬಹಳ ಅರ್ಥವತ್ತಾದ ಕಥೆಗಳನ್ನು ಇಲ್ಲಿ ಕಾಣಬಹುದು






VK ವಿಜಯ ಕರ್ನಾಟಕ

## ದಿನಕ್ಕೊಂದು ಕಥೆಯ ಹನಿ

ಜೆ.ಎನ್. ಜಗನ್ನಾಥ್
feedbacklvk@vijaykarnataka.com

ತುಂತುರು, ಶ್ರಾವಣದ ಪುಟ್ಟ ಕಥೆಗಳು. ಇದು ಅರ್ಥಪೂರ್ಣವಾದ ಕಥೆಗಳ ಒಂದು ಗುಚ್ಛ. 'ಸಮನ್ವಯ ಸಮಿತಿ ಕನ್ನಡವೇ ಸತ್ಯ' ವಾಟ್ಸ್ಯಾಪ್ ವೇದಿಕೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ಲೇಖಕರು ಇದ್ದಾರೆ. ಸೃಜನಶೀಲವಾಗಿ ಹೊಸ ಆಯಾಮಗಳಲ್ಲಿ ತೊಡಗಿಸಿಕೊಳ್ಳುವುದು ಇವರ ರೂಢಿ. ಈ ವರುಷ ಶ್ರಾವಣ ಮಾಸದಲ್ಲಿ ಪ್ರತಿಯೊಬ್ಬರೂ ದಿನಕ್ಕೊಂದು ಕಥೆ ಬರೆಯುವಂತೆ ಆಹ್ವಾನಿಸಲಾಯಿತು. 72 ಸದಸ್ಯರು ಭಾಗವಹಿಸಿ 1070 ಕಥೆಗಳನ್ನು 30 ದಿನಗಳಲ್ಲಿ ವಾಟ್ಸ್ಯಾಪ್ ವೇದಿಕೆಯಲ್ಲಿ ಪ್ರಕಟಿಸಿದರು. ಆದರಲ್ಲಿ ಶ್ರೀರಂಗರಾಜನ್ ಮತ್ತು ಗುರುರಾಜ ಶಾಸ್ತ್ರಿ ಅವರು ಕಥೆಗಳನ್ನು ಆಯ್ಕೆ ಮಾಡಿ 99 ಕಥೆಗಳನ್ನು 'ತುಂತುರು' ಎಂಬ ಕೃತಿಯಾಗಿ ಪ್ರಕಟಿಸಿದ್ದಾರೆ. ಈ ಅಭಿಯಾನದಲ್ಲಿ ಎಲ್ಲ ಕಥೆಗಳೂ 150ರಿಂದ 200 ಪದಗಳನ್ನು ಹೊಂದಿವೆ. ಈ ಅಭಿಯಾನದ ಸಾರ್ಥಕ ರೂಪ ತುಂತುರು. 70 ಕಥೆಗಾರರ ಎರಡೆರಡು ಪುಟದ ಕಥೆಗಳು. ಪತ್ತೆದಾರಿ, ಮಕ್ಕಳ ಕಥೆ, ಬ್ಯಾಂಕಿಂಗ್, ಸಾಮಾಜಿಕ, ವೈದ್ಯಕೀಯ, ಮಾನಸಿಕ, ವಿಜ್ಞಾನ ಹೀಗೆ ಹಲವಾರು ವಿಷಯಗಳ ಮೇಲೆ ಬರೆದವುಗಳು. ಈ ಪುಸ್ತಕ ಪ್ರತಿದಿನ ಒಂದು ಕಥೆ ಓದಲು ಎಲ್ಲರನ್ನೂ ಪ್ರೇರೇಪಿಸುತ್ತದೆ. ಬಹಳ ಅರ್ಥವತ್ತಾದ ಕಥೆಗಳನ್ನು ಇಲ್ಲಿ ಕಾಣಬಹುದು.

ತುಂತುರು; ಲೇ: ವಿವಿಧ ಲೇಖಕರು; ಪ್ರ: ಸ್ನೇಹ ಬುಕ್ ಹೌಸ್, ಬೆಂಗಳೂರು; ಪುಟ: 212; ಬೆಲೆ: 225 ರೂ.

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

# ಸಾಹಿತ್ಯ ದಾಸೋಹ – 233

# ಅಧ್ಯಕ್ಷೀಯ ಅನಿಸಿಕೆಗಳು



– ಟಿ.ಆರ್. ಉಷಾರಾಣಿ

ಈ ದಿನ ದಾಸೋಹಕ್ಕೆ ಬಂದ ಲೇಖನಗಳ ಸಂಖ್ಯೆ ಒಟ್ಟು 20. ಬಹಳ ವೈವಿಧ್ಯಮಯ ಲೇಖನಗಳ ಸರಮಾಲೆ. ಕಥೆ, ಕವನ, ಛಂದಸ್ಸು, ಹಾಸ್ಯ, ವ್ಯಕ್ತಿ ಚಿತ್ರಣ, ಆಧ್ಯಾತ್ಮಗಳಿಂದ ಮಿಳಿತಗೊಂಡ ನವರಸದಿಂದ ತುಂಬಿ ಸಾಹಿತ್ಯಾಸಕ್ತರಿಗೆ ವೈವಿಧ್ಯಮಯ ವ್ಯಂಜನಗಳ ರಾಸಗ್ರಹಣ. ಈ ರಸಸಂಜೆಯ ಸಾಹಿತ್ಯದೌತಣದ ಮೊದಲಿನಿಂದ ಕೊನೆಯವರೆಗಿನ ಎಲ್ಲ ಪ್ರಸ್ತುತಿಗಳ ಬಗ್ಗೆ ಒಂದೆರಡು ಅನಿಸಿಕೆಗಳು ಹೀಗಿವೆ:

## 01. ಗಣಪತಿ ಹೆಗಡೆ – 'ಸಾಂಗತ್ಯ'

ನಮ್ಮ ಸಕಲ ಕಾರ್ಯವೂ ಸಿದ್ದಿಸಲಿ ಎಂದು ನಾವು ಗಣಪತಿಯ ಪ್ರಾರ್ಥನೆ ಮಾಡುತ್ತೇವೆ. ನಮ್ಮ ಸಸಕಸ ವೇದಿಕೆಯಲ್ಲಿ ಯಾವಾಗಲೂ ಮೊದಲಿಗರು ಶ್ರೀ ಗಣಪತಿ ಹೆಗಡೆ ಅವರು. ಸಾಂಗತ್ಯದ ಬಗ್ಗೆ ಒಂದು ವಿದ್ವತ್ ಪೂರ್ಣವಾದ ಲೇಖನವನ್ನು ಮಂಡಿಸಿದ್ದಾರೆ. ತಮ್ಮ ಸರಳ ಭಾಷೆಯಲ್ಲಿ ಕಬ್ಬಿಣದ ಕಡಲೆ ಸಾಂಗತ್ಯದ ಬಗ್ಗೆ ಬಹಳ ಸುಲಲಿತವಾಗಿ ನಿರೂಪಿಸುತ್ತಾರೆ. "**ಸಾಂಗತ್ಯ**" – ಇದು ಕನ್ನಡದಲ್ಲಿ ಬಹುಪ್ರಸಿದ್ಧವಾದ ಒಂದು ಅಂಶಚ್ಛಂದಸ್ಸಿನ ಪ್ರಕಾರ. ಶುದ್ಧ ದೇಶೀಯ ಮಟ್ಟು. ಇದಕ್ಕೆ ಪ್ರತ್ಯೇಕ ಅಸ್ತಿತ್ವವಿದೆ. ಕನ್ನಡ ಸಾಹಿತ್ಯದ ಸಾಂಗತ್ಯ ಚರಿತ್ರೆಯಲ್ಲಿ ಬಸವೇಶ್ವರ ವಿರಚಿತ ಕಾಲಜ್ಞಾನವೇ ಪ್ರಥಮ ಕೃತಿಯೆಂದು ಹೇಳಿ ಕರ್ಕಿಯವರು ಕವಿಚರಿತ್ರೆಯಿಂದ ಒಂದು ಪದ್ಯವನ್ನು ಉದಾಹರಿಸಿದ್ದಾರೆ: ಮಳೆಯಿಲ್ಲ ಬೆಳೆಯಿಲ್ಲ ಹೊಳೆಯಿಲ್ಲ ಕೆರೆಯಿಲ್ಲ ನೆಳಲಿಲ್ಲ ಉದಕ ಮುನ್ನಿಲ್ಲ ಮೊಳೆಯಿಲ್ಲ ಸೂರ್ಯನ ಕಳೆಯಿಲ್ಲ ಗೆಲವಿಲ್ಲ ಉಳಿವಿಲ್ಲ ಆ ಪಾಪಿಗಳಿಗೆ (ಕನ್ನಡ ಛಂದೋವಿಕಾಸ). ಈ ಪದ್ಯದಲ್ಲಿ ಪ್ರಧಾನವಾಗಿ ಎದ್ದುಕಾಣುವ ಅಂಶವೆಂದರೆ ಅಂಶಗಣಗಳಿಗೆ ಬದಲಾಗಿ ಮಾತ್ರಾಗಣಗಳು. ಅದರಲ್ಲೂ ವಿಷ್ಣುಗಣ ಪ್ರಧಾನವಾದುದು. ಇದನ್ನು ಕೇಳಿದ ಮೇಲೆ ನನ್ನ ತಂದೆಯವರು ಹೇಳುತ್ತಿದ್ದುದು ಮಸಕು ಮಸಕಾಗಿ ನನಗೆ ನೆನಪಾಯಿತು. ಅದರ ವಿನ್ಯಾಸವನ್ನು ಗಣಪತಿ ಹೆಗಡೆ ಅವರು ಈಗಾಗಲೇ ಚರ್ಚಿಸಿದ್ದಾರೆ ಅಂದರೆ –

೧ನೇ ಸಾಲು– ವಿಷ್ಣು ।ವಿಷ್ಣು ।ವಿಷ್ಣು ।ವಿಷ್ಣು
೨ನೇ ಸಾಲು– ವಿಷ್ಣು ।ವಿಷ್ಣು ।ಬ್ರಹ್ಮ
೩ನೇ ಸಾಲು– ವಿಷ್ಣು ।ವಿಷ್ಣು ।ವಿಷ್ಣು ।ವಿಷ್ಣು
೪ನೇ ಸಾಲು– ವಿಷ್ಣು ।ವಿಷ್ಣು ।ಬ್ರಹ್ಮ

ಹೀಗೆ ಸಾಹಿತ್ಯದಲ್ಲಿ ಅಕ್ಷರ ವಿಜ್ಞಾನದ ಬಳಕೆ. ಅನೇಕ ಉದಾಹರಣೆಗಳೊಂದಿಗೆ ಸಾಂಗತ್ಯದ ಬಗೆಗಿನ ಲೇಖನ ಅಚ್ಚುಕಟ್ಟಾಗಿ ಮೂಡಿ ಬಂದಿದೆ ಗಣಪತಿ ಹೆಗಡೆ ಅವರೇ. ಒಂದು ಎಂ.ಎ ತರಗತಿಯಲ್ಲಿ ಕುಳಿತ ಅನುಭವವನ್ನು ನೀಡಿದ ನಿಮಗೆ ಹಾರ್ದಿಕ ಅಭಿನಂದನೆಗಳು.

## 02. ಪೂರ್ಣಿಮಾ ಭಗವಾನ್ – 'ನಯವಂಚನೆ'

ಮುಕ್ತಕಗಳ ರಾಣಿ ಶ್ರೀಮತಿ ಪೂರ್ಣಿಮಾ ಭಗವಾನ್ ಅವರ ''ನಯವಂಚನೆ'– ಇದನ್ನು ಕಥೆ ಎನ್ನುವುದಕ್ಕಿಂತಲೂ ಇತ್ತೀಚೆಗೆ ಗ್ರಾಹಕರ ಪಾಡು ಎಂದರೆ ತಪ್ಪಾಗಲಾರದು. ಗ್ರಾಹಕರ ಸೇವೆಯ ಬಗ್ಗೆ ವಿವಿಧ ರೀತಿಯ ತರಬೇತಿಗಳು, ಬೋಧನೆಗಳನ್ನು ಬ್ಯಾಂಕಿನಲ್ಲಿ ಸಾಕಷ್ಟು ಖರ್ಚು ಮಾಡಿ ನೀಡಲಾಗುತ್ತದೆ. ಆದರೆ ಇದು ಕಹಿ ಸತ್ಯ. ದಿನದಿಂದ ದಿನಕ್ಕೆ ಗ್ರಾಹಕ ಸೇವೆಯ ಪರಿಕಲ್ಪನೆ ಬದಲಾಗಿ ಬ್ಯಾಂಕಿಗೆ ಬಂದರೆಂದರೆ ಸಿಬ್ಬಂದಿಗಳಿಗೆ ಇಬ್ಬಂದಿ. ತಕ್ಷಣ ಕಿಡಿಕಿಡಿಯಾಗುತ್ತಾರೆ. ಈಗ

ಹೊಸದಾಗಿ ಅಂಟಿಕೊಂಡಿರುವ ಭೂತ ಕೆಲಸದಲ್ಲಿ ತಮಗೆ ಕೊಟ್ಟಿರುವ ಟಾರ್ಗೆಟ್ ತಲುಪಲು ಗ್ರಾಹಕರಿಗೆ ಸರಿಯಾದ ಮಾಹಿತಿ ನೀಡದೆ ಅವರ ಇಡುಗಂಟನ್ನು ಮ್ಯೂಚ್ಯುಯಲ್ ಫಂಡ್‌ಗಳಿಗೆ ವಿನಿಯೋಜಿಸಿ ತಮ್ಮ ಮೇಲಧಿಕಾರಿಗಳಿಂದ ಪ್ರಶಸ್ತಿ ಪತ್ರವನ್ನು ತಾವು ಪಡೆಯುವುದು. ಗ್ರಾಹಕರು ಸ್ವಲ್ಪ ಯೋಚನೆ ಮಾಡದೇ ಇದ್ದರೆ ಈ ವ್ಯೂಹದಲ್ಲಿ ಸುಲಭವಾಗಿ ಸಿಕ್ಕಿಸಿಬಿಡುತ್ತಾರೆ. ಹಾಸ್ಯಾಸ್ಪದವೆಂದರೆ ಸ್ವಂತದ ದುಡ್ಡು ತಮ್ಮದೇ ದಾಖಲೆಗಳನ್ನು ನೀಡಿ ತಮ್ಮ ಹೆಸರಿಗೆ ಠೇವಣಿ ಇಡಲಾಗದೆ ಮಕ್ಕಳ ಮುಂದೆ ಕೈ ಚಾಚಬೇಕು. ಇದನ್ನು ಶ್ರೀಮತಿ ಪೂರ್ಣಿಮಾ ಅವರು ಬಹಳ ಕರಾರುವಾಕ್ಕಾಗಿ ತಿಳಿಸಿದ್ದಾರೆ. ಅವರು ಗ್ರಾಹಕರ ಬೂಟುಗಳೊಳಗೆ ನಿಂತು ಗ್ರಾಹಕನ ಈಗಿನ ಪರಿಸ್ಥಿತಿಯ ಸಹಜ ಚಿತ್ರಣವನ್ನು ನೀಡಿದ್ದಾರೆ. ಯಾವ ಅತಿಶಯೋಕ್ತಿಯೂ ಇಲ್ಲದೆ ಊಹಾಪೋಹಗಳಿಲ್ಲದೆ ಲೇಖನ ಸಹಜವಾಗಿ ಮೂಡಿ ಬಂದಿದೆ. ಇತ್ತೀಚಿನ ಸೈಬರ್ ಕ್ರೈಂ ಮಹಾಮಾರಿಯ ಬಗ್ಗೆಯೂ ಉಲ್ಲೇಖಿಸಿದ್ದಾರೆ. ಅರಿವಿಲ್ಲದೆ ಈ ಜಾಲದಲ್ಲಿ ಸಿಲುಕುವವರಿಗೆ ಒಂದು ಎಚ್ಚರಿಕೆಯ ಗಂಟೆಯಂತೆ ಮೂಡಿಬಂದಿದೆ ಲೇಖನ. ಉತ್ತಮ ನಿರೂಪಣೆ. ಪೂರ್ಣಿಮಾ ಅವರಿಗೆ ಅಭಿನಂದನೆಗಳು.

### 03. ಸಿಂಧು ಹರಿಥಸ್ – 'ವಸುಧೈವ ಕುಟುಂಬಕಂ'

ಸಿಂಧು ಹರಿಥಸ್ ಅವರ "ವಸುಧೈವ ಕುಟುಂಬಕಂ" ಹೊಸ ಯೋಚನಾ ಲಹರಿಯ ವಿಶಿಷ್ಟ ಲೇಖನ. ವಿವಿಧ ಬಗೆಯ, ನಂಬಿಕೆಗಳ ಹೊಸವರ್ಷದ ಆಚರಣೆಯ ವಿವರಣೆ ನೀಡುತ್ತಾ ಲೇಖನದ ಉತ್ತರಾರ್ಧದಲ್ಲಿ ಸರ್ವಧರ್ಮ ಸಮನ್ವಯ ಮತ್ತು

## ಶ್ರೀಮತಿ ಟಿ.ಆರ್. ಉಷಾರಾಣಿ

**ಸೆಪ್ಟೆಂಬರ್ 30, 1964ರಂದು ಬೆಂಗಳೂರಿನಲ್ಲಿ ಜನನ. ಸಾಹಿತಿಗಳು, ಅನುವಾದಕರೂ ಆದ ಸೋದರತ್ತೆ ಶ್ರೀಮತಿ ಟಿ.ವಿ. ಅನ್ನಪೂರ್ಣಮ್ಮ ಅವರ ಆಶ್ರಯದಲ್ಲಿ ಬೆಳೆದುದರಿಂದ ಉಷಾರಾಣಿಯವರಿಗೆ ಬಾಲ್ಯದಿಂದಲೇ ಸಾಹಿತ್ಯದಲ್ಲಿ ಆಸಕ್ತಿ.**

**ವಿದ್ಯಾಭ್ಯಾಸ: ಹಿಂದಿಯಲ್ಲಿ ಸ್ನಾತಕೋತ್ತರ ಪದವಿ ಮತ್ತು ಅನುವಾದದಲ್ಲಿಯೂ ಸ್ನಾತಕೋತ್ತರ ಪದವಿ.**

**ವೃತ್ತಿ: ಮೂಲತಃ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ನೇಮಕ. ಒಟ್ಟು 38 ವರ್ಷ ಕಾಲ ಬ್ಯಾಂಕಿನ ಅಧಿಕೃತ ಭಾಷಾ ವಿಭಾಗದಲ್ಲಿ ಸೇವೆ ಸಲ್ಲಿಸಿ ಕಳೆದ ವರ್ಷ ಭಾರತೀಯ ಸ್ಟೇಟ್ ಬ್ಯಾಂಕಿನಿಂದ ಅಧಿಕೃತ ಭಾಷಾ ವಿಭಾಗದ ವ್ಯವಸ್ಥಾಪಕಿಯಾಗಿ ನಿವೃತ್ತಿ.**

**ಇವರ ಪತಿ ಪ್ರೊ. ಕೆ. ರವಿ ಶರ್ಮ ಬೆಂಗಳೂರಿನ ಸಂತ ಜೋಸೆಫರ ಕಾಲೇಜಿನಲ್ಲಿ ಗಣಿತ ವಿಭಾಗದ ವಿಭಾಗಾಧ್ಯಕ್ಷರಾಗಿ ನಿವೃತ್ತರಾದವರು.**

**ಹವ್ಯಾಸ: ಸಣ್ಣ ಕತೆ, ಹಾಸ್ಯ ಬರಹಗಳು, ಕಿರು ಪ್ರಹಸನಗಳ ರಚನೆಯಲ್ಲಿ ಆಸಕ್ತಿ. ಸುಧಾ, ತರಂಗ, ಮಂಗಳ, ಮಯೂರ, ವಿಶ್ವವಾಣಿ ಮುಂತಾದ ನಿಯತಕಾಲಿಕಗಳಲ್ಲಿ ಅವುಗಳ ಪ್ರಕಟಣೆ. ವಿಭಿನ್ನ ಬಗೆಯ ಅಡುಗೆಗಳ ಬಗ್ಗೆ ಟಿ.ವಿ. ವಾಹಿನಿಗಳಲ್ಲಿ ಪ್ರಾತ್ಯಕ್ಷಿಕೆ ನೀಡಿಕೆ; ರಂಗಭೂಮಿಯಲ್ಲಿ ಆಸಕ್ತಿ, ಅಂತರ ಬ್ಯಾಂಕ್ ನಾಟಕ ಸ್ಪರ್ಧೆಗಳಲ್ಲಿ ಭಾಗಿಯಾಗಿ ಅತ್ಯುತ್ತಮ ನಟಿ, ಪೋಷಕ ನಟಿ ಪ್ರಶಸ್ತಿ. ಹಲವು ಟಿ.ವಿ. ಧಾರಾವಾಹಿಗಳಲ್ಲಿ ಪಾತ್ರ ನಿರ್ವಹಣೆ;**

**ಪ್ರಕಟಿತ ಕೃತಿಗಳು: 1. ಎರಡು ಸ್ವತಂತ್ರ ಕಥಾ ಸಂಕಲನಗಳು ('ದೂರ ತೀರ ಯಾನ' ಮತ್ತು 'ಮಂಜು ಮುಸುಕಿದ ಮನಸು'), ಒಂದು ಮಕ್ಕಳ ಕಥಾ ಸಂಕಲನ ('ಸಕ್ಕರೆ ಮಿಠಾಯಿ) ಲೋಕಾರ್ಪಣೆ; 2. ಕನ್ನಡ ಸಾಹಿತ್ಯ ಅಕಾಡೆಮಿಯೂ ಸೇರಿದಂತೆ ವಿವಿಧ ಸಂಸ್ಥೆಗಳು, ಸಾಹಿತಿಗಳು ಹೊರತಂದ ಕಥಾ ಸಂಕಲನಗಳಲ್ಲಿ ಇವರ ಹಲವು ಕತೆಗಳ ಪ್ರಕಟಣೆ, 3. ಆನ್‌ಲೈನ್ ವಾರ್ತಾವಾಹಿನಿಗಳಲ್ಲಿ ಹಾಸ್ಯ ಬರಹಗಳ ಪ್ರಕಟಣೆ. 4. ಸೋದರತ್ತೆ ಶ್ರೀಮತಿ ಟಿ.ವಿ.ಅನ್ನಪೂರ್ಣಮ್ಮನವರು ಹಿಂದಿಯಿಂದ ಅನುವಾದಿಸಿದ 'ಮುನ್ಷಿ ಪ್ರೇಮ್‌ಚಂದ್ ಅವರ ಆಯ್ದ ಜನಪ್ರಿಯ ಕತೆಗಳು' ಸಂಕಲನದ ಸಂಪಾದನೆ ಮತ್ತು ಪ್ರಕಟಣೆ.**

**ಪ್ರಶಸ್ತಿಗಳು: 1. ಮನೋವೈಜ್ಞಾನಿಕ ಕಥೆಗೆ ತ್ರಿವೇಣಿ ಪ್ರಶಸ್ತಿ, 2. ಕೌಟುಂಬಿಕ ಕಥೆಗೆ ವಾಣಿ ಪ್ರಶಸ್ತಿ, 3. ಭಾರತೀಯ ಸ್ಟೇಟ್ ಬ್ಯಾಂಕಿನ ಕನ್ನಡ ರಾಜ್ಯೋತ್ಸವ ಸ್ಪರ್ಧೆಗಳಲ್ಲಿ ಹಲವಾರು ಬಹುಮಾನ, ಪ್ರಶಸ್ತಿ.**

***

ಯುಗಾದಿಯನ್ನೇ ಹೊಸ ವರ್ಷವೆಂದು ಪರಿಗಣಿಸುವವರೂ ಕೂಡ I-SERVE ಪ್ರಕಾರ ಜನವರಿ ಒಂದನೇ ತಾರೀಕಿನಂದೇ ಹೊಸ ವರ್ಷವೆಂದು ಆಚರಿಸಬಹುದೆಂಬ ವಿಷಯವನ್ನು ವೈಜ್ಞಾನಿಕ ದೃಷ್ಟಿಕೋನದಲ್ಲಿ ತಿಳಿಸುತ್ತಾರೆ. ವಿಶಾಲ ಮನೋಭಾವದ ಅವರ ವಾದಸರಣಿಯಲ್ಲೂ ಅರ್ಥವಿದೆ ಎಂದೆನಿಸುತ್ತದೆ. ಅದಕ್ಕೆ ಸೂಕ್ತವಾದ ಪೂರಕ ವಿಷಯಗಳನ್ನೂ ಕೂಡ ವಿಶದವಾಗಿ ತಿಳಿಸುತ್ತಾರೆ. ಸಮಸ್ತ ವಿಶ್ವವನ್ನೇ ಒಂದು ಕುಟುಂಬವನ್ನಾಗಿ ಪರಿಗಣಿಸುವ, ಅದಕ್ಕೆ ಸೂಕ್ತವಾದ ತರ್ಕವನ್ನೂ ಪ್ರತಿಪಾದಿಸುವ ಅವರ ಲೇಖನ ಚಿಕ್ಕದಾದರೂ ಚೊಕ್ಕದಾಗಿ ಬಹಳ ಅರ್ಥವಂತಿಕೆಯಿಂದ ಕೂಡಿದೆ. 'ಯಾರ ಪದ್ಧತಿಯೂ ಮೇಲಲ್ಲ, ಯಾರ ಸಂಪ್ರದಾಯವೂ ಕೀಳಲ್ಲ' ಎಲ್ಲರ ಸಂಪ್ರದಾಯವನ್ನೂ ಸಮಾನ ಮನಸ್ಸಿನಿಂದ ಸ್ವೀಕರಿಸುವ ಪ್ರಬುದ್ಧ, ಪರಿಪಕ್ವ ಮನಸ್ಸಿನ ಸಿಂಧು ಅವರ ಪ್ರತಿಪಾದನೆ ಮೆಚ್ಚುವಂತಹುದು. ನಿಮಗೆ ಹಾರ್ದಿಕ ಅಭಿನಂದನೆಗಳು.

## 04. ಗೌರಿ ಭಟ್ಟ – 'ಕರ್ಮಯೋಗಿ'

ಶ್ರೀಮತಿ ಗೌರಿ ಭಟ್ಟ ಅವರು ತಮ್ಮ 'ಕರ್ಮಯೋಗಿ'' ಲೇಖನದಲ್ಲಿ ತಮ್ಮ ಸಹೋದ್ಯೋಗಿ ಅಶ್ವಿನಿ ಅವರ ಬಗ್ಗೆ ಬರೆಯುತ್ತಾರೆ. ಅವರನ್ನು ನಾನೂ ಕೂಡ ಬಲ್ಲೆ. ಆದರೆ ಅವರ ಬಗ್ಗೆ ಇಷ್ಟೆಲ್ಲಾ ಮಾಹಿತಿ ಇರಲಿಲ್ಲ ಮತ್ತು ಇಂತಹ ಕರ್ಮಯೋಗಿ ಅನ್ನುವ ವಿಷಯ ನನಗೆ ತಿಳಿದಿರಲಿಲ್ಲ. ತಮ್ಮ ಅಂಗವೈಕಲ್ಯವನ್ನು ಮೆಟ್ಟಿ ನಿಂತು ಮನೋಸ್ಥೈರ್ಯದಿಂದ ಗ್ರಾಹಕರ ಸೇವೆಯಲ್ಲಿ ತೊಡಗಿಕೊಂಡಿರುವ ಅಶ್ವಿನಿ ಅವರು ನಿಜಕ್ಕೂ ಯೋಗಿನಿ. ತನ್ನ ಸಹೋದ್ಯೋಗಿಯ ಗೌರಿ ಅವರ ಲೇಖನದಲ್ಲಿ ಎಷ್ಟು ಆತ್ಮೀಯತೆ ಇದೆ ಎಂದರೆ ಅಶ್ವಿನಿ ಅವರ ಬಗ್ಗೆ ಪ್ರೀತಿಯ ಮಹಾಪೂರವನ್ನೇ ಹರಿಸುತ್ತಾರೆ. ಆಕೆಯ ಸಾಧನೆಯನ್ನು ಶ್ಲಾಘಿಸುತ್ತಾರೆ. ಅವರು ನಡೆದುಬಂದ ಹಾದಿಯ ಮಾರ್ಮಿಕವಾದ ಚಿತ್ರಣವನ್ನು ನೀಡುತ್ತಾರೆ. ಪ್ರೀತಿಯ ಉತ್ಕಟತೆಯಲ್ಲಿ ಒಂದು ಚಿಕ್ಕ ಬೈಗುಳ ಕೂಡ ಆಪ್ಯಾಯಮಾನವಿರುತ್ತದೆ ಅನ್ನುವುದಕ್ಕೆ ಅವರು ಅಶ್ವಿನಿಯವರನ್ನು ಪ್ರೀತಿಯಿಂದ ದಡ್ಡೀ ಎಂದು ಕರೆಯುತ್ತಿದ್ದುದೆ ಸಾಕ್ಷಿಯಾಗಿದೆ. ಗೌರಿ ಅವರ ಲೇಖನ ಓದಿದ ಮೇಲೆ ಅಶ್ವಿನಿ ಅವರ ಬಗ್ಗೆ ಇನೂ ಹೆಚ್ಚು ಗೌರವ, ಅಭಿಮಾನ ಉಂಟಾಗುತ್ತದೆ. ನಾನೂ ಕೂಡ ಅಶ್ವಿನಿ ಅವರ ಸಾಧನೆಗೆ ತುಂಬು ಹೃದಯದ ನಮನಗಳನ್ನು ಅರ್ಪಿಸುತ್ತೇನೆ ಅವರು ಮತ್ತಷ್ಟು ಮಗದಷ್ಟು ಸಾಧನೆಯನ್ನು ಮಾಡಲಿ, ಗ್ರಾಹಕ ಸೇವೆ ಅವರ ಧ್ಯೇಯವಾಗಲಿ ಎಂದು ಹಾರೈಸುತ್ತೇನೆ. ಇಂತಹ ಲೇಖನವನ್ನು ಪ್ರಸ್ತುತಪಡಿಸಿದ ಗೌರಿ ಅವರಿಗೆ ಅಭಿನಂದನೆಗಳು.

## 05. ಜೆ.ಎನ್.ಜಗನ್ನಾಥ್ – 'ತುಂತುರು' ಪುಸ್ತಕ ಪರಿಚಯ

ಕಂಚಿನ ಕಂಠದ ಶ್ರೀಯುತ ಜೆ.ಎನ್. ಜಗನ್ನಾಥ್ ಅವರು ನಮಗೆಲ್ಲಾ ಚಿರಪರಿಚಿತರು. ನಮ್ಮ ಪ್ರೀತಿಯ 'ತುಂತುರು'' ಕಥೆಗಳಿಗೆ ತಮ್ಮ ಕಂಠದಾನವನ್ನು ನೀಡಿ ಅಮೋಘ ಸಾಧನೆಯನ್ನು ಮಾಡಿರುತ್ತಾರೆ. 99 ಕತೆಗಳ ನಮ್ಮ ಪುಟ್ಟ ಹನಿಗಳು ಅವರ ಕಂಠಸಿರಿಯಲ್ಲಿ ಶ್ರೀಯುತ ಗುರುಪ್ರಸಾದ್ ಅವರ ತಾಂತ್ರಿಕ ಸಹಯೋಗದಲ್ಲಿ ಹೊಸ ರೂಪವನ್ನು ತಳೆದು ಜೇನು ಹನಿಗಳಾಗಿ ಜಿನುಗಿರುವುದು ನಮಗೆಲ್ಲಾ ಸಂತೋಷದ ಸಂಭ್ರಮದ ವಿಷಯ. ಓದುವ ಹವ್ಯಾಸ ಕಡಿಮೆಯಾಗುತ್ತಿರುವಾಗ ಇದು ಬಹಳ ಸಮರ್ಪಕ ಪ್ರಭಾವಿ ಮಾಧ್ಯಮ. ಪ್ರಯಾಣಿಸುವಾಗ, ಒಬ್ಬರೇ ಕುಳಿತಿರುವಾಗ, ಸಮಯ ಕಳೆಯಲು ಕೇಳುತ್ತಾ ಹೋಗಬಹುದು. ಎಂತಹವರನ್ನೂ ಜಗನ್ನಾಥ್ ಅವರು ಹೊಡೆದೆಬ್ಬಿಸಿ ಚಿಂತನೆಗೆ ತೊಡಗಿಸುವಲ್ಲಿ ಯಶಸ್ವಿಯಾಗುತ್ತಾರೆ. ನಿಸ್ವಾರ್ಥವಾಗಿ ಸ್ವಯಂಪ್ರೇರಿತರಾಗಿ ಅವರು ನಡೆಸಿಕೊಟ್ಟ ಈ ಮಹಾಯಜ್ಞಕ್ಕೆ ಶ್ರೀಯುತ ಜಗನ್ನಾಥ್ ಮತ್ತು ಗುರುಪ್ರಸಾದ್ ಹಾಲ್ಕುರಿಕೆ ಅವರಿಗೆ ನಮ್ಮೆಲ್ಲರ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

## 06. ವಿಠ್ಠಲ ಇಜೇರಿ – 'ರಾಜನನ್ನು ಹುಡುಕಿದ ರಾಜನ ಕತೆ'

ಶ್ರೀ ವಿಠ್ಠಲ ಇಜೇರಿ ಅವರ ಲೇಖನ, "ರಾಜನನ್ನು ಹುಡುಕಿದ ರಾಜನ ಕತೆ" ಶೀರ್ಷಿಕೆಯೇ ರೋಚಕವಾಗಿದೆ. ಭೋಧನೆಗಿಂತಲೂ ಕಥೆಯ ಮೂಲಕ ನೀತಿಯನ್ನು ತಿಳಿಸಿ ಹೇಳುವ ಜಾಣ್ಮೆ ನಿಜಕ್ಕೂ ಮೆಚ್ಚುವಂತಾದ್ದು. ಬಹಳ ಅದ್ಭುತವಾದ ಕಥೆಯ ಮೂಲಕ ಆಧ್ಯಾತ್ಮಡೆದೆಗೆ ಕರೆದೊಯ್ಯುವ ಒಂದು ತಂತ್ರ. ಅದ್ವೈತದ ಪ್ರಕಾರ ಅಹಂ ಬ್ರಹ್ಮಾಸ್ಮಿ. ನಮ್ಮೊಳಗೆ ಇರುವ ಪರಮಾತ್ಮನನ್ನು ಗುರುತಿಸದೆ ನಾವು ಎಲ್ಲೆಡೆಯೂ ಅಲೆಯುತ್ತೇವೆ. ಶಂಕರ ತತ್ವವನ್ನು ಸ್ವಾಮಿ ವಿವೇಕಾನಂದರ ಚಿಕ್ಕ ಕಥೆಯ ಮೂಲಕ ಪ್ರತಿಪಾದಿಸಿರುವ ರೀತಿ ಬಹಳ ಸೊಗಸಾಗಿದೆ. ನೇರವಾಗಿ ಹೇಳಿದಾಗ ಅದು ಉಪದೇಶವಾಗುತ್ತದೆ. ಆದರೆ ಕಥೆಯ ಮೂಲಕ ತಿಳಿಸಿದಾಗ ರಕ್ತದಲ್ಲಿ ಮಿಳಿತವಾಗುತ್ತದೆ. ಆತ್ಮಜ್ಞಾನದಿಂದ ನಮ್ಮನ್ನು ನಾವು ತಿಳಿದುಕೊಳ್ಳಲು ಸಾಧ್ಯ ಮತ್ತು ನಾವು

ಸುಖಿಗಳಾಗುತ್ತೇವೆ ಎನ್ನುವ ಅವರ ಕಡೆಯ ಪಂಕ್ತಿ ನಿಜಕ್ಕೂ ಶ್ಲಾಘನೀಯವಾದುದು. ಎಂದಿನಂತೆ ಇಜೇರಿಯರು ಒಂದು ಕ್ಯಾಪ್ಸೂಲ್‌ನಲ್ಲಿ ಜೀವಸತ್ವ ಚಿಂತನೆಯನ್ನು ತುಂಬಿ ಕೆಲವೇ ವಾಕ್ಯಗಳಲ್ಲಿ ಯಶಸ್ವಿಯಾಗಿ ಮನಮುಟ್ಟುವಂತೆ ಹೇಳಿದ್ದಾರೆ. ವಿಠಲ್ ಇಜೇರಿಯವರಿಗೆ ಅಭಿನಂದನೆಗಳು.

## 07. ನಾಗರತ್ನ ಚಂದ್ರಶೇಖರ – 'ಬದುಕಾಗಿದೆ ಲಂಗರು ಹಾಕಿದ ಹಡಗು'

ಶ್ರೀಮತಿ ನಾಗರತ್ನ ಚಂದ್ರಶೇಖರ ಅವರು ತಮ್ಮ ಕರೋನಾ ಡೈರಿಯಿಂದ ತೆಗೆದ "ಬದುಕಾಗಿದೆ ಲಂಗರು ಹಾಕಿದ ಹಡಗು", ಲೇಖನದಲ್ಲಿ ಕರೋನ ಸಮಯದಲ್ಲಿ ಪಟ್ಟ ಪರಿಪಾಟಲಿನ ನೈಜ ಚಿತ್ರಣವನ್ನು ನಮ್ಮ ಮುಂದಿಟ್ಟಿದ್ದಾರೆ. ಲೇಖನ ಸವಿಸ್ತಾರವಾಗಿ ಅರ್ಥಪೂರ್ಣವಾಗಿದೆ. ಕರೋನಾ ಮಹಾಮಾರಿಯ ಕರಾಳ ಛಾಯೆ ನಿಜವಾಗಲೂ ಮರೆಯಲಾರದಂತಹ ಒಂದು ದುಸ್ವಪ್ನ. ಇಲ್ಲಿ ತಮ್ಮ ಅನುಭವವನ್ನು ಶ್ರೀಮತಿ ನಾಗರತ್ನ ಅವರು ಹೇಳಲು ಬಳಸಿರುವ ತಂತ್ರಗಾರಿಕೆ ಮೆಚ್ಚುವಂಥದ್ದು. ಸಪ್ತ ಸಾಗರದಾಚೆ ಇರುವ ಪ್ರೀತಿಪಾತ್ರರಿಗೆ ಪತ್ರ ಮುಖೇನ ತಮ್ಮ ಅನುಭವಗಳನ್ನು ತಿಳಿಸುತ್ತಾರೆ. ಅವರ ಕ್ಷೇಮವನ್ನೂ ಬಯಸುತ್ತಾರೆ. ಅವರ ಅನುಭವ ಎಲ್ಲರ ಅನುಭವವೂ ಹೌದು. ಲಾಕ್ ಡೌನ್. ಸೀಲ್ ಡೌನ್ ಮತ್ತು ಕೊನೆಗೆ ಬ್ರೇಕ್ ಡೌನ್ ಆದಂತಹ ಪ್ರಸಂಗಗಳು ಸಾವಿರಾರು. 14 ದಿನ ಕ್ವಾರಂಟೈನ್ ಶಿಕ್ಷೆಯಂತೂ ನರಕಸದೃಶ. ನಾಗರತ್ನ ಅವರು ಬಹಳ ಆತ್ಮೀಯತೆಯಿಂದ ಪ್ರತಿ ದಿನದ ನೋವು ನಲಿವುಗಳನ್ನು ಹಂಚಿಕೊಂಡಿರುವ ರೀತಿ 'ಪ್ರೀತಿ, ಪ್ರೇಮ, ಪ್ರಣಯ ಎಂದು ಡೇಟಿಂಗುಗಳಿಗೆ" ಬ್ರೇಕು ಬಿದ್ದಿದೆಯೇ ಎಂದು ತಾವು ಬರೆದ "ಕರೋನ ಮದುವೆ"ಯೆಂಬ ಹಾಸ್ಯ ನಾಟಕದ ಬಗ್ಗೆ ತಿಳಿಸಿ ಹಾಸ್ಯವನ್ನೂ ಬೆರೆಸಿ ಹೇಳಿರುವ ರೀತಿ ಬಹಳ ಅಚ್ಚುಕಟ್ಟಾಗಿದೆ. ಆತ್ಮವಿಶ್ವಾಸದತ್ತ ಸಕಾರಾತ್ಮಕತೆಯ ಕಡೆಗೆ ವಾಲುತ್ತಾರೆ. ಹೊಸ ಬದುಕು ಬರುವುದೆಂಬ ಭರವಸೆಯನ್ನು ವ್ಯಕ್ತಪಡಿಸುತ್ತಾರೆ. ಶ್ರೀಮತಿ ನಾಗರತ್ನ ಅವರ ಕರೋನ ಡೈರಿಯಿಂದ ಮೂಡಿ ಬಂದಿರುವ ಅನುಭವಜನ್ಯ ಲೇಖನಕ್ಕೆ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

## 08. ಶಾಂತಾ ನಾಗಮಂಗಲ – 'ಸಂದರ್ಭ ಸೂಕ್ತಿ' ಗ್ರಂಥ ಪರಿಚಯ

ಶ್ರೀಮತಿ ಶಾಂತಾ ನಾಗಮಂಗಲ ಅವರು ವಿದ್ವಾನ್ ಎನ್. ರಂಗನಾಥ ಶರ್ಮ ವಿರಚಿತ 'ಸಂದರ್ಭ ಸೂಕ್ತಿ' ಬಗ್ಗೆ ವಿಚಾರ ಮಂಡಿಸುತ್ತಾರೆ. ಲೇಖನವು ಹಲವು ಶೀರ್ಷಿಕೆಗಳಲ್ಲಿ, ಮೊಗ್ಗಾಗಿ ಅರಳಿ ಹೂವಾಗಿ ತನ್ನ ಸುಗಂಧವನ್ನು ಪಸರಿಸುವಂತೆ ಮೊದಲು ಲೇಖಕರ ಇಷ್ಟ ದೈವ, ಗುರು, ಕೃತಿ ರಚನೆ, ಪ್ರಶಸ್ತಿಗಳ ಬಗ್ಗೆ ತಿಳಿಸಿ ನಂತರ ಅವರು ಪರಿಚಯಿಸಬೇಕಿರುವ ಗ್ರಂಥ 'ಸಂದರ್ಭ ಸೂಕ್ತಿ' ಬಗ್ಗೆ ವಿವರಣೆಯನ್ನು ನೀಡುತ್ತಾರೆ. ಅದರಲ್ಲಿ ಉಲ್ಲೇಖಿಸಿರುವ ಅನೇಕ ನ್ಯಾಯಗಳ ಬಗ್ಗೆ ವಿಶದವಾಗಿ ತಿಳಿಸುತ್ತಾರೆ. ನಮ್ಮ ಪೂರ್ವಜರು ಬದುಕಿದ್ದ ರೀತಿ, ಅವರ ನಂಬಿಕೆಗಳು, ಆಚರಣೆಗಳ ಬಗ್ಗೆ ಈ ನ್ಯಾಯಗಳನ್ನು ರೂಪಿಸಲಾಗಿದೆ. ದೈನಂದಿನ ಬದುಕಿಗೆ ತೀರ ಹತ್ತಿರವಾದ ವಿಚಾರಗಳನ್ನು ಉದಾಹರಣೆ ಸಮೇತ ವಿವರಿಸಿರುವ ರೀತಿ ನೇರವಾಗಿ ಮನಸ್ಸಿನಲ್ಲಿ ಉಳಿಯುತ್ತದೆ. ತಮ್ಮ ಕೊನೆಯ ವಾಕ್ಯದಲ್ಲಿ ಶ್ರೀಮತಿ ಶಾಂತಾ ಅವರು "ಈ ಪುಟ್ಟ ಪುಸ್ತಕವನ್ನು ಕೊಂಡು ಓದಿ ಆನಂದಿಸಿ" ಎಂದು ವಿನಂತಿಸುತ್ತಾರೆ. ಅದಕ್ಕೆ ಕಾರಣವೂ ಇಲ್ಲದಿಲ್ಲ. ಇವುಗಳ ಓದು ಮನಸ್ಸಿಗೆ ಸಂತೋಷವನ್ನೂ, ಬುದ್ಧಿಗೆ ಆಹಾರವನ್ನೂ ಒದಗಿಸುತ್ತದೆ. ಉಪನ್ಯಾಸ ಮಾಡುವವರಿಗೆ, ವ್ಯಾಖ್ಯಾನಕಾರರಿಗೆ, ಲೇಖಕರಿಗೆ ಎಲ್ಲರಿಗೂ ಬಹುವಿಧದಲ್ಲಿ ಉಪಯೋಗಕ್ಕೆ ಬರುತ್ತದೆ ಎಂದು ಪುಸ್ತಕದ ಬಗ್ಗೆ ಬಹಳ ಚಂದದ ವಿಮರ್ಶೆ ಮಾಡುತ್ತಾರೆ. ಹಿರಿಯ ಲೇಖಕರ ಪರಿಚಯ ಮಾಡಿಕೊಟ್ಟ ಶ್ರೀಮತಿ ಶಾಂತಾ ಅವರಿಗೆ ಅಭಿನಂದನೆಗಳು. ದಯವಿಟ್ಟು ನನ್ನ ಮಾತುಗಳನ್ನು "ಅಲಂಕೃತ್ಯ ಶಿರಚ್ಛೇದಃ" ನ್ಯಾಯವಾಗಿ ಸ್ವೀಕರಿಸದಿರಿ. ಇವೆಲ್ಲವು ನನ್ನ ಮನಸ್ಸಿನಾಳದಿಂದ ಬಂದ ಮಾತುಗಳು ಎಂದು ತಿಳಿಸುತ್ತೇನೆ.

## 09. ಸರಸ್ವತಿ ನಟರಾಜ್ – 'ಸರಪಳಿ'

ಶ್ರೀಮತಿ ಸರಸ್ವತಿ ನಟರಾಜ್ ಅವರ ಸಣ್ಣ ಕಥೆ 'ಸರಪಳಿ'. ಒಂದು ಕೌಟುಂಬಿಕ ಕಥಾವಸ್ತುವುಳ್ಳ ವಿಭಿನ್ನವಾದ ಕಥೆ. ನಮ್ಮ ಮಧ್ಯಮ ಅಥವಾ ಸ್ವಲ್ಪ ಮೇಲ್ವರ್ಗದ ಕುಟುಂಬ ವ್ಯವಸ್ಥೆಯಲ್ಲಿ ಅತ್ತೆ–ಮಾವ ಎಂದರೆ ಮನೆಯ ಹಿರಿಯರು, ಮಕ್ಕಳನ್ನು ಪೋಷಿಸುವವರು, ಕುಟುಂಬದ ಒಳಿತಿಗಾಗಿ ಕಾರ್ಯನಿರ್ವಹಿಸುವವರು ಎನ್ನುವ ದೃಷ್ಟಿ ಇದೆ. ಆದರೆ ಇಲ್ಲಿ ಅತ್ತೆ–ಮಾವ ವಿಚಿತ್ರ ವ್ಯಕ್ತಿತ್ವದ ಸ್ವಾರ್ಥ, ಉಡಾಫೆ, ಪ್ರೀತಿ ವಿಶ್ವಾಸಗಳ ಸೆಲೆ ಇಲ್ಲದ, ಹೆಸರಿಗೆ ಮಾತ್ರ ಮನುಜರು. ಗಂಡನ

ದುರ್ನಡತೆಯಿಂದ ನೊಂದ ಹೆಣ್ಣು ತನ್ನ ಎಲ್ಲ ಮನಸ್ಸಿನ ಭಾವನೆಗಳ ಗೋರಿಯ ಮೇಲೆ ಬದುಕುವಾಗ ಅವಳಿಗೆ ಪ್ರಪಂಚವೇ ನಕಾರಾತ್ಮಕತೆಯಿಂದ ತುಂಬಿರುವಂತೆ ಕಾಣುತ್ತದೆ. ಇಲ್ಲಿ ಅತ್ತೆ ಒಂದು ದಿನ ಡಿಮ್ನೀಷಿಯಾ ರೋಗಕ್ಕೆ ಬಲಿಯಾಗುತ್ತಾರೆ. ಅದರ ನೇರ ಪ್ರಭಾವ ಮಗ, ಸೊಸೆ ಮತ್ತು ಮೊಮ್ಮಕ್ಕಳ ಮೇಲೆ ಬೀಳುತ್ತದೆ. ಸೊಸೆಯೂ ಒಂದು ಹೆಣ್ಣು, ಎಷ್ಟು ಸಹಿಸಿಯಾಳು. ಸಂಸಾರಕ್ಕೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಸೊಸೆ ಒಂದು ದಿನ ಇದೇ ನಕಾರಾತ್ಮಕತೆಯ ಸರಪಳಿಯೊಳಗೆ ಬಂಧಿಯಾಗುತ್ತಾಳೆ. ಶ್ರೀಮತಿ ಸರಸ್ವತಿ ಅವರ ಭಾಷೆ, ಶೈಲಿ ತುಂಬಾ ಸರಳವಾಗಿದೆ. ಕಥೆ ತೆಗೆದುಕೊಂಡ ಹೋದ ರೀತಿಯೂ ಕುತೂಹಲಕಾರಿಯಾಗಿದೆ. ಶಾಯಿ ಆದ ಎಡಗೈ ಹೆಬ್ಬೆರಳು ಎಂದು ಮೂರು ಶಬ್ದಗಳಲ್ಲಿ ಅತ್ಯಂತ ಸೂಚ್ಯವಾಗಿ ಆಸ್ತಿ ಅಡವು ಕಳೆದುಕೊಂಡ ಬಗ್ಗೆ ತಿಳಿಸಿದ್ದಾರೆ ಎಷ್ಟು ಆಳವಾದ ಅರ್ಥ ಅಡಗಿದೆ. ಒಟ್ಟಿನಲ್ಲಿ ಕಥೆ ಬಹಳ ಚೆನ್ನಾಗಿದೆ. ಸರಸ್ವತಿ ಅವರಿಗೆ ಅಭಿನಂದನೆಗಳು.

## 10. ಮಾಲತಿ ಶ್ರೀನಿವಾಸನ್– 'ಅಂಬಕ್ಕನ ಆತ್ಮಹತ್ಯೆ'

ಶ್ರೀಮತಿ ಮಾಲತಿ ಶ್ರೀನಿವಾಸನ್ ಅವರ ಸಣ್ಣ ಕಥೆ "ಅಂಬಕ್ಕನ ಆತ್ಮಹತ್ಯೆ", ಮನಸ್ಸಿಗೆ ಹತ್ತಿರವಾಗುವ ಕಥೆ. ಇಂತಹ ಹೆಂಗಸರು ಮನೆಯಲ್ಲಿ ಒಬ್ಬರಾದರೂ ಇರುತ್ತಾರೆ. ಇಂದೂ ಕೂಡ ಇದ್ದಾರೆ. ಒಂದು ವ್ಯತ್ಯಾಸವೆಂದರೆ ಆರ್ಥಿಕವಾಗಿ ಸ್ವಾವಲಂಬಿಗಳಾಗಿರುತ್ತಾರೆ ಅಷ್ಟೇ. ಮಿಕ್ಕೆಲ್ಲಾ ಭಾವನೆಗಳೂ ಅಂಬಕ್ಕನಂತೆಯೇ. ಮದುವೆಯಾಗದೆ ಉಳಿದ ಅಥವಾ ಬೇಗ ಗಂಡನನ್ನು ಕಳೆದುಕೊಂಡ ಹೆಣ್ಣಿಗೆ ಅಭದ್ರತೆ ಕಾಡುವುದು ಸಹಜ. ತನಗೆ ಸಿಕ್ಕಿಲ್ಲದ ಸಾಂಸಾರಿಕ ಸುಖ, ಸಂತೋಷವನ್ನು ತನ್ನ ಬೆನ್ನಿಗೆ ಬಿದ್ದವರು ಅನುಭವಿಸುವುದನ್ನು ನೋಡಲು ಸಾಧ್ಯವಾಗುವುದಿಲ್ಲ. ಅಂತಹುದೇ ಒಂದು ಪಾತ್ರ ಇಲ್ಲಿ ಅಂಬಕ್ಕನದು. ಆತ್ಮಹತ್ಯೆ ಮಾಡಿಕೊಳ್ಳುವ ಉದ್ದೇಶವಿಲ್ಲದಿದ್ದರೂ ಹೆದರಿಸುವುದು ಮತ್ತು ತನ್ನತ್ತ ಆಕರ್ಷಿಸುವುದು. ಇವೆಲ್ಲದುರ ಬಹಳ ಸಹಜವಾದ ಚಿತ್ರಣವನ್ನು ನಾವು ಅಂಬಕ್ಕನಲ್ಲಿ ಕಾಣಬಹುದು. ಅಡುಗೆಯ ಬಗ್ಗೆ ಆಕ್ಷೇಪಣೆ, ಚೆನ್ನಾಗಿದ್ದರೂ ಮನಸ್ಸು ಒಪ್ಪಿಕೊಳ್ಳಲು ತಯಾರಿರುವುದಿಲ್ಲ. ಅಲ್ಲಿ ಅಡ್ಡ ಬರುವುದು ಅವಳ ಅಭದ್ರತೆ ಮತ್ತು ಅತೃಪ್ತ ಕಾಮನೆಗಳಿಂದ ಅಸೂಯೆ. ಹಾದಿರಂಪ, ಬೀದಿರಂಪ ಮಾಡಿ ತನ್ನತ್ತ ತಮ್ಮನನ್ನು ಸೆಳೆದುಕೊಳ್ಳುವುದು ಒಂದು ತಂತ್ರವಷ್ಟೆ. ಹಾಗೆ ಮೊಂಡುತನ ಮಾಡಿಕೊಂಡು, ಸೇವೆ ಮಾಡಿಸಿಕೊಂಡು ಒಂದು ದಿನ ಇಲ್ಲವಾಗುತ್ತಾರೆ. ಏನೂ ಸಾಧನೆ ಇಲ್ಲದೆ ಇಂತಹವರು ಮಗ್ಗಲು ಮುಳ್ಳಾಗಿರುತ್ತಾರೆ ಎನ್ನುವ ಚಿತ್ರಣ ಚೆನ್ನಾಗಿ ಮೂಡಿಬಂದಿದೆ. "ಸಾವು ಬೇಕೆನಿಸಿದಾಗ, ದುಃಖದಲ್ಲಿ ಬೇಸರಿಸಿದಾಗೆಲ್ಲ ಬರುವಂತಿದ್ದರೆ ಭೂಮಿಯಲ್ಲಿ ಮನುಜನನ್ನು ಹಿಡಿಯುವರಾರು" ಸತ್ಯವಾದ ಮಾತು. ಸರಳವಾದ ಭಾಷೆಯನ್ನು ಆಡುಮಾತಿನಲ್ಲಿ ಬಹಳ ಚೆನ್ನಾಗಿ ಉಪಯೋಗಿಸಿಕೊಂಡಿದ್ದಾರೆ ಮಾಲತಿ ಅವರು. ಒಟ್ಟಾರೆ ಒಂದು ಒಳ್ಳೆಯ ಕಥೆ. ಮಾಲತಿ ಶ್ರೀನಿವಾಸನ್ ಅವರಿಗೆ ಹಾರ್ದಿಕ ಅಭಿನಂದನೆಗಳು.

## 11. ಮಾಧುರಿ ಕೃಷ್ಣ – 'ವಿಲಕ್ಷಣ ವ್ಯಕ್ತಿ' (ವ್ಯೂಹದಲ್ಲಿ ಬಂಧಿ – ಲೇಖನ ಮಾಲೆ)

ಶ್ರೀಮತಿ ಮಾಧುರಿಕೃಷ್ಣ ಅವರು ವ್ಯೂಹದಲ್ಲಿ ಬಂಧಿ ಲೇಖನ ಮಾಲೆ–1 ಅಂತಾ ಹೇಳಿದ್ದಾರೆ. ಅಂದರೆ ಇದು ಇನ್ನೂ ಮುಂದುವರೆಯಬಹುದೇನೋ. ಒಂದು ವಿಭಿನ್ನ, ನೂತನ ಶೈಲಿಯ ಲೇಖನ ಅಥವಾ ಅನುಭವ ಅಂದರೆ ತಪ್ಪಾಗಲಿಕ್ಕಿಲ್ಲ. ಬಹಳ ಸುಂದರವಾದ ಶಬ್ದಗಳನ್ನು ಬಳಸುತ್ತಾರೆ "ಎಲ್ಲ ವಿಘ್ನಗಳನ್ನೂ ದೂರಮಾಡುವ ಅರಿಷ್ಠನೇಮಿಯಂತೆ ಗದರಿಸುವ ಚೇಷ್ಟೆಯಿಂದಲೂ ಕೂಡಿತ್ತು". ಜೈನ ಧರ್ಮದಲ್ಲಿ ಅರಿಷ್ಠನೇಮಿಯನ್ನು ಸಂರಕ್ಷಕನೆಂದು ಕರೆಯುತ್ತಾರೆ. ಸ್ವಾನುಭವದೊಂದಿಗೆ ನಮಗರಿವಿಲ್ಲದಂತೆ ಆಧ್ಯಾತ್ಮದೆಡೆಗೆ ನಮ್ಮನ್ನು ಕರೆದುಕೊಂಡು ಹೋಗುವ ಅವರ ತಂತ್ರಗಾರಿಕೆ ಬಹಳ ಇಷ್ಟವಾಯಿತು. ನಾವು ಎಂದಿಗೂ ಒಂಟಿ ಅಲ್ಲ, ಸದಾ ನಮ್ಮೊಂದಿಗೆ ಒಬ್ಬರು ಇರುತ್ತಾರೆ, ನೆರಳನ್ನು ಹೊರತುಪಡಿಸಿ. ಕನಕದಾಸರು ಬಾಲಕರಾಗಿದ್ದಾಗಲೇ ಹೇಳಿದ್ದರು, ಆ ಭಗವಂತನಿಲ್ಲದ ಜಾಗವೇ ಇಲ್ಲ ಎಂದು. ಹಾಗಾಗಿ ಬಾಳೆಹಣ್ಣು ತಿನ್ನದೇ ಹಾಗೇ ಉಳಿಸಿ ಕೊಂಡಿದ್ದರು. ಲೇಖಕಿ ಓದುಗರನ್ನೂ ತಮ್ಮ ಜೊತೆಜೊತೆಗೆ ವಾಕಿಂಗ್ ಕರೆದುಕೊಂಡು ಹೋಗುತ್ತಾರೆ ಕೊನೆಯವರೆಗೂ ಆತನಾರು ಎನ್ನುವುದನ್ನು ಗುಪ್ತವಾಗಿಟ್ಟು ನಮ್ಮಲ್ಲಿ ಕುತೂಹಲವನ್ನು ಕೆರಳಿಸಿ ಎಷ್ಟು ಸೂಚ್ಯವಾಗಿ ತಿಳಿಸುತ್ತಾರೆ. ಪರಪುರುಷ ದಿನಾ ನನ್ನೊಂದಿಗೆ ಬರೋದನ್ನು ಯಾರಾದ್ರೂ ನೋಡಿದವರು ಏನೆಂದುಕೊಂಡಿರಬಹುದು? ಎನ್ನುವ ಮಧ್ಯಮ ವರ್ಗದ ತಲ್ಲಣವೂ ಸೇರಿದೆ ಮತ್ತು ಯಜಮಾನರನ್ನು ಛೇಡಿಸುವಾಗ ಲಘು ಹಾಸ್ಯವೂ ಮಿಶ್ರಿತವಾಗಿದೆ. ಒಂದು ರೀತಿಯ ಪ್ರೌಢ

ಲೇಖನ. ಸತ್ಯವೇ ದೈವೀ ಸಂಪತ್ತು, ಅಹಂಕಾರ ಪ್ರತಿಷ್ಠೆಗಳಲ್ಲ!"ಎನ್ನುವ ಮೂಲಕ ನಮ್ಮೊಳಗೆ ನೆಲಸಿರುವ ಕೆಟ್ಟ ಅಹಂ ಮೇಲೆ ಗದಾ ಪ್ರಹಾರವನ್ನು ಮಾಡುತ್ತಾರೆ. ಉತ್ತಮ ಲೇಖನ ಮಾಧುರಿ ಅವರೇ. ನಿಮಗೆ ಹೃತ್ಪೂರ್ವಕ ಅಭಿನಂದನೆಗಳು.

## 12. ಎಲ್ ಗಿರಿಜಾ ರಾಜ್ – ಎರಡು ಕವನಗಳು

ಶ್ರೀಮತಿ ಗಿರಿಜಾ ರಾಜ್ ಅವರು ಎರಡು ಕವನಗಳನ್ನು ಪ್ರಸ್ತುತಪಡಿಸಿದರು– 'ಭೂಮಿಗಿಳಿಯಲೇ ಬೇಕು ನೆನಪಿಡು'' ಮತ್ತು 'ಕೊನೆಗಾಲದ ಆಸರೆ''. ಮೊದಲನೆಯ ಕವನದಲ್ಲಿ ನ್ಯೂಟನ್ ತಲೆಯ ಮೇಲೆ ಸೇಬು ಬಿದ್ದು ''first law of motion''ಸೂತ್ರವನ್ನೇ ರಚಿಸಿದಂತೆ ಗಿರಿಜಾ ಅವರು ಅಹಂ ಬಿಟ್ಟು ಭೂಮಿಗಿಳಿಯುವಂತ ಸಂದೇಶವನ್ನು ನೀಡುತ್ತಾರೆ. ಗಾಳಿಪಟದ ಹಾಗೆ ಮನುಷ್ಯನ ಚಲನ–ವಲನ ಮೇಲಕ್ಕೆ ಏರುವುದು ತಪ್ಪಲ್ಲ, ಅದು ಪ್ರಗತಿಯ ಸಂಕೇತ. ಆದರೆ ಅದೇ ವಾಸ್ತವವಲ್ಲ. ವಿಮಾನ ಆಗಲಿ, ವಿಹಂಗಮವಾಗಲಿ ಎಷ್ಟೇ ಎತ್ತರಕ್ಕೆ ಏರಿದರೂ ಭೂಮಿಗಿಳಿದೇ ಇಳಿಯುತ್ತವೆ. ಆ ಸೌಜನ್ಯ ಇದ್ದರೆ ವಾಸ್ತವದ ಅರಿವಿದ್ದವರು ಇದನ್ನು ಗ್ರಹಿಸಿ ಕೆಳಗಿಳಿಯುತ್ತಾರೆ. ಕೆಲವೇ ಸಾಲಿನ ಕವನವಾದರೂ ಎಷ್ಟೊಂದು ಅರ್ಥಗರ್ಭಿತ ಸಾರಗರ್ಭಿತವಾಗಿದೆ– ''ಸೋಲಲ್ಲಿಯೇ ಗೆಲುವು; ನಿಜದ ನಲಿವು, ಸೋತ ನಂತರದ ಜಯವು''. ಹಿಡಿದರೆ ಹಿಡಿ ತುಂಬಾ ಬಿಟ್ಟರೆ ಜಗತುಂಬ ಎನ್ನುವಂತೆ ಜೀವನದ ಪಾಠ ಹೇಳುತ್ತಾ ಕೊನೆಗೆ ಪದ್ಯವು ಆಧ್ಯಾತ್ಮದೆಡೆಗೆ ಸಾಗುತ್ತದೆ, ನಮ್ಮ ಸೂತ್ರ ಅವನ ಕೈಯ್ಯಲ್ಲಿ ಎನ್ನುವಂತೆ.

ಮತ್ತೊಂದು ಕವನ ''ಕೊನೆಗಾಲದ ಆಸರೆ'' – ಇತ್ತೀಚಿನ ಪರಿಸ್ಥಿತಿಯಲ್ಲಿ ವೃದ್ಧಾಪ್ಯವೆಂಬುದು ಶಾಪವಾಗಿ ಪರಿಣಮಿಸುತ್ತಿದೆ. ಹಿಂದೆ ಇದ್ದಂತೆ ಕುಟುಂಬ ಬಾಂಧವ್ಯ ಕಡಿಮೆಯಾಗುತ್ತಿದೆ. ಹಲಸಿನ ಅಂಟಿನಂತಿರುತ್ತದ್ದ ಕುಟುಂಬಗಳು ಕಿತ್ತಳೆ ತೊಳೆಗಳಂತೆ ಬೇರೆ ಬೇರೆಯಾಗುತ್ತಿವೆ. ಹೆಚ್ಚಿನಂಶ ಮಕ್ಕಳು ವಿದೇಶದಲ್ಲಿ ನೆಲೆಸುತ್ತಾರೆ, ಇಲ್ಲವೇ ತಮ್ಮ ವೃದ್ಧ ತಂದೆ ತಾಯಿಗಳಿಗಾಗಿ ವೃದ್ಧಾಶ್ರಮಗಳ ಕದವನ್ನು ತಟ್ಟುತ್ತಾರೆ. ಒಂದು ಚಿಕ್ಕ ಕಥೆ ನನಗೆ ಬಹಳ ಇಷ್ಟವಾಯಿತು. ಒಬ್ಬ ತನ್ನ ವೃದ್ಧ ತಂದೆಯನ್ನು ವೃದ್ಧಾಶ್ರಮಕ್ಕೆ ಸೇರಿಸಲು ಕರೆತಂದಿರುತ್ತಾನೆ. ಎಲ್ಲಾ ರೀತಿಯಿಂದಲೂ ಸುಸಜ್ಜಿತವಾದ ಕೋಣೆಯನ್ನೇ ಕೊಡುವಂತೆ ಕೇಳುತ್ತಾನೆ. ಆಗ ಅಲ್ಲಿದ್ದ ವೃದ್ಧನೊಬ್ಬ ಕೇಳುತ್ತಾನೆ– 'ನಿಮ್ಮ ಮಗನಿಗೆ ಗೊತ್ತೇ, ನೀವು ಪಕ್ಕದ ಅನಾಥಶ್ರಮದಿಂದಲೇ ತೆಗೆದುಕೊಂಡುಹೋಗಿ ಅವನ ಜೀವನ ಕಟ್ಟಿ ಕೊಟ್ಟಿರೆಂದು' ಎಂದು. ಮನಸ್ಸಿಗೆ ತುಂಬಾ ನಾಟುವ ಕವನಗಳು. ''ಮಾನವೀಯತೆ ಮರೆಯಾಗುತ್ತಿದೆ'' ಎನ್ನುವ ಆತಂಕದ ಸಾಮಾಜಿಕ ಸ್ಥಿತಿಯ ಸಹಜ ಚಿತ್ರಣ ಇಲ್ಲಿದೆ. ಇಂದು ನಾವು ನಮ್ಮ ವೃದ್ಧ ತಂದೆ–ತಾಯಿಗಳಿಗೆ ತೋರಿಸುವ ವೃದ್ಧಾಶ್ರಮ ಮುಂದೆ ನಮಗೂ ನಮ್ಮ ಮಕ್ಕಳಿಂದ ಅದೇ ದೊರೆಯಬಹುದೆಂಬ ಸತ್ಯದ ಅರಿವಿದೆ. ಇಂತಹ ಕವನಗಳನ್ನು ನೀಡಿದಂತಹ ಗಿರಿಜಾ ಅವರಿಗೆ ಹಾರ್ದಿಕ ಅಭಿನಂದನೆಗಳು.

## 13. ಸುಜಾತಾ ರವೀಶ್ – 'ಬದುಕು–ಪಗಡೆ' ಕವನ

ಶ್ರೀಮತಿ ಸುಜಾತಾ ರವೀಶ್ ಅವರ ಕವನದ ಶೀರ್ಷಿಕೆ ''ಬದುಕು – ಪಗಡೆ''. ಕವನದುದ್ದಕ್ಕೂ ಬದುಕನ್ನು ಪಗಡೆಯಾಟ ದೊಂದಿಗೆ ಹೋಲಿಸುತ್ತಾರೆ. ಹುಲುಮಾನವರು ಕಾಯಿಗಳು, ದಾಳ ಉರುಳಿಸುವವನು ಅವನು. ನಾವು ಬಯಸುವ ಗರ ಎಲ್ಲಿ ಬೀಳುತ್ತದೆ? ಅವನು ಬೀಳಿಸಿದ ಗರಕ್ಕೆ ಸರಿಯಾಗಿ ನಮ್ಮ ಜೀವನ ರೂಪುಗೊಳ್ಳುತ್ತದೆ. ಜೀವನಪೂರ್ತಿ ಹೋರಾಡಿ ಹಾರಾಡಿ ಕೊನೆಗೆ ಹಣ್ಣಾಗಿ ಮಲಗಿದರೆ ಮಾತ್ರ ನಿಶ್ಚಿಂತೆ ಎನ್ನುವ ಸಾಲು ತುಂಬಾ ಚೆನ್ನಾಗಿದೆ. ಅದುವೇ ಸತ್ಯ. ಬದುಕಿನ ಸಂಕೀರ್ಣ ಭಾವನೆಗಳನ್ನೂ ಹೋಲಿಸುತ್ತಾ ಶ್ರೀಮತಿ ಸುಜಾತ ಅವರು ಕೊನೆಯೆರಡು ಪಂಕ್ತಿಗಳಲ್ಲಿ ಮಹಾಭಾರತ ಯುದ್ಧಕ್ಕೆ ನಾಂದಿ ಹಾಡಿದ ಶಕುನಿ ಉರುಳಿಸಿದ ದಾಳಗಳ ಬಗ್ಗೆ ವರ್ಣಿಸುತ್ತಾರೆ. ಕಡೆಯ ಎರಡು ಸಾಲುಗಳು – 'ಮೋಜಿಗಾಗಿಯೇ ಇರಲಿ ಜೂಜಾಗಿ ಬೇಡ, ಪರಂಪರೆ ಇತಿಹಾಸಗಳ ಮರೆಯುವುದು ಬೇಡ' – ಎನ್ನುವುದರ ಮೂಲಕ ಇತಿಹಾಸವನ್ನು ನೆನಪಿಸುತ್ತಾರೆ. ಉತ್ತಮ ಕವನಕ್ಕಾಗಿ ಸುಜಾತ ಅವರಿಗೆ ಅಭಿನಂದನೆಗಳು.

## 14. ರವಿ ಕುಸಬಿ – 'ಮಹಾಬಲಿಪುರಂ' ಪ್ರವಾಸ ಕಥನ

ಶ್ರೀಯುತ ರವಿ ಕುಸಬಿ ಅವರ ಪ್ರವಾಸ ಕಥನ, ತಮಿಳುನಾಡಿನ ''ಮಹಾಬಲಿಪುರ''ದ ವೈಭವವನ್ನು ಕುರಿತು. ಇದು ಐತಿಹಾಸಿಕ ಸ್ಥಳ. ಪಲ್ಲವ ಶೈಲಿಯ ವಾಸ್ತುಶಿಲ್ಪ, ಸಂಪತ್ತು ಸೌಂದರ್ಯಗಳ ಖನಿ. ಏಕಶಿಲಾ ದೇವಾಲಯಗಳು. ಎಷ್ಟೋ

ವರ್ಷಗಳಿಂದ ಆ ಶಿಲೆಗಳು ಕಥೆ ಹೇಳುತ್ತಾ ನಿಂತಿವೆ. ಲಕ್ಷಾಂತರ ಪ್ರವಾಸಿಗರು ನೋಡಿ ಆನಂದಿಸಿದ್ದಾರೆ. ಆದರೆ ರವಿ ಕುಸಬಿ ಅವರ ವರ್ಣನೆ ಕೇಳಿದ ಓದುಗರಿಗೂ ಮತ್ತೊಮ್ಮೆ ಮಹಾಬಲಿಪುರಂ ನೋಡುವ ಮನಸ್ಸಾಗುವುದಂತೂ ನಿಜ. ಅಷ್ಟು ಸವಿಸ್ತಾರವಾದ, ಇಂಚಿಂಚು ವರ್ಣನೆ ಅದ್ಭುತವಾಗಿದೆ. ಮಹಾಬಲಿಪುರಂ ಶಿಲ್ಪಕಲೆಯನ್ನು ಕರ್ನಾಟಕದ ಬಾದಾಮಿಯಲ್ಲಿ ದೊಡ್ಡ ಬಂಡೆಗಳಲ್ಲಿ ಕೊರೆದು ದೇವಸ್ಥಾನ ಮಾಡಿದಂತೆ ಎಂದು ಹೋಲಿಸುತ್ತಾರೆ. ಸೀ ಶೋರ್ ಟೆಂಪಲ್ (ಕಡಲ ತಡಿ ದೇವಸ್ಥಾನ)ಗಳ ಬಗ್ಗೆ ಮತ್ತು ಮಹಾಬಲಿಪುರಂ ಪಂಚ ರಥಗಳ ಬಗ್ಗೆ ಸಾಕಷ್ಟು ವಿವರಗಳನ್ನು ನೀಡಿದ್ದಾರೆ. ಕೃಷ್ಣನ ಬೆಣ್ಣೆ ಉಂಡೆಯ ವರ್ಣನೆಯಂತೂ ಎಷ್ಟೊಂದು ನೈಜವಾಗಿದೆ ಅಂದರೆ ನಾವು ಒಮ್ಮೆ ಆ ಬಂಡೆಯನ್ನು ಬೀಳಿಸುವ ಪ್ರಯತ್ನವನ್ನೇಕೆ ಮಾಡಬಾರದು ಎಂದೆನಿಸದೇ ಇರಲ್ಲ. ಆ ಶಿಲ್ಪಗಳ ಸೌಂದರ್ಯ, ರವಿ ಕುಸಬಿಯವರ ವರ್ಣನೆಯಿಂದ ಇಮ್ಮಡಿಸಿದೆ ಎಂದರೆ ತಪ್ಪಾಗಲಾರದು. ಪ್ರವಾಸಕ್ಕೆ ಹೋದವರು ಎಲ್ಲವನ್ನೂ ನೋಡಿ ನಂತರ ಮರೆತು ಬಿಡುತ್ತೇವೆ. ಬಹುಶ: ರವಿ ಕುಸಬಿ ಅವರು ಎಲ್ಲವನ್ನೂ ಅಲ್ಲೇ ತಮ್ಮ ಕ್ಯಾಮರಾ ಕಣ್ಣಲ್ಲಿ ಸೆರೆಹಿಡಿದು ಯಥಾವತ್ತಾಗಿ ಪೆನ್ನಿನಿಂದ ಇಳಿಸಿದ್ದಾರೆ. ರವಿ ಕುಸಬಿ ಅವರಿಗೆ ಅಭಿನಂದನೆಗಳು.

## 15. ಗುರುರಾಜ ಶಾಸ್ತ್ರಿ – 'ನಾನು ಮಾಡದ ಪ್ರವಾಸ'

ಶ್ರೀ ಗುರುರಾಜ ಶಾಸ್ತ್ರಿಯವರ 'ಪ್ರವಾಸ ಕಥನ'ದ ಶೀರ್ಷಿಕೆ– "ನಾನು ಮಾಡದ ಪ್ರವಾಸ". ಪ್ರಯಾಸವಿಲ್ಲದೆ ಪ್ರವಾಸ ಕಥನ ಬರೆದಿರುವ ಪಕ್ಷಿ ವೀಕ್ಷಕ ಗುರುರಾಜ ಶಾಸ್ತ್ರಿಗಳಿಗೆ ಅಭಿನಂದನೆಗಳು. ಹೆಸರಿಗೆ ಪ್ರವಾಸ ಕಥನವಾದರೂ ಹಾಸ್ಯ ಲೇಖನವೇ ಇದು. ತಮ್ಮ ಮಿತ್ರರಲ್ಲಿ ತಾವು ಗುರುತಿಸಿರುವ ಗುಣಲಕ್ಷಣಗಳ ವಿಶೇಷಣಗಳನ್ನು, ವಿವರಗಳನ್ನು ತಮ್ಮ ಹಾಸ್ಯಮಿಶ್ರಿತ ಭಾಷೆಯಲ್ಲಿ ಬಹಳ ಚೆನ್ನಾಗಿ ವರ್ಣಿಸಿದ್ದಾರೆ. ರವೀಂದ್ರ ಅವರ ಕಾಫಿ ಪ್ರೀತಿ, ಗುರುಪ್ರಸಾದರ ಸಮಯ ನಿಷ್ಠೆ, ರಾಜನ್ ಅವರ ಸಾಂಪ್ರದಾಯಿಕ ಉಡುಗೆ, ಟಿಪ್ ಟಾಪ್ ಇಸ್ತ್ರಿ ಬಟ್ಟೆಯ ರವಿ ಕುಸಬಿ, ಲೆಕ್ಕವೆಂದರೆ ದು:ಖವಿಲ್ಲದ ಖಜಾಂಚಿ ಜಯರಾಮ– ಹೀಗೆ ಒಟ್ಟು ನವರತ್ನಗಳು ಪ್ರವಾಸಕ್ಕೆ ಹೋರಟರೂ ಒಂಬತ್ತನೇ ರತ್ನ ಸ್ವತ: ತಮಗೆ ಹೋಗಲಾಗಲಿಲ್ಲವಲ್ಲ, ಪುಳಿಯೋಗರೆ ತಪ್ಪಿತಲ್ಲ ಎನ್ನುವ ಬೇಸರದಲ್ಲೂ ಹಾಸ್ಯ ಅದ್ಭುತವಾಗಿ ಹೊರಹೊಮ್ಮಿದೆ. ಕೇಳಿದ ನಮಗೂ ಒಂದು ಪ್ರಶ್ನೆ ಮೂಡುತ್ತದೆ ಸ್ತ್ರೀ ರತ್ನಗಳು ಏನು ಪಾಪ ಮಾಡಿದ್ದರು? ಮೇಲುಕೋಟೆಯ ಚೆಲುವನಾರಾಯಣ ದರ್ಶನ ಕೊಡುತ್ತಿರಲಿಲ್ಲವೇ? ನಮಗೂ ಪುಳಿಯೋಗರೆ, ವೆಣ್ ಪೊಂಗಲ್ ತಪ್ಪಿದುದರ ಬಗ್ಗೆ ಹೊಟ್ಟೆ ಉರಿಯುತ್ತಿದೆ ಶಾಸ್ತ್ರಿಗಳೇ. ಇರಲಿ, ಒಟ್ಟಾರೆ ನಕ್ಕು ನಗಿಸಿದ ಲೇಖನ ಬಹಳ ಸುಂದರವಾಗಿ ಬಂದಿದೆ. ನಿಮಗೆ ಪ್ರವಾಸ ತಪ್ಪಿದ ಬಗ್ಗೆ ನಮಗೆ ವಿಷಾದವಿದೆ. ಜ್ವರವೆಂಬ ಮಾಯೆ ನಿಮ್ಮನ್ನು ಏಕೆ ಆವರಿಸಿತೋ? ಹೋಗದೆಯೇ ಇಷ್ಟು ಚೆನ್ನಾಗಿ ಮೂಡಿಬಂದಿರುವ ಲೇಖನ ಇನ್ನು ಪ್ರವಾಸ ಮಾಡಿದ್ದರೆ ಪ್ರವಾಸ ಕಥನ ಹೇಗಿರುತ್ತಿತ್ತೋ ಎನ್ನುವ ಜಿಜ್ಞಾಸೆಯೂ ಇದೆ. ಮುಂದಿನ ಪ್ರವಾಸಕ್ಕೆ ಶುಭ ಹಾರೈಸುತ್ತಾ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

## 16. ಕೆ.ಎನ್.ಮಹಾಬಲ – 'ಚಿ.ಶ್ರೀನಿವಾಸರಾಜು, ಕವಿ, ಸಾಹಿತಿ, ಬೋಧಕ, ಸಾಹಿತ್ಯ ಪರಿಚಾರಕ'

ಶ್ರೀಯುತ ಕೆ.ಎನ್. ಮಹಾಬಲ ಅವರು, "ಚಿ.ಶ್ರೀನಿವಾಸರಾಜು: ಕವಿ ಸಾಹಿತಿ, ಬೋಧಕ ಹಾಗೂ ಸಾಹಿತ್ಯ ಪರಿಚಾರಕ" ಎಂಬ ವ್ಯಕ್ತಿ ಪರಿಚಯದ ಲೇಖನದ ಮೂಲಕ ಒಬ್ಬ ಕನ್ನಡ ನಾಡು–ನುಡಿಯ ನಿಷ್ಠಾವಂತ ಸೇವಕ ಚಿ.ಶ್ರೀನಿವಾಸರಾಜು ಅವರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಿದ್ದಾರೆ. ಬಹಳ ಮಾಹಿತಿಪೂರ್ಣ ಲೇಖನ. ಭಾರತ ಶಾಸ್ತ್ರ, ಇತಿಹಾಸ, ಹಲವು ಸಾಹಿತ್ಯ ಸಂಸ್ಕೃತಿ ಭಾಷೆಗಳ ಅಧ್ಯಯನ, ಸಾಹಿತ್ಯ ಸೇವೆ, ಸಮಾಜ ಸೇವೆಯ ಪರಿಯನ್ನು ನೋಡಿದರೆ ಎಂತವರೂ ತಲೆದೂಗಲೇಬೇಕು. 'ಅರವತ್ತು ದಾಟಿದ ಮೇಲೆ' ಪುಸ್ತಕದ ಬಗ್ಗೆ ವಿಶೇಷ ಆಸಕ್ತಿ ಮೂಡುತ್ತಿದೆ, ಓದಲೇಬೇಕೆನಿಸುತ್ತಿದೆ. ಬೇರುಗಳೇ ಇಲ್ಲದ ನೆಲದಲ್ಲಿ ಹೊಸದಾಗಿ ಬೀಜ ಬಿತ್ತಿ ಅಲ್ಲಿ ಕನ್ನಡ ಬಾವುಟವನ್ನು ನೆಟ್ಟ ಧೀಮಂತ ವ್ಯಕ್ತಿಯ ಪರಿಚಯ ಮಾಡಿಕೊಟ್ಟ ಮಹಾಬಲ ಅವರ ಲೇಖನ ಅದ್ಭುತವಾಗಿದೆ. ತಮ್ಮ ಸರಳವಾದ ಭಾಷೆಯಲ್ಲಿ ಅವರು ನಡೆದು ಬಂದ ಹಾದಿಯ ಸುದೀರ್ಘ ಚಿತ್ರಣ ಕೇಳುಗರಿಗೆ ಮತ್ತೊಮ್ಮೆ ಮಗದೊಮ್ಮೆ ಶ್ರೀನಿವಾಸರಾಜು ಅವರಿಗೆ ಕೈ ಮುಗಿಯಬೇಕೆನಿಸುತ್ತದೆ. ಮಹಾಬಲ ಅವರಿಗೆ ಅಭಿನಂದನೆಗಳು.

## 17. ಕೆ.ಆರ್. ವೆಂಕಟೇಶ್ (ಮನೋಹಂಸ) – 'ಬಾಲ್ಯ ವಿವಾಹ'

ಶ್ರೀಯುತ ಕೆ.ಆರ್.ವೆಂಕಟೇಶ್ ಅವರು ರಚಿಸಿದ "ಬಾಲ್ಯ ವಿವಾಹ" ಎನ್ನುವ ಕವನ, ಕವನ ಎನ್ನುವುದಕ್ಕಿಂತಲೂ ಬಾಲ್ಯ ವಿವಾಹವನ್ನು ಮಾಡುವವರಿಗೆ ಒಂದು ಬುದ್ಧಿಮಾತು ಎನ್ನುವಂತಿದೆ. ಮಕ್ಕಳ ಹಕ್ಕು, ಮಾನವ ಹಕ್ಕು ಹೋರಾಟವು ಹೆಚ್ಚಿದಂತೆಲ್ಲಾ ಬಾಲ್ಯ ವಿವಾಹಗಳ ಸಂಪ್ರದಾಯವು ಸಾಕಷ್ಟು ಕಡಿಮೆ ಆಗಿದೆ. ಇನ್ನೂ ಅರಳದ ಹೂವಿನ ಸುಕೋಮಲ ಮನಸ್ಸನ್ನು "ಅವಳದು ಮೊಗ್ಗಿನ ಮನಸು ಬೆಳೆಯಲು ಬಿಟ್ಟರೆ ಅದುವೇ ಸೊಗಸು" ಎಂಥ ಶ್ರೇಷ್ಟ ಅರ್ಥವನ್ನು ಹೊಂದಿರುವ ಸಾಲುಗಳು ಇವು. ಕವನ ಕೆಲವೇ ಸಾಲುಗಳಾದರೂ ಪ್ರತಿ ಸಾಲಿನಲ್ಲೂ ಉನ್ನತ ತತ್ವವಿದೆ ಚಿಂತನೆಯಿದೆ, ಭೋದನೆಯಿದೆ. "ಬಾಲಕಿಯ ಸಂಸಾರಕೆ ಬಿಗಿದರೆ ಭರಿಸುವುಳೇನು ಅದರ ಹೊರೆಯ" ಸಾಲುಗಳಲ್ಲಿ ಪುಟ್ಟ ಬಾಲಕಿಯ ಬಗ್ಗೆ ಅತೀವ ಕಾಳಜಿ ಇದೆ. "ಓದು ಬರೆಹ ಕಲಿತು ನೀನು ಬೆಳೆದು ದೊಡ್ಡವಳಾಗವ್ವಾ" ಎನ್ನುವ ಹಾರೈಕೆಯಲ್ಲಿ ಸ್ತ್ರೀಯರ ವಿದ್ಯಾಭ್ಯಾಸ, ಸ್ವಾವಲಂಬನೆ, ದೇಶದ ಪ್ರಗತಿಯ ಛಾಯೆಯಿದೆ. 'ಮನೋಹಂಸ' ಎಂದು ತಮ್ಮನ್ನು ಗುರುತಿಸಿಕೊಳ್ಳುವ ವೆಂಕಟೇಶ್ ಅವರ ಕವನವನ್ನು ಪಠ್ಯಗಳಲ್ಲಿ ಅಳವಡಿಸಬಹುದಾದಷ್ಟು ನೀತಿ ಇದೆ. ಅತ್ಯುತ್ತಮ ಕವನಕ್ಕಾಗಿ ವೆಂಕಟೇಶ್ ಅಭಿನಂದನಾರ್ಹರು.

## 18. ಎಂಎಸ್ಎನ್ – 'ಎಲ್ಲಾ ಉಚಿತ ಆದರೆ ನಷ್ಟ ಖಚಿತ'

ಹಾಸ್ಯ ಸಾಮ್ರಾಟ್ ಶ್ರೀಯುತ ಎಂ.ಎಸ್.ನರಸಿಂಹಮೂರ್ತಿ ಅವರ ವಿಡಂಬನಾತ್ಮಕ ಲೇಖನ "ಎಲ್ಲಾ ಉಚಿತ ಆದರೆ ನಷ್ಟ ಖಚಿತ". ಉಚಿತ ಬಸ್ ಪ್ರಯಾಣದ ವಿಡಂಬನೆ ಸತ್ಯವಾದರೂ ಅವರ ಸಾಮಾಜಿಕ ಕಳಕಳಿ ಇದರಲ್ಲಿ ವ್ಯಕ್ತವಾಗುತ್ತದೆ. ಪ್ರತಿ ಸಂಭಾಷಣೆಯಲ್ಲೂ ಹಾಸ್ಯದ ಪಂಚ್ ಇದ್ದರೂ, ಸೂಕ್ಷ್ಮವಾಗಿ ಗಮನಿಸಿದಾಗ ನಾವು ಭರಿಸುತ್ತಿರುವ ಆದಾಯ ತೆರಿಗೆ, ಒಂದು ಕಡೆ ಬಿಟ್ಟಿ ಭಾಗ್ಯ ಸಿಕ್ಕರೂ ಮತ್ತೊಂದು ಕಡೆ ಎರಡರಷ್ಟು ತೆತ್ತುವ ನಮ್ಮ ಅಸಹಾಯಕತೆ, ಹೀಗೆ ಹಲವಾರು ಆಯಾಮಗಳು ಈ ವಿಡಂಬನೆಯಲ್ಲಿದೆ. ವಿಶ್ವನಂತಹವರನ್ನು ಉಪವಾಸ ಕೆಡವಿ ಸ್ಟೈಲಾಗಿ ಬಸ್ಸು ಹತ್ತಿ, ಆಧಾರ್ ಕಾರ್ಡ್ ಕಂಡಕ್ಟರ್ ಮೂತಿಗಿಟ್ಟು ದೇವಸ್ಥಾನ ತಲುಪಿ, ಬಿಟ್ಟಿ ಕೂಳು ಕತ್ತರಿಸಿ ಬರುತ್ತಿರುವ ಮಹಿಳೆಯರು ಒಮ್ಮೆ ಯೋಚಿಸಬೇಕಾದ ವಿಷಯವೇ. ಇಲ್ಲಿ ವಿಶಾಲು ಸಮಸ್ತ ಕರ್ನಾಟಕದ ಮಹಿಳೆಯರನ್ನು ಪ್ರತಿನಿಧಿಸಿದರೆ ವಿಶ್ವ ಪುರುಷರ ಪ್ರತಿನಿಧಿ. ಪ್ರಸ್ತುತ ಕೌಟುಂಬಿಕ, ಸಾಮಾಜಿಕ ಪರಿಸ್ಥಿತಿ, ಸರ್ಕಾರ ಖಾಲಿ ಮಾಡುತ್ತಿರುವ ಬೊಕ್ಕಸದ ಆರ್ಥಿಕ ಪರಿಸ್ಥಿಯನ್ನು ನೇರವಾಗಿ ಹೇಳದೇ ನವಿರಾದ ಹಾಸ್ಯದಲ್ಲಿ ತಮ್ಮ ಸರಳ ಭಾಷೆಯಲ್ಲಿ ಅತ್ಯಂತ ಪ್ರಭಾವಿಯಾಗಿ ಮನಮುಟ್ಟುವಂತೆ ತಿಳಿಸಿರುತ್ತಾರೆ. "ಎಲ್ಲಿ ಉಚಿತವಾಗಿ ಐಟಂಗಳನ್ನ ಕೊಡ್ತಾರೋ ಅಲ್ಲಿ ಅಪಾಯದ ಗಂಟೆಗಳು ತಮಗೆ ತಾವೇ ಹೊಡೆದುಕೊಳ್ಳುತ್ತೆ" ಎನ್ನುವ ವಾಕ್ಯದಲ್ಲಿ ಒಂದಕ್ಕೊಂದು ಫ್ರೀ ಅಥವಾ ಇದು ಕೊಂಡರೆ ಅದು ಉಚಿತ ಎನ್ನುವುದಕ್ಕೆ ಮರಳಾಗುವವರಿಗೆ ಈ ಲೇಖನ ಒಂದು ಆಲಾರಂ. ಅವರೇ ಎಂದೋ ಹೇಳಿದ್ದ ನೆನಪು– ಉಬ್ಬಲ್ಲಿಯನ್ನು ಮದುವೆಯಾದರೆ ಅವಳ ಸುಂದರಿ ತಂಗಿ ಅಂದರೆ ನಾದಿನಿ ಫ್ರೀ ಅಂತ. ಅಪಾಯಕ್ಕೆ disclaimer ಇದೆ ಇಲ್ಲಿ. ಲೇಖನದ ಕೊನೆಯ ವಾಕ್ಯ– "ನೀ ಹೇಳಿದ ರೀತಿ ಸಹಾಯ ಮಾಡಿದರೆ ಓಟು ಸಿಗಲ್ಲವಲ್ಲ?"ಎಲ್ಲವೂ ನಿಂತಿರುವುದೇ ಓಟಿನ ಮೇಲೆ. ಇದು ಕಟುವಾಸ್ತವ ಎನ್ನುವ ಮಾತು ಮೆಲುಕು ಹಾಕುವಂತಿದೆ. ಸರಳವಾದ ಸಂಭಾಷಣೆಗಳಲ್ಲೇ ಸಮಾಜದ ವೈಪರೀತ್ಯಗಳ ಬಗ್ಗೆ ಕೊಟ್ಟಿರುವ ಚಾಟಿ ಏಟಿನಂಟಿದೆ. ಎಂಎಸ್ಎನ್ ಸಾರ್ ಹಾಸ್ಯದ ನಾಯಕ–ನಾಯಕಿ ವಿಶ್ವ–ವಿಶಾಲೂ ನಮ್ಮನ್ನು ರಂಜಿಸಿದರು. ನಿಮಗೆ ಹಾರ್ದಿಕ ಅಭಿನಂದನೆಗಳು ಸಾರ್.

## 19. ರಾಧಿಕಾ ವಿ. ಗುಜ್ಜರ್ – 'ಕಾಡಿಗೆ' (ಕವನ)

ರಾಧಿಕಾ ಅವರು ಒಳ್ಳೆಯ ಕತೆಗಾರ್ತಿ. ಆದರೆ ಈ ದಿನ ದಾಸೋಹದಲ್ಲಿ "ಕಾಡಿಗೆ" ಎನ್ನುವ ಕವನವನ್ನು ಪ್ರಸ್ತುತಪಡಿಸಿ ತಾನು ಕತೆಗಾರ್ತಿ ಮಾತ್ರವೇ ಅಲ್ಲ, ಅತ್ಯುತ್ತಮ ಕವಯಿತ್ರಿ ಕೂಡ ಎನ್ನುವುದನ್ನು ಸಾಬೀತುಪಡಿಸಿದ್ದಾರೆ. ದೃಷ್ಟಿ ಬೀಳದಿರಲೆಂದು ಮಗುವಿಗೆ ಹಚ್ಚುವ ಕಾಡಿಗೆ, ಸೌಂದರ್ಯಕ್ಕಾಗಿ ಹದಿಹರೆಯದವರು ಹಚ್ಚುವ, ದೃಷ್ಟಿ ತಾಗದಿರಲೆಂದು ವಧು–ವರರಿಗೆ, ಸೀಮಂತಕ್ಕೆ, ಬಾಣಂತಿಗೆ ಹಚ್ಚುವ ಕಾಡಿಗೆ, ಸೌಭಾಗ್ಯಕ್ಕೆ ಗೌರಿ ಬಾಗಿನದ ಕಾಡಿಗೆಯಿಂದ ವಿಠಲನ ಭಕ್ತರಿಂದ ಸಾಗಿ ಕೊನೆಗೆ ವಿಠಲನ ಹಣೆಗೆ ತಿಲಕವನ್ನಿಟ್ಟು ಮುಕ್ತಿ ಮಾರ್ಗವ ತೋರುವ ಆಧ್ಯಾತ್ಮ ಸ್ವರೂಪವನ್ನು ತಾಳುತ್ತದೆ. ಬೂದಿಯ ಹುಡಿಗೆ

ಮೆತ್ತಿಕೊಳ್ಳುವ ಜಿಡ್ಡು ಎನ್ನುವ ಲೌಕಿಕ ಶಬ್ದಗಳು ರಕ್ತ ವಿರಕ್ತಗಳನೆಣಿಸದೆ ಸಲ್ಲಿದೆ ಎನ್ನುವ ಅಲೌಕಿಕ ಪ್ರಭೆಯನ್ನು ಈ ಕಪ್ಪು ಕಾಡಿಗೆಯಲ್ಲಿ ನಿರೂಪಿಸಿದ್ದಾರೆ. ನಿಜಕ್ಕೂ ಶ್ಲಾಘನೀಯ. ಒಂದು ಅತ್ಯುತ್ತಮ ಕವನ. ರಾಧಿಕಾ ಅವರಿಗೆ ಹಾರ್ದಿಕ ಅಭಿನಂದನೆಗಳು.

ಇಲ್ಲಿಗೆ ಈದಿನದ ದಾಸೋಹದ ಲೇಖನಗಳ ಸಿಂಹಾವಲೋಕನ ಮುಕ್ತಾಯವಾಗುತ್ತದೆ. ಈ ಅವಕಾಶವನ್ನು ನೀಡಿದ ಸಂಚಾಲಕರಾದ ಶ್ರೀ ಮಹಾಬಲ ಅವರಿಗೆ ನಾನು ಹೃತ್ಪೂರ್ವಕವಾದ ಧನ್ಯವಾದಗಳನ್ನು ತಿಳಿಸುತ್ತೇನೆ. ಎಲ್ಲ ಲೇಖಕರಿಗೆ ಮತ್ತೊಮ್ಮೆ ಅಭಿನಂದನೆಗಳು ಮತ್ತು ಶುಭಹಾರೈಕೆಗಳು. ಮುಂಬರುವ ಮಕರ ಸಂಕ್ರಾಂತಿಯ ಶುಭಾಶಯಗಳು. ನಮಸ್ಕಾರ.

***

## ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

**ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061**

**ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com**

**ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ**

**ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com**

**ಸಾಹಿತ್ಯ ದಾಸೋಹ 233 ನಡೆದ ದಿನಾಂಕ: 11 ಜನವರಿ 2025**

**ಸಂಚಿಕೆಯ ಬಿಡುಗಡೆ ದಿನಾಂಕ: 02 ಮಾರ್ಚ್ 2025 – ಭಾನುವಾರ**

**(ವಿವಿಧ ಲೇಖನಗಳಲ್ಲಿ ಬಳಸಿರುವ ಚಿತ್ರಗಳು – ಕೃಪೆ ಆಯಾ ಲೇಖಕರು ಮತ್ತು ಅಂತರ್ಜಾಲ)**